ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 13

ಮಾರ್ಚ್ 30, 2008

ಕನ್ನಡ ವಾರಪತ್ರಿಕೆ

ರೂ. 5/-



ಲಾಸಾ: ಹಿಂಸಾಚಾರ

ಒಲಂಪಿಕ್ಸ್ ಹಾಳುಗೆಡವರು ದಲೈ ಲಾಮಾ ಕುತಂತ್ರಗಳು



ಗದಗ



ತ್ರಿಶೂಲ ಹಂಚಿಕೆಯೂ ನಿಷೇದಾಜ್ಞೆ ಎಂಬ ನಾಟಕವೂ

ಗಡಿವಿವಾದದ ಕೆಣಕು ಮತಗಳಿಕೆಯ ತಿಣುಕು



ಮಲೆನಾಡಿನಲ್ಲಿ ಮಾಫಿಯಾ ರಕ್ತದೋಕುಳಿ



ಮಂಗಳೂರು ಮಹಾನಗರ ಪಾಲಿಕೆ ಹಗರಣಗಳ ತಾಣ

ಈ ಸಂಗತಿ

ದಲಿತರ ಸ್ಥಿತಿ - ಹೋರಾಟದ ಹೆಜ್ಜೆಗಳು

ಕರ್ನಾಟಕದಲ್ಲಿ ಬಹುತೇಕವಾಗಿ ಕಾಂಗ್ರೆಸ್ ಪಕ್ಷವೇ ನಿರಂತರ ಆಳ್ವಿಕೆ ನಡೆಸುತ್ತಾ ಬಂದಿದೆ. ಕೆಲಕಾಲ ಜನತಾಪಕ್ಷ-ಜನತಾದಳ ಪಕ್ಷಗಳೂ ಆಡಳಿತ ನಡೆಸಿವೆ. ಇತ್ತೀಚಿಗೆ ಭಾರತೀಯ ಜನತಾ ಪಕ್ಷಕ್ಕೂ ರಾಜ್ಯದಲ್ಲಿ ಅಧಿಕಾರ ನಡೆಸಲು ಅವಕಾಶ ಸಿಕ್ಕಿತ್ತು. ಈ ಎಲ್ಲ ಪಕ್ಷಗಳು ಸಮಾಜದ ಮೇಲ್ವರ್ಗ, ಮೇಲ್ಜಾತಿಗಳ ಪಕ್ಷಪಾತಿಗಳಾಗಿವೆ. ದಲಿತ ಮತ್ತು ಇತರ ಶೋಷಿತ ವರ್ಗಗಳ ಬಗ್ಗೆ ಅವುಗಳಿಗೆ ಎಳ್ಳಷ್ಟೂ ಕಾಳಜಿ ಇಲ್ಲ, ಕಾಂಗ್ರೆಸ್ ಪಕ್ಷವಂತೂ ದಲಿತರನ್ನು ತನ್ನ 'ಮತಬ್ಯಾಂಕ್' ಮಾಡಲು ಪ್ರಯತ್ನಿಸಿತೇ ಹೊರತು ಅವರ ನೈಜ ಅಭಿವೃದ್ಧಿ ಬಗ್ಗೆ ಕಾಳಜಿವಹಿಸಲಿಲ್ಲ. ಹಿಂದುಳಿದ ವರ್ಗಗಳ ಧೀಮಂತ ನಾಯಕ ದೇವರಾಜ ಅರಸ ಅವರ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಭೂ ಸುಧಾರಣೆಗಳನ್ನು ಜಾರಿಗೆ ತಂದರೂ ಅದನ್ನು ಸಮಗ್ರವಾಗಿ ಜಾರಿಗೆ ತರಲಿಲ್ಲ. ಹಾಗೇನಾದರೂ ಆಗಿದ್ದರೆ ಇಷ್ಟೊಂದು ದಲಿತ ಕುಟುಂಬಗಳು ಭೂರಹಿತರಾಗಿ, ಕೂಲಿನಾಲಿ ಮಾಡಿಕೊಂಡು ಜೀವನ ನಿರ್ವಹಿಸುವ ಪರಿಸ್ಥಿತಿ ಇರುತ್ತಿರಲಿಲ್ಲ. ಇನ್ನುಳಿದ ಪಕ್ಷಗಳು ಮೇಲ್ಜಾತಿ ಭೂಮಾಲಿಕ ವರ್ಗಗಳ ಪಕ್ಷಗಳಾಗಿದ್ದು ಜಾತಿ ತಾರತಮ್ಯವನ್ನು ತೊಡೆದುಹಾಕಬೇಕೆಂಬ ಆಸಕ್ತಿ ಅವುಗಳಿಗೆ ಇಲ್ಲವೆ ಇಲ್ಲ. ಬಿಜೆಪಿಯಂತೂ ಮನುವಾದಿ ಪಕ್ಷವಾಗಿದ್ದು ಅದರ 20 ತಿಂಗಳ ಜಂಟಿ ಆಳ್ವಿಕೆಯಲ್ಲಿ ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾದವು.

ಜಾತಿ ಅಸ್ಪಶ್ಯತೆ ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ ದೊಡ್ಡ ಅನಿಷ್ಟವಾಗಿದೆ. ನಮ್ಮ ಹಳ್ಳಿಗಳಲ್ಲಿ ಸಾರ್ವಜನಿಕ ಕೆರೆ-ಬಾವಿಗಳಿಗೆ, ಹೊಟೇಲುಗಳಿಗೆ, ಕ್ಷೌರದ ಅಂಗಡಿಗಳಿಗೆ, ದೇವಸ್ಥಾನಗಳಿಗೆ ಪ್ರವೇಶ ನಿರಾಕರಿಸುವಂತಹ ಅನೇಕ ಅಸ್ಪ?ಶ್ಯತಾ ಆಚರಣೆಗಳು ಜೀವಂತವಾಗಿವೆ. ನಗರಗಳಲ್ಲಿ ಬಾಡಿಗೆಗೆ ಮನೆಗಳನ್ನು ಕೊಡುವಾಗ ತಾರತಮ್ಯ ಮಾಡಲಾಗುತ್ತದೆ. ಇಂತಹ ಕಾನೂನು ಬಾಹಿರ ಆಚರಣೆಗಳಿಂದಾಗಿ ನಮ್ಮ ದಲಿತ ಯುವಪೀಳಿಗೆ ತೀವ್ರವಾದ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದೆ.

ಕೇಂದ್ರ/ರಾಜ್ಯ ಸರ್ಕಾರಗಳು ಅಪ್ಪಿಕೊಂಡಿರುವ ಉದಾರೀಕರಣ ಜಾಗತೀಕರಣ ನೀತಿಗಳ ಪರಿಣಾಮವಾಗಿ ದಲಿತರ ಪರಿಸ್ಥಿತಿ ಇನ್ನೂ ಗಂಭೀರವಾಗುತ್ತಿದೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೋರಾಟ ಮಾಡಿ ಗಳಿಸಿದ 'ಮೀಸಲಾತಿ' ಎಂಬ ದಲಿತರ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆ.

ಯಾವುದೇ ಜನಪರ ಚಳುವಳಿಗೆ ದಲಿತರ ವಿಮೋಚನೆಯ ಬಗ್ಗೆ ಒಂದು ಸ್ಪಷ್ಟವಾದ ಅಂದಾಜು ಬೇಕಾಗುತ್ತದೆ ಹಾಗೂ ಅದು ದಲಿತರ, ದುಡಿಯುವ ಜನರ ಪಕ್ಷಪಾತಿಯಾಗಿರಬೇಕಾಗುತ್ತದೆ. ದಲಿತರು, ಆದಿವಾಸಿಗಳು ದುಡಿಯುವ ಜನರ ಅತಿ ಮುಖ್ಯ ಭಾಗವಾಗವೇ ಆಗಿರುತ್ತಾರೆ. ದಲಿತರಿಗೆ ಭೂಮಿ, ವಾಸಕ್ಕೆ ಮನೆ, ಉದ್ಯೋಗ, ಶಿಕ್ಷಣ, ಆರೋಗ್ಯ ಮೊದಲಾದ ಹಕ್ಕುಗಳನ್ನು ಅನುಭವಿಸಲು ಸಾಧ್ಯವಾಗಬೇಕು. ಆದರ ಜೊತೆಯಲ್ಲೇ, ಉಳಿದ ಜಾತಿಗಳ ಜನಸಮೂಹಗಳೊಂದಿಗೆ ಸಮಾನವಾದ ಸ್ಥಾನಮಾನ ದೊರೆಯಬೇಕು. ಇದುವೇ ಸಾಮಾಜಿಕ ನ್ಯಾಯ. ಸಾಮಾಜಿಕ ನ್ಯಾಯದ ಹೋರಾಟದಲ್ಲಿ ನಾವು ಗೆಲ್ಲಬೇಕಾದರೆ ಸಾಮಾಜಿಕ ನ್ಯಾಯದ ಪರವಾಗಿರುವವರೆಲ್ಲರು ಒಟ್ಟಾಗಿ ಹೋರಾಡಬೇಕು. ದಲಿತರು ಮತ್ತು ದಲಿತರಲ್ಲದವರು ಒಟ್ಟಾಗಿ ಹೋರಾಡಿದರೆ ಮಾತ್ರ ನಾವು ಈ ಹೋರಾಟದಲ್ಲಿ ಗೆಲ್ಲಬಹುದು.

ದಲಿತರು ತಮ್ಮ ನ್ಯಾಯ ಸಮ್ಮತವಾದ ಬೇಡಿಕೆಗಳಿಗಾಗಿ ನಡೆಸುವ ಎಲ್ಲ ಹೋರಾಟಗಳನ್ನು ಜನಪರ ಚಳುವಳಿಗಳು ಬೆಂಬಲಿಸಬೇಕಿದೆ. ದಲಿತರ ಮೇಲೆ ದೌರ್ಜನ್ಯಗಳು ನಡೆಯುವುದನ್ನು ತಡೆಯಲು ಮತ್ತು ದೌರ್ಜನ್ಯಗಳನ್ನು ನಡೆಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರಗಿಸುವಂತೆ ಒತ್ತಾಯಿಸಬೇಕಿದೆ.

ಅದೇ ಸಮಯದಲ್ಲಿ ದುಡಿಯುವ ಜನ ಸಮೂಹಗಳು ತಮ್ಮ ದೈನಂದಿನ ಬದುಕಿನ ಪ್ರಶ್ನೆಗಳಿಗಾಗಿ ನಡೆಸುತ್ತಿರುವ ಹೋರಾಟಗಳಲ್ಲಿಯೂ ನಮ್ಮ ದಲಿತ ಬಂಧುಗಳು ಭಾಗವಹಿಸಬೇಕಾದ ಅಗತ್ಯವಿದೆ. ಅಗತ್ಯ ವಸ್ತುಗಳ ಬೆಲೆಏರಿಕೆ ಇಂದು ದುಡಿಯುವ ಜನತೆಯ ಮುಖ್ಯ ಸಮಸ್ಯೆಯಾಗಿದೆ. ಬಿಪಿಎಲ್ ರೇಷನ್ ಕಾರ್ಡ್ ಮತ್ತು ಸಮರ್ಪಕವಾದ ರೇಷನ್ ವಿತರಣೆ, ಮನೆ/ನಿವೇಶನ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿ, ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ, ಸಂಘಟಿತ ವಲಯದ ಕಾರ್ಮಿಕರಿಗೆ/ನೌಕರರಿಗೆ ತಿಂಗಳಿಗೆ ರೂ.4080 ಕನಿಷ್ಠ ಕೂಲಿ, ಭವಿಷ್ಯ ನಿಧಿ ಮುಂತಾದ ಸಾಮಾಜಿಕ ಭದ್ರತಾ ಸೌಲಭ್ಯಗಳ ವಿಸ್ತರಣೆ, ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸುವುದು, ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರಿಗೆ ಕಾನೂನುಬದ್ಧ ಪರಿಹಾರ, ಕೃಷಿ ಕೂಲಿಕಾರರ ಸಮಗ್ರ ಕೇಂದ್ರೀಯ ಶಾಸನ ದಲಿತರ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಮೊದಲಾದ ಪ್ರಶ್ನೆಗಳಿಗಾಗಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ರಾಜ್ಯಾದ್ಯಂತ ಇದೇ ಮಾರ್ಚ್ 10 ರಿಂದ 24 ರವರೆಗೆ ಪ್ರಚಾರಾಂದೋಲನ ನಡೆಸುತ್ತಿದೆ. ಕಾರ್ಯಕ್ರಮದ ಅಂಗವಾಗಿ ಜಾಥಾಗಳನ್ನು, ಪಾದಯಾತ್ರೆಗಳನ್ನು, ಮನೆಮನೆಗಳಿಗೆ ಕರಪತ್ರ ವಿತರಿಸುವುದನ್ನು ಹಮ್ಮಿಕೊಳ್ಳಲಾಗಿದೆ. ನಂತರ ನಿರ್ದಿಷ್ಟ ಪ್ರಶ್ನೆಗಳಿಗಾಗಿ ಜಿಲ್ಲಾ/ತಾಲ್ಲೂಕಾ ಮಟ್ಟದಲ್ಲಿ ಹೋರಾಟಗಳನ್ನು ನಡೆಸಲು ನಿರ್ಧರಿಸಲಾಗಿದೆ.

ದಲಿತ ಮಾನವ ಅಭಿವೃದ್ಧಿ ವರದಿ-ಅಂಕಿ ಸಂಖ್ಯೆ

ಸಾಕ್ಷರತೆ	ಗಂಡು	ಹೆಣ್ಣು
ಗ್ರಾಮೀಣ	58.71	38.56
ನಗರ	78.32	59.88
ಒಟ್ಟು	68.75	41.07
ಸಾಮಾನ್ಯ		
	70.45	48.01
	86.66	74.17
	76.10	56.87
ಲಿಂಗ ಅಭಿವೃದ್ಧಿ		
	0.564	0.637
ವಾಸ		
ನಗರ	25007	37044
ಗ್ರಾಮೀಣ	74.93	62.56


ಆದಾಯ ಮೂಲ
20.7 (ಎಸ್.ಸಿ) 38.6 (ಅಂ.ನಗರ)
7.9 (ಎಸ್‌ಟಿ) 32.8 (ಇತರರು)
ಕೃಷಿ ಆದಾಯ
15.4 (ಎಸ್‌ಸಿ) 40.6 (ಹಿಂ.ವರ್ಗ)
7.7 (ಎಸ್‌ಟಿ) 36.3 (ಇತರರು)
ಮಾಸಿಕ ವೆಚ್ಚ
ರೂ.419(ಎಸ್‌ಸಿ)
ರೂ.404 (ಎಸ್‌ಟಿ) ರೂ.507
ಹಣ್ಣುಗಳ ಬಳಕೆ

(ದಲಿತ ಮಹಿಳೆಯರು)
ಶೇ. 39.8 (ಸಾಮಾನ್ಯ ಮಹಿಳೆಯರು) ಶೇ. 62.2
ಹಾಲು ಮೊಸರು
ಶೇ. 55.7 ಶೇ.83.1
ತಲಾವಾರು ಆಂತರಿಕ ಉತ್ಪನ್ನ
1719 (ಪಿಪಿಪಿಎಸ್) 2854 (ಪಿಪಿಪಿಎಸ್)
ಆರೋಗ್ಯ ಸೂಚ್ಯಂಕ
ಎಸ್‌ಸಿ/ಎಸ್‌ಟಿ 0.615 ಸಾಮಾನ್ಯ 0.679
ಶಿಕ್ಷಣ ಸೂಚ್ಯಂಕ0.622 0.704
ಆದಾಯ 0.454 0.526

ಮಾನವ ಅಭಿವೃದ್ಧಿ ವರದಿಯಲ್ಲಿ ಹೇಳಿರುವ ಅಂಶಗಳು: ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಾನವ ಅಭಿವೃದ್ಧಿಸ್ಥಿತಿಯು ರಾಜ್ಯದ ಉಳಿದ ಜನ ವರ್ಗಕ್ಕಿಂತ ಒಂದು ದಶಕದಷ್ಟು ಹೊಂದಿದೆ. ಅಭಿವೃದ್ಧಿಯಲ್ಲಿ ಇಷ್ಟೊಂದು ಹಿಂದಿಳಿದಿರುವ ಅಂಶವು ಕಳವಳ ಪಡುವಂತಹ ಸಂಗತಿಯಾಗಿದೆ.

1991-2001ರ ದಶಕದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಸಾಕ್ಷರತಾ ದರಗಳು ಗಣನೀಯವಾಗಿ ಸುಧಾರಣೆಗೊಂಡಿದ್ದರೂ ಸಹ ಅವು. ಉಳಿದ ಜನಸಂಖ್ಯೆಯನ್ನು ಇನ್ನು ಮಟ್ಟ ಬೇಕಿದೆ. 2001ರಲ್ಲಿ ಪರಿಶಿಷ್ಟ ಜಾತಿಗಳ ಸಾಕ್ಷರತಾ ದರವು (52087) 1991 ರ ಒಟ್ಟು ಜನಸಂಖ್ಯೆ ಸಾಕ್ಷರತಾ ದರ (56.04)ಕ್ಕಿಂತ ದಶಕದಷ್ಟು ಹಿಂದೆ ಹಾಕಿದೆ.





ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ

ಹಿಂದಿನ ಸಂಚಿಕೆಯಿಂದ	ರೂ. 22,37,099.00
ವಿಮಾ ಸಂಗಾತಿಗಳು, ರಾಣೆಬೆನ್ನೂರು	1550.00
ಶ್ರೀ ಎಸ್.ಆರ್ ಕಾಶೆವಾಡಿ, ಜಮಖಂಡಿ	500.00
ಶ್ರೀಮತಿ ಸುಮತಿ ಕುಲಕರ್ಣಿ, ಧಾರವಾಡ	500.00
ಶ್ರೀ ಪ್ರಕಾಶ್ ಮೈಲಾಯ, ಗದಗ	500.00
ವಿಮಾ ಸಂಗಾತಿಗಳು, ಬೆಳಗಾವಿ	1950.00
ವಿಮಾ ಸಂಗಾತಿಗಳು, ರಾಯಚೂರು	10,300.00
ಪ್ರಾಂಜಲ.ಎಸ್.ಜಿ, ಬೆಂಗಳೂರು	100.00
ಯಮುನಾ ಮತ್ತು ವಿಠ್ಠಲ ಭಂಡಾರಿ (ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿ ಮೂಲಕ)	1000.00
ಎಲ್.ಎಸ್.ನಾಯಕ್, ಸೌದತ್ತಿ	
ಅಂಗನವಾಡಿ ನೌಕರರ ಶಾಖೆ, ಗುಲಬರ್ಗಾ ವೀರಮ್ಮ ಬಂಗಾರ ಕಿರಣಗಿ ಮೂಲಕ ಸಂಗ್ರಹ	500.00
ಒಟ್ಟು	500.00
	ರೂ. 22,54,499.00

www.janashakthi.org

ಅಂತರ್ಜಾಲ ಆವೃತ್ತಿ ಉದ್ಘಾಟನಾ ಸಮಾರಂಭ

ಮಾರ್ಚ್ 27, 2008 ಸಂಜೆ 4 ಗಂಟೆಗೆ
ಸೆಂಟ್ರಲ್ ಸೆನೆಟ್ ಹಾಲ್, ಬೆಂಗಳೂರು

ಉದ್ಘಾಟನೆ :

ಡಾ. ಬರಗೂರು ರಾಮಚಂದ್ರಪ್ಪ ಖ್ಯಾತ ಬಂಡಾಯ ಸಾಹಿತಿಗಳು

ಜಿ.ಎನ್. ಮೋಹನ್ ಮುಖ್ಯಸ್ಥರು, ಸುದ್ದಿ ವಿಭಾಗ, ಈ ಟಿ.ವಿ. ಕನ್ನಡ ಛಾನಲ್

ಪಿ. ಸಾಯಿನಾಥ್ ಖ್ಯಾತ ಪತ್ರಕರ್ತರು, ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತರು

ಮಾಧ್ಯಮದ ಕುರಿತು
ಮಾತನಾಡುವರು

ಎಸ್.ವೈ.ಗುರುಶಾಂತ್
ಸಂಪಾದಕರು, ಜನಶಕ್ತಿ ಕನ್ನಡ ವಾರಪತ್ರಿಕೆ

ತಮಗೆ ಆದರದ ಸ್ವಾಗತ

js_weekly@yahoo.com
9448230114, 9448505789

ಸಂಪಾದಕೀಯ

ಬೆದರಿಕೆಯೇ ಪ್ರಣಾಳಿಕೆ

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 'ಗುಜರಾತ್‌ನ ಮಾದರಿಯನ್ನೇ' ತನ್ನ ರಣತಂತ್ರವನ್ನಾಗಿ ಮಾಡಿಕೊಳ್ಳುವುದಾಗಿ ಬಿಜೆಪಿ ಪ್ರಕಟಿಸಿರುವುದು ಅತ್ಯಂತ ಆತಂಕದ ಸಂಗತಿಯಾಗಿದೆ. ಹುಬ್ಬಳ್ಳಿಯಲ್ಲಿ ನಡೆದ ರೈತರ ಮತಕ್ರೋಢೀಕರಣ ಮೇಳದಲ್ಲಿ ಡೋಲು ಬಾರಿಸಿ ಮಾತನಾಡಿದ ನರೇಂದ್ರಮೋದಿ ಗುಜರಾತ್‌ನ ಮಾದರಿ ಎಂತಹುದು ಎಂದೂ ಪ್ರಕಟಿಸಿದ್ದಾರೆ. ಸ್ಥಿರ-ಸುಭದ್ರ ಸರ್ಕಾರ, ಕೃಷಿ ಸಮೃದ್ಧಿ, ವಿದ್ಯುತ್ ಕ್ರಾಂತಿ ಮತ್ತು ಭಯೋತ್ಪಾದನೆಯ ಹುಟ್ಟಡಗಿಸುವುದೇ ಗುಜರಾತ್ ಮಾದರಿಯೆಂದು ವ್ಯಾಖ್ಯಾನಿಸಿರುವುದು 'ಗುಜರಾತ್‌ನ ನಿಜ ಮಾದರಿ'ಯನ್ನು ನೋಡಿದವರು ಬೆಚ್ಚಿ ಬೀಳಿಸುವಂತಹದ್ದೇ ಆಗಿದೆ. ಈ ಹಿಂದಿನಿಂದಲೂ ಕರ್ನಾಟಕವನ್ನು ಇಂತಹದ್ದೇ ಮಾದರಿಯ ರಾಜ್ಯವನ್ನಾಗಿ ಪರಿವರ್ತಿಸುವ ರಾಜ್ಯದ ಬಿಜೆಪಿ ನಾಯಕರ ಘೋಷಣೆಗಳು ಹುಟ್ಟಿಸಿದ ತಲ್ಲಣಗಳಿಗೆ ಗಿಲೀಟು ಹಿಡಿಯುವ ಯತ್ನ ಸತತವಾಗಿ ನಡೆದಿದೆ. ಮೋದಿ ಮಾದರಿಗೆ ನಿರಂತರವಾಗಿ ವಿರೋಧ-ಪ್ರತಿರೋಧ ಬೆಳೆದರೂ ಅದನ್ನು ನಿರ್ಲಕ್ಷಿಸಿ ಹೊರಟಿರುವ ಬಿಜೆಪಿ - ಸಂಘ ಪರಿವಾರದ ಕ್ರಮಗಳು ಅವರು ಗುಪ್ತ ಅಜೆಂಡಾಕ್ಕೆ ಬದ್ಧವಾಗಿರುವುದನ್ನೇ ತೋರಿಸುತ್ತದೆ. ಹೀಗಾಗಿ ಅದನ್ನೇ ತನ್ನ ಚುನಾವಣಾ ಪ್ರಣಾಳಿಕೆಯನ್ನಾಗಿ ಬಿಜೆಪಿ ಈಗ ಪ್ರಕಟಿಸಿದೆ. ಮೋದಿ ಮತ್ತವರ ಪರಿವಾರ ಅದೆಷ್ಟೇ ಅಲಂಕಾರಿಕ ಮಾತುಗಳಿಂದ ಆ 'ಮಾದರಿ'ಯನ್ನು ಸಮರ್ಥಿಸಿಕೊಂಡರೂ ಗುಜರಾತ್‌ನದು ಜನಾಂಗೀಯ ಹತ್ಯಾಕಾಂಡದ ಕೋಮುವಾದಿ ಫ್ಯಾಸಿಸ್ಟ್ ಮಾದರಿಯಾಗಿದೆ. ಭಾರತದ ಅಂತಃಸತ್ವವಾಗಿರುವ ಧರ್ಮನಿರಪೇಕ್ಷತೆ(ಸೆಕ್ಯುಲರಿಸಂ), ಪ್ರಜಾತಂತ್ರಕ್ಕೆ ಈ ಮಾದರಿ ಮಾರಕವಾದುದು. ಭಾರತದಲ್ಲಿ ಈ ಮೌಲ್ಯಗಳ ಉಳಿವಿಲ್ಲದೇ, ಅವುಗಳನ್ನು ನಾಶಗೊಳಿಸುವ ಮೂಲಕ ಅಭಿವೃದ್ಧಿ ಸಾಧಿಸಲಾಗುವುದೆಂಬುದು 'ಅಭಿವೃದ್ಧಿ'ಯಾದೀತೆ? ಈ ಬಗ್ಗೆ ಹೊರಬಂದಿರುವ ಹಲವಾರು ಮಾಹಿತಿಗಳು, ವಿಶ್ಲೇಷಣೆಗಳು ಅಲ್ಲಿ ಗ್ರಾಮೀಣ ಬಡತನದ ಹೆಚ್ಚಳ, ನಿರುದ್ಯೋಗ ಸ್ಫೋಟ, ಕೃಷಿಯ ದಿವಾಳಿತನವನ್ನು ಬಯಲಿಗಿಟ್ಟಿದೆ.


ವಿದ್ಯುತ್ ಖಾಸಗೀಕರಣ- ವ್ಯಾಪಾರೀಕರಣದಿಂದಾಗಿ ದುಬಾರಿ ದರಗಳು, ಸುಧಾರಣೆ ಹೆಸರಿನಲ್ಲಿ ತಂದ ಕ್ರಮಗಳು ಲಕ್ಷಾಂತರ ರೈತರನ್ನು ವಿದ್ಯುತ್ ಕಳ್ಳರೆಂದು ಹಣೆಪಟ್ಟಿ ಹಚ್ಚಿ ಜೈಲಿಗೆ ತಳ್ಳಿರುವ ಧಾರುಣ ಪ್ರಕರಣಗಳೂ ವರದಿಯಾಗಿವೆ. ಸಾಮಾನ್ಯರ ಆದಾಯ ಕುಸಿತ, ದಿವಾಳಿತನಗಳೆದುರು ಅಲ್ಲಿ ಅಭಿವೃದ್ಧಿಯೆಂಬುದು ವಿದೇಶಗಳ, ದೇಶದ ಉದ್ದಿಮೆಪತಿಗಳಿಗೆ ಎಂಬುದೂ, ಅವರ ಆದಾಯ - ಮನಸೋ ಇಚ್ಛೆ ಆಸ್ತಿ ಗಳಿಕೆಗಳೇ ಗುಜರಾತ್‌ನ ಅಭಿವೃದ್ಧಿ ಎನ್ನುವುದೇ ಮೋದಿ ಮಾದರಿಯಾಗಿರುವಾಗ ಈ ಮಾದರಿ ಕರ್ನಾಟಕದಲ್ಲಿ ಬೇಕಿಲ್ಲ ಎಂದೇ ಧಿಕ್ಕರಿಸಬೇಕಾಗಿದೆ.

ಈಗಲೂ 2002 ರಲ್ಲಿನ ಗೋದ್ರಾ ಘಟನೆ ನೆಪದಲ್ಲಿ ಸಂಘ ಪರಿವಾರದ ಧಾಳಿಖೋರರೊಂದಿಗೆ ಮೋದಿ ಸರ್ಕಾರದ ಆಡಳಿತಯಂತ್ರ ಜನರನ್ನು ರಕ್ಷಿಸದೇ ಜೊತೆಗೂಡಿತು. ಅಲ್ಪಸಂಖ್ಯಾತರ ಮೇಲೆ ನಡೆದ ಅಮಾನುಷ ಹತ್ಯಾಕಾಂಡದಲ್ಲಿ ನೊಂದು ಬೆಂದವರಿಗೆ ಇದುವರೆಗೂ ನ್ಯಾಯ ಸಿಗಲಿಲ್ಲ. ಸಿಗುವ ಕಿಂಚಿತ್ತೂ ಭರವಸೆಯೂ ಇಲ್ಲ. ಅಲ್ಪಸಂಖ್ಯಾತರು ಎರಡನೆಯ ಅಥವಾ ಮೂರನೆಯ ದರ್ಜೆಯ ನಾಗರೀಕರು ಎಂಬ ಆರ್.ಎಸ್.ಎಸ್. ನ ವ್ಯಾಖ್ಯಾನವನ್ನೇ ಪಾಲಿಸುತ್ತಿರುವ ಮೋದಿ ರಾಜ್ಯಭಾರದಲ್ಲಿ ನ್ಯಾಯ ಸಿಗುವ ಸಂಭವವೇ ಇಲ್ಲ. 'ಇಂತಹ ಗಾಯಗಳು ಮಾಯುತ್ತಿವೆ, ಅದನ್ನು ಕೆದಕಬೇಡಿ' ಎಂದೂ ಮೋದಿ ಹೇಳಿ ತಿಪ್ಪೇಸಾರಿಸಿ ನ್ಯಾಯದ ಕೇಳಿಕೆಯ ದನಿಯನ್ನೇ ಅಡಗಿಸುವ ಮಾತನ್ನಾಡುತ್ತಿದ್ದಾರೆ.

ಗರ್ಭಿಣಿ ಮಹಿಳೆಯ ಹೊಟ್ಟೆ ಬಗೆದ ಇಂತಹ ಮೋದಿಯ ಮಾದರಿಯನ್ನೇ ರಾಜ್ಯದ ಬಿಜೆಪಿ ಮೆರೆಸುತ್ತಿದೆ. ಬಾಬುಬುಡನ್‌ಗಿರಿಯಲ್ಲಿ, ದ.ಕನ್ನಡ, ಕರಾವಳಿಗಳಲ್ಲಿನ ಕೋಮುಗಲಭೆಗಳ ಸಂದರ್ಭದಲ್ಲಿ ಗುಜರಾತ್‌ನ ಮಾದರಿ ಅನುಸರಿಸಲಾಗುವುದು ಎಂಬುದು ರಾಜ್ಯದ ಜನರಿಗೆ ಸುರಕ್ಷತೆಯ ಸೃಷ್ಟಿ ಎಂಬುದಕ್ಕಿಂತ ಬೆದರಿಕೆ, ಭಯೋತ್ಪಾದನೆಯೇ ಆಗಿದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ರಾಷ್ಟ್ರಮಟ್ಟದಲ್ಲಿ ಆರ್‌ಎಸ್‌ಎಸ್ - ಬಿಜೆಪಿಗಳು 'ಹಿಂದುತ್ವ'ವನ್ನೇ ತಮ್ಮ ಅಜೆಂಡಾವಾಗಿ ಅಂಗೀಕರಿಸಿರುವುದರ ದಾರಿಯಲ್ಲೇ ರಾಜ್ಯದಲ್ಲಿಯೂ ಅಂತಹ ಕೃತ್ಯಗಳು ಇಮ್ಮಡಿಯಾಗಿವೆ. ಇತ್ತೀಚಿನಲ್ಲಿ ಸಿಪಿಐ(ಎಂ) ನಾಯಕರ ಮನೆ, ಕಛೇರಿಗಳ ಮೇಲೆ ದಾಳಿ, ಎಲ್ಲೆಡೆ ತ್ರಿಶೂಲ ಹಂಚಿಕೆ, ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲೆ ಅವ್ಯಾಹತ ಆಕ್ರಮಣಗಳು 'ಅಭಿವೃದ್ಧಿಯ' ಮಾದರಿಯ ಕಲ್ಪನೆಯನ್ನು ತರುತ್ತವೆಯೇ? ಅದರ ಕ್ರಮಗಳು ಭಯೋತ್ಪಾದನೆ ತಡೆಯುವವೇ ಅಥವಾ ಹೆಚ್ಚಿಸುವವೇ?

ಹಿಂದೆಲ್ಲಾ ಸ್ವಚ್ಛ, ಪ್ರಾಮಾಣಿಕ, ದಕ್ಷ ಆಡಳಿತ ಇತ್ಯಾದಿ ಹೆಸರಿನಲ್ಲಿ ಮತ ಪಡೆಯಲು ಯತ್ನಿಸುತ್ತಿದ್ದ ಬಿಜೆಪಿ ಇಂದು ರಾಜ್ಯದಲ್ಲಿ ಜನರ ಅನುಕಂಪ ತನಗಿದೆಯೆಂದೂ, ತಾನೇ ಪೂರ್ಣ ಬಹುತಮದಿಂದ ಅಧಿಕಾರಕ್ಕೆ ಬರಬಹುದೆಂದು ಲೆಕ್ಕಾಚಾರ ಹಾಕಿ ಈಗ ತನ್ನ ಗುಪ್ತ ಅಜೆಂಡಾ ಬಹಿರಂಗಕ್ಕೆ ತರುತ್ತಿದೆ. ಕೋಮು ದ್ವೇಷದ ಆಧಾರದಲ್ಲಿ ಮತ ಕ್ರೋಢೀಕರಣಕ್ಕೆ ಯತ್ನಿಸುತ್ತಿದೆ. ಗುಜರಾತ್‌ನಲ್ಲಿ ಮೋದಿಗೆ ಪ್ರಬಲ ಬೆಂಬಲ ಇದೆಯೆಂದು ಕೇವಲ ಅಧಿಕಾರ ಗಳಿಸಿದ್ದರಿಂದಲೇ ಪರಿಗಣಿಗಲಾಗುವುದಿಲ್ಲ. ಯಾಕೆಂದರೆ ಮೋದಿ ಮಾದರಿಗೆ ವ್ಯಕ್ತವಾದ ಪ್ರಬಲ ವಿರೋಧವನ್ನು, ಅವಕಾಶಗಳನ್ನು ರಾಜಕೀಯವಾಗಿ ಬಳಸುವಲ್ಲಿ, ಸ್ವತಃ ತನ್ನ ನೀತಿ-ಕ್ರಮಗಳಲ್ಲಿ ಕಾಂಗ್ರೆಸ್ ಅನುಸರಿಸಿದ ದೌರ್ಬಲ್ಯಗಳು ಮೋದಿಯನ್ನು ಅಧಿಕಾರಕ್ಕೆ ತಂದಿವೆ ಎಂಬುದನ್ನು ಗಮನಿಸಬೇಕು. ಈ ಅಧಿಕಾರದ ಮದವು - ತನ್ನ ನೀಚ ಕೃತ್ಯಗಳಿಗೆ ನೀಡಿದ ಅಂಗೀಕಾರವೆಂದು ಭಾವಿಸುವುದು ಅಂತಹ ಭ್ರಮೆಯನ್ನೇ ಜನರಿಗೆ ಹಬ್ಬಿಸುವುದು 'ಗೋಬೆಲ್ಸ್'ನ ಪ್ರಚಾರವಷ್ಟೇ ಎಂಬುದನ್ನು ಅರಿಯಬೇಕು. ಇಂತಹ ಮೋದಿ ಮಾದರಿಯ ನಿಜಮುಖವನ್ನು ಹರಿದೊಗೆಯಬೇಕು. ಇಲ್ಲವಾದರೆ ಆ ಮುಖವಾಡವೇ ಎಲ್ಲೆಲ್ಲೂ ವಿಜೃಂಭಿಸೀತು!


ಗಡಿವಿವಾದದ ಕೆಣಕು ಮತಗಳಿಕೆಯ ತಿಣುಕು



ಚುನಾವಣೆಗಳು ಹತ್ತಿರವಾಗುತ್ತಿವೆ ಎಂದೆನ್ನಿಸುವ ವಾತಾವರಣ ನಿರ್ಮಾಣಗೊಳ್ಳುತ್ತಿರುವಾಗಲೇ ನೆಲ, ಜಲ, ಗಡಿ ವಿವಾದಗಳನ್ನು ಕೆಣಕುತ್ತಿರುವ ಪ್ರಯತ್ನಗಳೂ ಹೆಚ್ಚುತ್ತಿವೆ. ನೆರೆಹೊರೆ ರಾಜ್ಯಗಳೊಳಗೆ ಇಂತಹ ತಕರಾರು ಇರುವುದು ಹೊಸದೇನಲ್ಲ. ಆದರೆ ಅವುಗಳನ್ನು ಪರಿಹರಿಸಿಕೊಳ್ಳುವ ದೃಷ್ಟಿಗಿಂತ ತಿದಿ ಊದಿದರೆ ಅದರಲ್ಲಿ ಮೈ ಕಾಯಿಸಿಕೊಳ್ಳುವ ಉದ್ದೇಶಗಳೇ ಹೆಚ್ಚು.

ಇದೆಂತಹ ಕಾಳಜಿ

ಈ ವಾರದ ಆಸು-ಪಾಸಿನಲ್ಲೇ ಎಷ್ಟೊಂದು ವಿವಾದಗಳು ಒಮ್ಮೆಲೆ ಭುಗಿಲೆದ್ದಿವೆ. ಹಳೆಯ ವಿವಾದಗಳಿಗೆ ಈಗ ಮರು ಜೀವ ಧಾರಣೆ ಮಾಡಲಾಯಿತು. ತಮಿಳುನಾಡು ಅಕ್ರಮವಾಗಿ ಹೊಗೆನಕಲ್‌ನಲ್ಲಿ ವಿದ್ಯುತ್ ಹಾಗೂ ಕುಡಿಯುವ ನೀರಿನ ಯೋಜನೆಯೊಂದನ್ನು ಜಾರಿಗೊಳಿಸುತ್ತಿದೆ ಎಂದು ಸಣ್ಣದಾಗಿ ಪ್ರತಿಭಟನೆಯೊಂದು ನಡೆದಿತ್ತು. ಅದಕ್ಕೆ ಇನ್ನಷ್ಟು ತಿದಿಯೂದಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕಾಲಿಟ್ಟಿದ್ದು ಬಿಜೆಪಿ. ಆದರೆ ಎರಡೂ ರಾಜ್ಯ ಸರ್ಕಾರಗಳೂ ಅಲ್ಲಿ ಅಂತಹ ಉಲ್ಲಂಘನೆ ಆಗಿ, ಕಾನೂನಾತ್ಮಕ ಸಮಸ್ಯೆ ತಲೆದೋರಿದೆ ಎಂದೆನ್ನಿಸಿಸುತ್ತಿಲ್ಲವೆಂದು ಹೇಳುತ್ತಿದ್ದರೂ ಅಲ್ಲಿಗೆ ಒಂದಿಷ್ಟು ಜನರನ್ನು ಕರೆದೊಯ್ದದ್ದು ಯಡ್ಯೂರಪ್ಪ, ಈಶ್ವರಪ್ಪ ಇತ್ಯಾದಿಗಳು. ಇವರು ಹರಿವ ನೀರಿನ ಹರಿಗೋಲಿನಲ್ಲಿ ಗೆಲುವಿನ ನಗೆ ಹರಿಸಿ, ವಾಪಾಸಾದರು! ತಮ್ಮದು ತತ್ವಬದ್ಧ ರಾಷ್ಟ್ರೀಯ ಪಕ್ಷವೆಂದು ಡಂಗುರ ಹೊಡೆವ ಬಿಜೆಪಿ ಎರಡೂ ರಾಜ್ಯಗಳ ನಡುವಿನಲ್ಲಿ ಉದ್ಭವಿಸಿದ ಸಮಸ್ಯೆಯೊಂದರ ಸತ್ಯಾಸತ್ಯತೆ, ಅದು ಬೀರುವ ಅಲ್ಪ ಹಾಗೂ ದೀರ್ಘಕಾಲಿನ ಪರಿಣಾಮಗಳನ್ನು ಗಂಭೀರವಾಗಿ ಪರಿಗಣಿಸದೇ ಪೋಜು ನೀಡಿ ವಾಪಾಸಾದರೆ ತಮ್ಮ ಅಪಾರ ಕಾಳಜಿ ಪತ್ರಿಕೆಗಳಲ್ಲಿ ಕಾಣಿಸಿಕೊಂಡು ಬಿಟ್ಟರೆ ಸಾಕು ಎಂಬ ನಟನೆಯಿಂದ ರಾಜ್ಯಕ್ಕೇನು ಪ್ರಯೋಜನ? ಇದೇ ಪಕ್ಷದ ತಮಿಳುನಾಡು ಘಟಕ ಏನನ್ನುತ್ತದೆ, ಅದು ಅಲ್ಲಿಗೆ ಬೇಳೆ ಬೇಯಿಸಿಕೊಳ್ಳುವ ನಿಲುವನ್ನೇ ಪ್ರತಿಪಾದಿಸುತ್ತದೆ. 'ಇದು ಸಾಲದೆಂಬಂತೆ ಕೇರಳ-ಕರ್ನಾಟಕದ ಗಡಿ ಪ್ರದೇಶದಲ್ಲಿ ಮರಗಿಡ ಬೆಳೆಸಲಾಗಿದೆಯೆಂದೂ ಹೀಗೆಯೇ ಆ ಪ್ರದೇಶವನ್ನು ಕಬಳಿಸಬಹುದೆಂದೂ ಪ್ರಜಾವಾಣಿಯಂತಹ ಪತ್ರಿಕೆ ಹುಯಿಲೆಬ್ಬಿಸಿದೆ.


ನಡು ನೀರಿನಲ್ಲಿ ನಾಯಕರ ಸ್ಟಂಟ್ ಯಡಿಯೂರಪ್ಪ, ಈಶ್ವರಪ್ಪ ಇತ್ಯಾದಿ

ಅರ್ಥಹೀನ

ಇನ್ನೊಂದು ಕಡೆ ಬೆಳಗಾವಿ ಜಿಲ್ಲೆಯ ಮರಾಠಿ ಭಾಷಿಕ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದೂ, ಕೇಂದ್ರ ಸರ್ಕಾರ ಈ ಪ್ರದೇಶಗಳನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕೆಂದು ಮಹಾರಾಷ್ಟ್ರದ ವಿಧಾನಸಭೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಗೊತ್ತುವಳಿ ಮಂಡಿಸಿದರೆ, ಇದನ್ನು ಬೆಂಬಲಿಸಿ ಉಪ ಮುಖ್ಯಮಂತ್ರಿ ಆರ್.ಆರ್. ಪಾಟೀಲರು ಅತ್ಯಂತ ಪ್ರಚೋದನಾತ್ಮಕವಾಗಿ ಮಾತನಾಡಿದ್ದು ಉಭಯ ರಾಜ್ಯಗಳ ಜನತೆಯ ಹಿತಕ್ಕೆ ಧಕ್ಕೆ ತರುವಂತಿದೆ. ಈ ಗೊತ್ತುವಳಿಯನ್ನು ಅಂಗೀಕರಿಸಿ, ಪ್ರಧಾನಿಗೆ ನಿಯೋಗ ಹೋಗುವ ಪ್ರಕಟಣೆಯೂ ಅತ್ಯಂತ ಅನಾರೋಗ್ಯಕರ, ಅರ್ಥಹೀನ. ಯಾಕೆಂದರೆ ಈಗಾಗಲೇ ಈ ಪ್ರಶ್ನೆಯ ಬಗ್ಗೆ ತನ್ನದೇನೂ ಮಧ್ಯಪ್ರವೇಶವಿಲ್ಲವೆಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಅಫಿಡವಿಟ್‌ನ್ನು ನೀಡಿದೆ.

ಛಿದ್ರಕಾರಿ ಪರಿಣಾಮ

ಇಂತಹ ನಿರ್ಣಯ ಮಂಡಿಸುವುದು, ಅಂಗೀಕರಿಸುವುದು ಹೊಸದೇನಲ್ಲ. 2005 ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯೇ ಗೊತ್ತುವಳಿ ಅಂಗೀಕರಿಸಿತ್ತು. ನಂತರದಲ್ಲಿಯೂ ಕೆಲವು ತಾಲ್ಲೂಕು ಪಂಚಾಯಿತಿಗಳು ಇಂತಹ ನಿರ್ಣಯ ಅಂಗೀಕರಿಸಿದ್ದವು. ಇಂತಹ ನಿರ್ಣಯ ಅಂಗೀಕರಿಸಲು ಅವಕಾಶ ಇರಬಹುದಾದರೂ ಅವುಗಳ ಉದ್ದೇಶ ಉಭಯ ಭಾಷಿಕರನ್ನು ಪ್ರಚೋದಿಸಿ, ಅದರ ರಾಜಕೀಯ ಲಾಭ ಹೊಡೆಯುವುದು. ಈ ಕ್ರಮಗಳು ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳು ಪರಸ್ಪರ ಕಾದಾಡುವಂತಹ ಸ್ಥಿತಿಯ ನಿರ್ಮಾಣ ಮಾಡುವಂತಹವು. ಇದು ಜನರ ಐಕ್ಯತೆ, ಸಮಗ್ರತೆಗೆ ಅಪಾಯ ತರುವಂತಹದ್ದು. ಈ ದಿನಗಳಲ್ಲಂತೂ ಜನರ ಒಗ್ಗಟ್ಟಿನ ಮೇಲೆ ಸತತ ದಾಳಿ ನಡೆಯುತ್ತಿರುವಾಗ ಪಾಟೀಲರ ಮಾತು, ವಿಧಾನಸಭೆ ಕ್ರಮ ಛಿದ್ರಕಾರಿ ಪರಿಣಾಮ ಹೆಚ್ಚಿಸುವುದು.

ಕರ್ನಾಟಕದ ವಿಧಾನಸಭೆಗೆ ಚುನಾವಣೆಗಳು ಹತ್ತಿರವಾಗುತ್ತಿರು ವಾಗ ಎಂ.ಇ.ಎಸ್. ಗೆ ತನ್ನ ಮತಗಳನ್ನೇ ಉಳಿಸಿಕೊಳ್ಳಲು, ಭಾಷಾಂಧತೆಯನ್ನು ಕೆಣಕುವುದು ಬಿಟ್ಟರೆ ಬೇರೇನೂ ತೋಚಿಲ್ಲ. ಹೀಗಾಗಿ ಬೆಳಗಾವಿ, ನಿಪ್ಪಾಣಿ, ಖಾನಾಪುರದಂತಹ ಕಡೆ ಶಾಸಕರನ್ನು ಪಡೆಯಲು ಎಂ.ಇ.ಎಸ್. ಲೆಕ್ಕಾಚಾರ ಹಾಕಿದ ಪರಿಣಾಮವಿದು.

ಇದಕ್ಕೆ ಪ್ರತಿಕ್ರಿಯೆ ಅಥವಾ ಪ್ರತಿಭಟನೆಯೆಂದು ಕರ್ನಾಟಕ ರಕ್ಷಣಾ ವೇದಿಕೆಯಂತಹ ಸಂಘಟನೆಗಳು ಅದೇ ದಾಟಿಯಲ್ಲಿ ಹೊರಟು ಜನರನ್ನು ಪ್ರಚೋದಿಸುವುದು ಸಹ ಅಪಾಯಕಾರಿಯೇ. ಹಿಂದೆ ಬೆಳಗಾಂನ ಮೇಯರ್ ವಿಜಯ್ ಮೋರೆಗೆ ಮಸಿ ಬಳಿಯುವಂತಹ ಪ್ರಜಾಸತ್ತಾತ್ಮಕ ವಿರೋಧಿ ಮಾರ್ಗ ಅನುಸರಿಸಲಾಗಿತ್ತು. ಇಂತಹ ಕ್ರಮಗಳನ್ನೇ ನಿರೀಕ್ಷಿಸುವ ಎಂ.ಇ.ಎಸ್. ನಂತಹ ಸಂಘಟನೆಗಳು ಮರಾಠಿ ಭಾಷಿಕರನ್ನು ಕ್ರೋಢೀಕರಿಸಿಕೊಳ್ಳಲು ಸಹಾಯಕವಾಗುತ್ತದೆ.

ಯಥಾಸ್ಥಿತಿ ಅಗತ್ಯ

ಭಾಷಾವಾರು ಪ್ರಾಂತ್ಯಗಳ ರಚನೆ, ಅದಕ್ಕೆ ಅನ್ವಯಿಸಿ ರಾಜ್ಯಗಳ ನಡುವಿನ ಗಡಿ ರೇಖೆ ಗುರುತಿಸಿರುವ ಪ್ರಕ್ರಿಯೆ ಮುಗಿದು ಹಲವು ದಶಕಗಳು ಸಂದಿವೆ. ಅಂದು ಅನುಸರಿಸಿದ ಮಾನದಂಡದಿಂದ

ಪುಟ4ಕ್ಕೆ

ಅಂಗನವಾಡಿ ಕಾರ್ಯಕರ್ತೆಯರ ಬೃಹತ್ ಪ್ರತಿಭಟನೆ
ಕೆಲವು ಬೇಡಿಕೆ ಈಡೇರುವ ಭರವಸೆ

"ನಾವು ಬೆವರನ್ನು ಸುರಿಸಿ ದುಡಿಯುವ ಜನ ನಮ್ಮ ಬೆವರಿನ ಫಲವನ್ನು ಕೇಳುವೆವು" ಎಂಬಂತೆ ರಾಜ್ಯದ ಮೂಲೆ ಮೂಲೆಗಳಿಂದ ಬಂದ ಸುಮಾರು ಹತ್ತುಸಾವಿರಕ್ಕೂ ಹೆಚ್ಚು ಅಂಗನವಾಡಿ ನೌಕರರು ಮಾರ್ಚ್ 18 ರಂದು ರಾಜಭವನ ಚಲೋ ಹಮ್ಮಿಕೊಂಡಿದ್ದರು.

ಮಕ್ಕಳ, ಮಹಿಳೆಯರ, ಗರ್ಭಿಣಿ ಬಾಣಂತಿಯರಲ್ಲಿನ ಅಪೌಷ್ಠಿಕತೆಯನ್ನು ಹೋಗಲಾಡಿಸಲು, ಆರೋಗ್ಯಕರ ಸಮಾಜ ನಿರ್ಮಿಸಲು ನಾವು ಕಳೆದ 32 ವರ್ಷಗಳಿಂದ ಬಿಸಿಲು, ಗಾಳಿ, ಮಳೆ ಎನ್ನದೆ ಹಗಲಿರುಳು ದುಡಿಯುತ್ತಿದ್ದರೂ ಕೂಡಾ ನಮಗೆ ಕೇವಲ ಬಿಡಿಗಾಸಿನ ಗೌರವಧನ ನೀಡುತ್ತಿದ್ದಾರೆ. ನಿವೃತ್ತಿ ಇಲ್ಲ, ಕನಿಷ್ಟ ಕೂಲಿ ಇಲ್ಲಾ. ಆದಾಗ್ಯೂ ನಮ್ಮ ಉದ್ಯೋಗವನ್ನು ಕಿತ್ತುಕೊಳ್ಳಲು ಹೊರಟಿರುವುದನ್ನು ನಾವು ಸಹಿಸುವುದಿಲ್ಲ ಎಂದು ಅಂಗನವಾಡಿ ನೌಕರರು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 32 ವರ್ಷಗಳಿಂದ ಜಾರಿಯಲ್ಲಿರುವ ಐಸಿಡಿಎಸ್ ಯೋಜನೆಯನ್ನು ರಾಜ್ಯದ, ಬೆಂಗಳೂರು ನಗರ, ಗ್ರಾಮಾಂತರ, ಬಳ್ಳಾರಿ ಮಂಗಳೂರು, ಹುಬ್ಬಳ್ಳಿ, ಧಾರವಾಡ ಜಿಲ್ಲೆಗಳಲ್ಲಿ ಅಂಗನವಾಡಿ ಪೌಷ್ಠಿಕ ಆಹಾರ ಪೂರೈಕೆ ಜವಾಬ್ದಾರಿಯನ್ನು ಇಸ್ಕಾನ್ ಸಂಸ್ಥೆಗೆ ನೀಡಿರುವುದೇ ಈ ಆಕ್ರೋಶಕ್ಕೆ ಕಾರಣವಾಗಿತ್ತು. ಕಂದಾಯ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಹೀಗೆ ನಾಲ್ಕಾರು ಇಲಾಖೆಯ ಕೆಲಸ ನಿರ್ವಹಿಸುವ ಕಾರ್ಯಕರ್ತೆಯರಿಗೆ ಕೇವಲ 2250 ರೂ. ಸಹಾಯಕಿಯರಿಗೆ, 1125 ರೂ. ಗೌರವಧನ ನೀಡುತ್ತಿದ್ದಾರೆ. ಇಂದಿನ ಬೆಲೆ ಏರಿಕೆಯ ಸಂದರ್ಭದಲ್ಲಿ ಇಷ್ಟು ಕಡಿಮೆ ಕೂಲಿಯಲ್ಲಿ ಜೀವನ ನಿರ್ವಹಿಸಲು ಸಾಧ್ಯವಿಲ್ಲ. ಕೂಡಲೇ ಸರ್ಕಾರ ಕನಿಷ್ಠ ಕೂಲಿ ನೀಡಬೇಕು, ಕೆಲಸವನ್ನು ಖಾಯಂ ಮಾಡಬೇಕು ಎಂದು ಒತ್ತಾಯಿಸಿದರು.

ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಂ.ಎಂ.ಕೆ.ಪಂಧೆ ಅಸಂಘಟಿತ ವಲಯದ ಕಾರ್ಮಿಕರು ಜಾಗತೀಕರಣದ ದಾಳಿಯಿಂದಾಗಿ ಕೆಲಸವನ್ನು ಕಳೆದುಕೊಳ್ಳುವಂತ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅದಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಸಿಐಟಿಯು ಒತ್ತಡ ಹಾರೆ ಅಸಂಘಟಿತ ಕಾರ್ಮಿಕರಿಗೆ ಕಾನೂನು ಜಾರಿ ಮಾಡಲು ಒತ್ತಾಯಿಸುತ್ತಿದೆ ಎಂದರು. ಅಲ್ಲದೇ ಯುಪಿಎ ಸರ್ಕಾರಕ್ಕೆ ಎಡ ಪಕ್ಷಗಳ ಬೆಂಬಲ ಇರುವುದರಿಂದಾಗಿ ಕಾರ್ಮಿಕರ ರಕ್ಷಣೆಗೆ ಸ್ವಲ್ಪಮಟ್ಟಿಗೆ ಸಹಕಾರಿಯಾಗಿದೆ ಎಂದರು.

ನಂತರ ಮಾತನಾಡಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾದ ಕಾಂ.ವಿ.ಜೆ.ಕೆ. ನಾಯರ್, ಕಾಂ.ಎಸ್.ಪ್ರಸನ್ನಕುಮಾರ್, ಕೆ.ಎನ್.ಉಮೇಶ್, ಕೆ.ಮಹಾಂತೇಶ್ ಮುಂತಾದವರು ರಾಜ್ಯ ಸರ್ಕಾರದ ಬೇಜವಾಬ್ದಾರಿಯಿಂದಾಗಿ ರಾಜ್ಯದ 7149 ಜನ ಕಾರ್ಯಕರ್ತೆಯರ ಪರಿಸ್ಥಿತಿ ಅತಂತ್ರವಾಗಿದೆ. ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಿ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಅಂಗನವಾಡಿ ನೌಕರರ ಸಂಘದ ಮುಖಂಡರು ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಒಳಗೊಂಡ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಮಾತುಕತೆ ಮಾಡಿ ಸೂಕ್ತ ರಕ್ಷಣೆಗೆ ಮುಂದಾಗಲು ಒತ್ತಾಯಿಸಿದರು.

ಎಸ್.ವರಲಕ್ಷ್ಮಿ ಮಾತನಾಡಿ ಅಂಗನವಾಡಿ ಖಾಸಗೀಕರಣ ಕಾರ್ಮಿಕ ವಿರೋಧಿಯಾಗಿದ್ದು ಸರ್ಕಾರ ಇಂತಹ ಕೆಲಸಕ್ಕೆ ಕೈಹಾಕಬಾರದು ಎಂದು ಆಗ್ರಹಿಸಿದರು.



ಹೋರಾಟದ ಫಲ

ರಾಜ್ಯದ ಬೀದರ್, ಗುಲ್ಬರ್ಗಾ, ರಾಯಚೂರು, ಬೆಳಗಾಂ, ವಿಜಾಪುರ, ಗದಗ, ಕಾರವಾರ

ಪೆನ್ಷನ್ : ಇದುವರೆಗೂ ಇಲಾಖೆ ಪಿಂಚಣಿಗೆ ಸಂಬಂಧಿಸಿದಂತೆ ಯಾವುದೇ ಶಿಫಾರಸ್ಸು ಮಾಡಿರಲಿಲ್ಲ. ಈಗ ಪಿಂಚಣಿಯ ಬಗ್ಗೆ ಅಂತಿಮ ನಿರ್ಣಯ ಕೈಗೊಂಡು ಶಿಫಾರಸ್ಸನ್ನು ಮಾಡುತ್ತಿದೆ.

2. ಅಂಗನವಾಡಿ ಕೇಂದ್ರಗಳಿಗೆ ನೀಡುವ ಪೌಷ್ಠಿಕ ಆಹಾರವನ್ನು ಖಾಸಗಿಯವರಿಗೆ, ಸ್ತ್ರೀಶಕ್ತಿ ಸಂಘಗಳಿಗೆ ನೀಡುವುದಿಲ್ಲ ಎಂಬ ಭರವಸೆ ಸಿಕ್ಕಿದೆ.

3. ಹೊಸ ನೇಮಕಾತಿ ಆಗಿರುವ ನೌಕರರನ್ನು ಮುಂದುವರಿಸಲು ಸರ್ಕಾರ ನಿರ್ಮೊಂದಿಗಿದೆ ಎಂಬ ಸ್ಪಷ್ಟ ಭರವಸೆಯನ್ನು ರಾಜ್ಯಪಾಲರು ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸ್ಪಷ್ಟ ಭರವಸೆ ನೀಡಿದ್ದಾರೆ. ಇದರ ಆಧಾರದಲ್ಲಿ ಹೋರಾಟವನ್ನು ವಾಪಾಸ್ಸು ತೆಗೆದುಕೊಳ್ಳಲಾಗಿದೆ. ಈ ಭರವಸೆಗಳಲ್ಲಿ ಮೋಸ ಕಂಡುಬಂದರೆ ತೀವ್ರ ಹೋರಾಟಕ್ಕೆ ಹೋಗಬೇಕಾಗುತ್ತದೆ ಎಂದೂ ಸಂಘಟಕರು ಎಚ್ಚರಿಕೆ ನೀಡಿದ್ದಾರೆ.

ಶರಣಬಸವ ಮರದ್, ಗದಗ

'ಮದುವೆ' ನೆನಪಿನ ಕಾಣಿಕೆ

ಬಾಗಲಕೋಟೆಯ ಜಿಲ್ಲೆಯ ಶ್ರೀ ಶಂಬುಲಿಂಗ ಈಶ್ವರಪ್ಪ ಸೊನ್ನದ ಸವದತ್ತಿ ಇವರ ಮಗಳಾದ ಅಶ್ವಿನಿ-ಸತೀಶರ ವಿವಾಹದ ನೆನಪಿಗೆ ಜನಶಕ್ತಿಗೆ 500 ದೇಣಿಗೆ ಕಳಿಸಿದ್ದಾರೆ. ಜನಶಕ್ತಿ ವಾರಪತ್ರಿಕೆಯು ಹೊಸ ಜೋಡಿಗೆ ಶುಭಾಶಯಗಳನ್ನು ಕೋರುತ್ತದೆ.

ಈ ವಾರ

ಪುಟ 3 ರಿಂದ

ಅಲ್ಲಲ್ಲಿ ಸಮಸ್ಯೆಗಳು ಉಳಿದಿವೆ. ಬೆಳೆಯುತ್ತಿರುವ ಜನಸಂಖ್ಯೆ, ರಾಜಕೀಯ ಪರಿಗಣನೆಗಳು ಗಡಿ ಪ್ರದೇಶದಲ್ಲಿನ ಭಾಷಿಕರು ಹಲವಾರು ಸಮಸ್ಯೆಗಳನ್ನು ಎದುರಿಸುವಂತೆ ಮಾಡಿವೆ. ಈ ಸ್ಥಿತಿಯಲ್ಲಿ ಅಂತಹ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಉಭಯ ರಾಜ್ಯಗಳೂ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಈ ದಿಕ್ಕಿನಲ್ಲಿ ಅಂತಹ ಪ್ರಾಮಾಣಿಕ ಪ್ರಯತ್ನಗಳು ಕಂಡುಬರುವುದಿಲ್ಲ.

ಇಂದು ದೇಶದ ಹಲವಾರು ರಾಜ್ಯಗಳ ನಡುವೆ ಇಂತಹ ಗಡಿಪ್ರಶ್ನೆಗಳು ಹಾಗೆ ಉಳಿದಿರುವುದರ ಭಾಗವೇ ನಮ್ಮ ಹಾಗೂ ನೆರೆ ರಾಜ್ಯಗಳ ನಡುವಿನ ಪ್ರಶ್ನೆಯೂ ಆಗಿದೆ. ಈಗ ಅತ್ಯಗತ್ಯವಾಗಿರುವ ಆ ಪ್ರದೇಶದ ಜನರ ಸಮಸ್ಯೆ ಪರಿಹಾರಕ್ಕೆ, ಪ್ರಗತಿಗೆ ಕ್ರಮವಹಿಸದೇ ವಿವಾದ ಪ್ರಚೋದಿಸುವುದು ಜನರ ಒಗ್ಗಟ್ಟಿಗೆ ಮಾರಕ ಮಾತ್ರವಲ್ಲ, ಭಾಷಾಂಧ, ಛಿದ್ರಕಾರಿ ಶಕ್ತಿಗಳನ್ನು ಬೆಳೆಸುತ್ತದೆ ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು. ಆದ್ದರಿಂದ ಗಡಿ ವಿಷಯದಲ್ಲಿ ಈಗಿನ ಯಥಾಸ್ಥಿತಿಯನ್ನೇ ಕಾಪಾಡಿಕೊಳ್ಳಬೇಕು.

ಲಾಭ-ನಷ್ಟ?

ಆದರೆ ಗಡಿ ವಿವಾದ ಎತ್ತಿ ದೊಡ್ಡದಾಗಿ ಕೂಗುವ ನಾಯಕರು ಯೋಚಿಸುವುದು ರಾಜಕೀಯ ಲಾಭ-ನಷ್ಟದ ವಿಷಯವನ್ನಷ್ಟೇ. ಅಧಿಕಾರ ಹಿಡಿಯಲು ಇನ್ನೇನು ಮೂರೇ ಗೇಣು ಎಂದೇ ಭ್ರಮಿಸಿರುವ ಬಿಜೆಪಿ ಅದು ಹೋಗೇನಕಲ್ ಇರಬಹುದು ಅಥವಾ ಬೆಳಗಾವಿಯ ಪ್ರಶ್ನೆಯೇ ಆಗಲಿ, ಇಂದು ನಡೆಸುತ್ತಿರುವ ಗದ್ದಲ ಲಾಭ ನಷ್ಟದ ಲೆಕ್ಕಾಚಾರವೇ. ಈಗ ನಡೆಯುತ್ತಿರುವ ಹಲವಾರು ಪ್ರತಿಭಟನೆಗಳ ಅಜೆಂಡಾ ಕೇಂದ್ರದಲ್ಲಿರುವ ಯುಪಿಎ ಸರ್ಕಾರದ ವಿರುದ್ಧ ಮನೋಭಾವ ಬೆಳೆಸುವುದಾಗಿದೆ. ಕಮಲಧಾರಿಗಳ ಆಶೀರ್ವಾದವನ್ನು ಪಡೆಯುವ ಮೂಲಕ ಅಧಿಕಾರ ಚುಕ್ಕಾಣಿ ಹಿಡಿಯಬೇಕೆನ್ನುವವರಿಗೆ ದೇಶದ-ಜನಗಳ ಹಿತ ಚಿಂತನೆಗೆ ಪುರುಸೊತ್ತೆಲ್ಲಿದೆ? ಅವರ ಎಲ್ಲಾ ಹಾದಿಗಳೂ ವಿಧಾನಸೌಧದೊಳಗಿನ ಕುರ್ಚಿಯತ್ತಲೇ ಇರುವಾಗ.

ಓರಾಟ ವೀರರು

"ಥೂ ಈ ಮಾಮೂಲಿ ಪೇಪರ್‌ನಾಗೆಲ್ಲ ಒಂದೇ ಸುದ್ದಿ. ಉಪ್ಪಿಲ್ಲ, ಉಳಿ ಇಲ್ಲ, ಕಾರ ಇಲ್ಲ"

"ಏನ್ಲಾ ಅದು ಸರ್‍ಯಾಗಿ ಏಳ್ಲ"

"ಅದೇ ಕಿಸ್ನ ಬಂದ, ಕುಮಾರ ನಿದ್ದೆ ಮಾಡಿದ, ಯಡೂರಪ್ಪ ಓರಾಟ ಮಾಡಿದ. ಇದು ಬುಟ್ರೆ ಬ್ಯಾರೆ ಸುದ್ದೀನೆ ಇಲ್ವೇನೂಪ್ಪ?"


"ಇನ್ನೂ ಏನೇನೋ ಇರುತ್ತಲ್ಲಪ್ಪ ಯಾರ್‍ಯಾರೋ ಅಷ್ಟು ಸತಕೋಟಿಪತಿ ಆದ್ರು, ಇಷ್ಟು ಸತಕೋಟಿಪತಿ ಆದ್ರು ಅಂತ"

"ಥೂ ಅಲ್ಲ ಕಣಲಾ, ಇತ್ಲಾಗ್ ಬೆಳೆಗೆ ಬೆಲೆ ಇಲ್ದೆ ರೈತ್ರು ಸಾಯ್ತಾವ್ರೆ. ಅತ್ಲಗೆ ಪದಾರ್ಥಗಳ ಬೆಲೆ ಏರಿ ಏರಿ ಬಡವ್ರು ಸಾಯ್ತಾವ್ರೆ. ಇವೆಲ್ಲ ಸುದ್ದೀನೆ ಅಲ್ವ?"

"ಏನೋ ದಿನಾ ಸಾಯೋರಿಗ್ ಅಳೋರ್‍ಯಾರು ಅಂತ ಅವೆಲ್ಲ ಬುಟ್ಬಾಕಿರಬೇಕು"

"ಅಂಗಾರೆ 'ಮೇ ಒಳಗ್ ಎಲೆಕ್ಷನ್ ಮಾಡಿ' 'ಮೇ ಒಳಗೆ ಎಲೆಕ್ಷನ್ ಮಾಡಿ'(ಇಲ್ದಿದ್ರೆ ಅನುಕಂಪದ ಐಸ್ ಕ್ಯಾಂಡಿ ಕರಗಿಹೋಗುತ್ತೆ!) ಅಂತ ಯಡೂರಪ್ಪ ದಿನಾ ಅಳ್ತಾಯಿರ್ತಾರಲ್ಲ. ಅವ್ರ ಹಿಂದೆ ಯಾಕೆ ಇವ್ರು ದಿನಾ ಸಾಯ್ತಾರೆ?"

"ಏ ಯಡೂರಪ್ಪ ಅಂದರೆ ಏನ್ದ್ಕಂಡಿದಿಯಾ? ಓರಾಟ ವೀರ ಕಣಲಾ"



"ಓ ಸುಮ್ನಿರ್ಲ ಕಂಡಿವ್ನಿ ಈ ಬಿಜೆಪಿಯವರ ಮ್ಯಾಚ್ ಪಿಕ್ಸಿಂಗ್ ಓರಾಟವ"

"ಏನ್ಲಾ ಅದು ಮ್ಯಾಚ್ ಪಿಕ್ಸಿಂಗ್ ಓರಾಟ ಅಂದ್ರೆ?"

"ಅದೇ ಇನ್ನೇನು ಇಂಗೇ ಮಾಡದು ಅಂತ ತೀರ್ಮಾನ ಆಗಿರ್ತದೆ. ಅಂತವಕ್ಕೆ ಇವ್ರು ಓರಾಟ ಅಂತ ನಾಟ್ಕ ಆಡಿ, ನಾವೇ ಮಾಡ್ಸಿದ್ದು ಅಂತ ಏಳ್ಕಂಡು ತಿರ್‍ಗಾಡ್ತರೆ"

"ಔದಾ? ನಿಜವೇನ್ಲಾ?"

"ಊ ಮತೆ. ಮಂಗಳೂರು ಬೆಂಗಳೂರು ರೈಲು ಸಂಚಾರ ಪ್ರಾರಂಭ ಆಗೋ ದಿನಾಂಕನೂ ಪ್ರಕಟ ಆದ ಮೇಲೆ ಈ ಬಿಜೆಪಿಯೋರು ಬೇಗ ರೈಲು ಓಡಿಸಿ ಅಂತರ ಓರಾಟದ ಪೋಸ್ ಕೊಟ್ರು. ಈಗ ಇನ್ನೇನು ಚುನಾವಣೆ ಖಚಿತ ಅಂತ ಆಗಿದ್ರೂ ಇವ್ರು ಡೆಲ್ಲಿಲಿ ಓರಾಟದ ಬೀದಿ ನಾಟಕ ಮಾಡ್ತಾರೆ. ಸುಪ್ರೀಂಕೋರ್ಟಿಗೋಯ್ತಿವಿ ಅಂತ ಕುಣದಾಡ್ತಾರೆ"

"ಅಂಗಾರೆ ಇವ್ರ ಓರಾಟ ಎಲ್ಲಾ ಇಷ್ಟೇನಾ? ವಾಟಾಳ ನಾಗರಾಜ್‌ನಂಗೆ?"

"ಏ ಇಲ್ಲಪ್ಪ ಅಂಗಂತ ಅಗುರವಾಗಿ ತಗಳಾಂಗಿಲ್ಲಪ್ಪ ಈ ಬಿಜೆಪಿಗಳನ್ನ"

"ಏನ್ಲಾ ಅದು ಇಂಗಂತಿಯಾ?"

"ಊಂ ಮತೆ. ಏನೋ ಎಲೆಕ್ಷನ್ ಟೈಂನಾಗಾದ್ರೂ ಕೇಂದ್ರ ಸರ್ಕಾರಕ್ಕೆ ಸ್ವಲ್ಪ ರೈತ್ರುಕಡೆ ಗ್ಯಾನ ಬಂದು ಸೊಲ್ಪ ಸಾಲ ಮನ್ನಾ ಅಂತ ಮಾಡವ್ರೆ. ಇಷ್ಟೇ ಸಾಕಾಗಕ್ಕಿಲ್ಲ ಅಂತ ಬೇಕಾರೆ ಹೇಳ್ಲಿ. ಅದನ್ನು ಇವ್ರು ಸುಳ್ಳುಪಳ್ಳು ಅಂತ ಏನೇನೋ ಅಪಪ್ರಚಾರ ಮಾಡ್ತಾವ್ರೆ. ಸುಳ್ಳು ಸುದ್ದಿ ಅರಡದ್ರಲ್ಲಿ ಇವ್ರುನ ಬಿಟ್ರೆಲ್ಲ ನೋಡು"

"ಏನೋಪ್ಪ ಇವ್ರ ವರಸೇನೇ ಅರ್ತ ಆಗಲ್ಲ"


"ಅಷ್ಟು ಸುಲಭವಾಗಿ ಅರ್ತ ಆಗಲ್ಲ ಕಣಲಾ. ಬಾರಿ ಡೇಂಜರ್ರು. ಇವ್ರು ಅಧಿಕಾರದಲ್ಲಿದ್ದಾಗ ಬಜೆಟ್ ದುಡ್ಡೆಲ್ಲ ಮಠ ಮಂದ್ರ ಅಂತ ಅಂಚಿಬಿಟ್ಟು ಈಗ ರಾಜ್ಯಪಾಲ್ರಿಗೆ ಅದು ಜಾರಿಮಾಡಿ, ಇದು ಜಾರಿ ಮಾಡಿ ಅಂತ ನಕಲಿ ಓರಾಟ ಮಾಡಕ್ಕೆ ಗಂಟೆಗಟ್ಟಲೆ ಟ್ರಾಫಿಕ್ ಜಾಂ ಮಾಡತಿದ್ರು ನೋಡು"

"ಒಟ್ನಲ್ಲಿ ಈ ಬಿಜೆಪಿಗಳು ಅಧಿಕಾರದಲ್ಲಿದ್ದಾಗ ಏನೂ ಒಳ್ಳೇದು ಮಾಡದಿದ್ರೂ 'ಅಂಗೆ ಮಾಡಿ, ಇಂಗೆ ಮಾಡಿ' ಅಂತ ಓರಾಟ ಮಾಡೋ ವೀರರು ಅಲ್ವೇನ್ಲಾ?"

"ಅದ್ರೆ ಇವ್ರು ಅಧಿಕಾರಕ್ಕೆ ಬರಾಕಿನ್ನ ಇರೋಧ ಪಕ್ಷದಲ್ಲಿ ಓರಾಟ ಮಾಡ್ಕಂಡು ಇರೋದ ಜನಕ್ಕೂ ಕ್ಷೇಮ"

"ಅಂಗೂ ಏಳಾಂಗಿಲ್ಲ, ಎಂಗಿದ್ರೂ ಡೇಂಜರ್ರೇ ಅವ್ರು"

ಸರಳತೆ, ಪ್ರಾಮಾಣಿಕತೆ, ಜನಪರ ಹೋರಾಟಗಳ ಒಂದು ಮೂರ್ತ ರೂಪದಂತಿದ್ದ ಸ್ವಾತಂತ್ರ್ಯ ಹೋರಾಟಗಾರ. ಸಿಪಿಐ(ಎಂ) ಮುಖಂಡ ಎಚ್.ಮುಗುವಾಳಪ್ಪ ಅವರ ಬದುಕು, ಹೋರಾಟ, ಅಂತಿಮ ಯಾತ್ರೆಯ ಕುರಿತು ಒಂದು ಬರಹ



ಕಳಚಿದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಕೊಂಡಿ

ಕಾಮ್ರೇಡ್ ಮುಗುವಾಳಪ್ಪ

ಲಿಂಗರಾಜು

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಿಪಿಐ(ಎಂ) ಮುಖಂಡ 97ರ ಹಿರಿಯ ಚೇತನ ಹೆಚ್.ಮುಗುವಾಳಪ್ಪ ಮಾರ್ಚ್ 11ರಂದು ನಮ್ಮಿಂದ ಕಣ್ಮರೆಯಾದರು.

ನಂಬಿದ ತತ್ವ ಸಿದ್ಧಾಂತಗಳಿಗೆ ಕೊನೆಯವರೆಗೂ ನ್ಯಾಯ ಸಲ್ಲಿಸಿದ ಈ ಹಿರಿಯ ಸಂಗಾತಿ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ್ದರೂ ಅಪ್ಪಿಕೊಂಡಿದ್ದು ಮಾತ್ರ ಬರೀ ಕಷ್ಟ ಪರಂಪರೆಗಳನ್ನು. ದೊಡ್ಡ ಬಳ್ಳಾಪುರದ ಗಾಂಧಿ, ರೈತಮುಖಂಡ ಕಾಮ್ರೇಡ್ ಮುಗುವಾಳಪ್ಪ ಇನ್ನು ಮುಂದೆ ಕೇವಲ ನೆನಪು ಮಾತ್ರ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರದಲ್ಲಿ 1913ರಲ್ಲಿ ಶ್ರೀ ಅಲಗ ಶೆಟ್ಟಪ್ಪ ಹಾಗೂ ಶ್ರೀಮತಿ ದೇವಿರಮ್ಮ ದಂಪತಿಗಳಿಗೆ ಜನಿಸಿದ ಇವರು ಇಂಟರ್ ಮೀಡಿಯಟ್ ಮುಗಿಸಿದರು. 1928ರಲ್ಲಿ ಬೆಂಗಳೂರಿನ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿತರಾದರು. ಕಾಂಗ್ರೆಸ್ ಸೇವಾ ದಳದ ಸಂಘಟಕರಾಗಿದ್ದ ಡಾ.ಹರ್ಡೀಕರ್ ಮಾರ್ಗದರ್ಶನದಲ್ಲಿ 1930ರಲ್ಲಿ ಮೈಸೂರಿಗೆ ಹೋಗಿ ಸೇವಾದಳದಲ್ಲಿ ತರಬೇತಿ ಪಡೆದರು. ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ತ್ಯಜಿಸುವ ಹುಮ್ಮಸ್ಸು ದೇಹದ ನರ ನಾಡಿಗಳಲ್ಲಿ ಮಿಡಿಯುತ್ತಿತ್ತು. ಸಕ್ರಿಯವಾಗಿ ಸ್ವಾತಂತ್ರ್ಯ ಹೋರಾಟಗಳಲ್ಲಿ ತೊಡಗಿಕೊಂಡ ಇವರು ಹಲವು ಸಮರಧೀರ ಹೋರಾಟಗಳಿಗೆ ನಾಂದಿ ಹಾಡಿದರು. ತಾಲ್ಲೂಕಿನ ಯುವಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದಾಗಲು ಪ್ರೇರಣಾ ಶಕ್ತಿಯಾದರು.

ಗಾಂಧಿಯನ್ನು ಕರೆತಂದರು

1934ರಲ್ಲಿ ಮಹಾತ್ಮ ಗಾಂಧಿಯವರು ಬೆಂಗಳೂರಿಗೆ ಬಂದಾಗ ಅವರಿಗೆ ಸ್ವಯಂ ಸೇವಕರಾಗಿ ಅವರ ಜೊತೆ ಇರುವ ಅವಕಾಶವೂ ಲಭಿಸಿತು. (ಈ ಘಟನೆಯನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತಿದ್ದರು). 1939ರಲ್ಲಿ ತ್ರಿಪುರದ ಜಬ್ಬಲ್‌ಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿ ನಂತರ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಮುಖಂಡರಾಗಿ ಬೆಳೆದರು. ಈ ಸಂದರ್ಭದಲ್ಲಿ ಗಾಂಧೀಜಿಯವರನ್ನು ಒಪ್ಪಿಸಿ ದೊಡ್ಡಬಳ್ಳಾಪುರಕ್ಕೂ ಕರೆತಂದಿದ್ದರು.

1932 ಕರ ನಿರಾಕರಣೆ ಚಳುವಳಿ, ಶಿವಪುರ ಸತ್ಯಾಗ್ರಹ, ಬೆಳಗಾವಿ ಕಾಂಗ್ರೆಸ್ ಅಧಿವೇಶನ, 1947 ರ ಕ್ವಿಟ್ ಇಂಡಿಯಾ ಚಳುವಳಿ ಹೀಗೆ ಮಹತ್ತರ ಹೋರಾಟಗಳಲ್ಲಿ, ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ಬಾರಿ ಜೈಲುವಾಸಕ್ಕೆ ಒಳಗಾದ ಮುಗುವಾಳಪ್ಪನವರು ಪ್ರಭಾವಿ ಹೋರಾಟಗಾರರೆನಿಸಿದರು. ಇದರಿಂದಾಗಿ ಹಲವು ಮೊಕದ್ದಮೆಗಳನ್ನು ಎದುರಿಸಬೇಕಾಯಿತು. ಮಾತ್ರವಲ್ಲ ಲಾಠಿಯ ರುಚಿಯನ್ನು ನೋಡಬೇಕಾಯಿತು.

1947ರಲ್ಲಿ ಸ್ವಾತಂತ್ರ್ಯ ಲಭಿಸಿದ ನಂತರ ಸರ್ಕಾರದ ಎಲ್ಲಾ ಸವಲತ್ತುಗಳನ್ನು ನಿರಾಕರಿಸಿದರು. ರಾಜ್ಯದ ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರೂ ಸೇರಿದಂತೆ ಹಲವಾರು ಕಾಂಗ್ರೆಸ್ ಮುಖಂಡರ ಜೊತೆ ನಿಕಟ ಸಂಪರ್ಕವಿದ್ದರೂ ಕೂಡ ಸರ್ಕಾರದಿಂದ ಯಾವುದೇ ಕನಿಷ್ಠ ಸೌಲಭ್ಯಗಳಿಗೂ ಕೈಚಾಚಿದವರಲ್ಲ.

ಭ್ರಮನಿರಸನ –ಎಡಸಂಪರ್ಕ

ಕಾಂಗ್ರೆಸ್‌ನಲ್ಲಿರುವಾಗಲೇ ಕಾಂಗ್ರೆಸ್ ಬಗ್ಗೆ ಅಸಮಾಧಾನ ಕಾಡತೊಡಗಿತು. ಕಾಂಗ್ರೆಸ್‌ನ ನೀತಿ ಧೋರಣೆಗಳು ಸ್ವಾತಂತ್ರ್ಯದ ಕಲ್ಪನೆಯನ್ನು ನುಚ್ಚು ನೂರು ಮಾಡಿದವು. ಇದು ಮುಗುವಾಳಪ್ಪನವರನ್ನು ತೀವ್ರ ಆತಂಕಕ್ಕೀಡುಮಾಡಿತು. ಕಾಂಗ್ರೆಸ್ಸಿನಿಂದ ಭ್ರಮನಿರಸನ ಗೊಳ್ಳುವಂತಾಯಿತು. ಕ್ರಮೇಣ ಕಾಂಗ್ರೆಸ್‌ನಿಂದ ದೂರವಾಗತೊಡಗಿದರು.

1942ರಲ್ಲಿ ಜೈಲಿನಲ್ಲಿದ್ದಾಗಲೇ ಎಸ್.ರಾಮರಾವ್ ಎಂಬ ಕಮ್ಯೂನಿಸ್ಟ್ ಯುವಕನ ಸಂಪರ್ಕ ಸಿಕ್ಕಿತು. ಅಂತಿಮವಾಗಿ ಎಡಚಿಂತನೆಗೆ ಆಕರ್ಷಿತರಾಗಿ 1958ರಲ್ಲಿ ಕಾಂಗ್ರೆಸ್ ತೊರೆದು ಅವಿಭಜಿತ ಭಾರತ ಕಮ್ಯೂನಿಸ್ಟ್ ಪಕ್ಷ ಸೇರಿದರು. 1964ರ ವಿಭಜನೆಯ ಅನಂತರ ಸಿಪಿಐ(ಎಂ)ನಲ್ಲಿ ಗುರುತಿಸಿಕೊಂಡರು.

ಕಾಂಗ್ರೆಸ್‌ನ ರೈತವಿರೋಧಿ ನೀತಿಗಳಿಂದ ಬೇಸತ್ತಿದ್ದ ಮುಗುವಾಳಪ್ಪನವರು ರೈತ ಸಮುದಾಯ ಅನುಭವಿಸುತ್ತಿದ್ದ ಸಂಕಷ್ಟಗಳಿಂದ ದೂರ ಮಾಡುವ ಪಣ ತೊಟ್ಟರು. ಈ ಹಿನ್ನೆಲೆಯಲ್ಲಿ ರೈತಸಂಘವನ್ನು ಕಟ್ಟಿ ರೈತ ಚಳುವಳಿಗಳನ್ನು ಸಂಘಟಿಸಿದರು. 1960ರಲ್ಲಿ ಕೇರಳದ ತ್ರಿಚೂರಿನಲ್ಲಿ ನಡೆದ ಭಾರತ ಕಿಸಾನ್ ಸಭಾದ ಅಖಿಲ ಭಾರತ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದರು. ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವನ್ನು ಕಟ್ಟಿ ಬೆಳೆಸುವುದರಲ್ಲಿ ಅವರ ಅವಿರತ ಪ್ರಯತ್ನ ನಿರಂತರವಾಗಿತ್ತು. ಹಲವಾರು ವರ್ಷಗಳ ಕಾಲ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾಗಿ ದುಡಿದ ಇವರು 1980ರಿಂದ ಬೆಂಗಳೂರು ಜಿಲ್ಲಾ ಸಮಿತಿ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು.

ತಾಲ್ಲೂಕು ಪಂಚಾಯಿತಿ ಮತ್ತು ಪುರಸಭೆಗೆ 3 ಬಾರಿ ಸದಸ್ಯರಾಗಿ ಆಯ್ಕೆಯಾದರು.

ಪ್ರಮುಖ ಹೋರಾಟಗಳು

ತಾಲ್ಲೂಕಿನ ಆರೂಡಿ ಗ್ರಾಮದಲ್ಲಿ ನೂರಾರು ಎಕರೆ ಭೂಮಿಯನ್ನು ಹೊಂದಿದ್ದ ಜೋಡಿದಾರರ ವಿರುದ್ಧ ರೈತರನ್ನು ಸಂಘಟಿಸಿ ಭೂರಹಿತರಿಗೆ ಭೂಮಿ ದಕ್ಕುವಂತೆ ಮಾಡಲು ಸಮರಶೀಲ ಹೋರಾಟ ಸಂಘಟಿಸಿದರು. 1667ರಲ್ಲಿ ಹುಲುಕುಂಟೆ ಗ್ರಾಮದಲ್ಲಿ ಭೂಮಿಗಾಗಿ ಹೋರಾಟ ಸ್ಮರಣೀಯವಾದುದು. ಈ ಸಂಬಂಧ ಇವರು ಸೇರಿದಂತೆ 107 ಜನರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಯಿತು. ಈ ಕೇಸು ಮುಗಿಯುವವರೆಗೂ ಕಾಲ್ನಡಿಗೆ ಮೂಲಕ ದೊಡ್ಡ ಬಳ್ಳಾಪುರದಿಂದ ಬೆಂಗಳೂರಿಗೆ ನಡೆದುಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಯಿತು. ಸಾರಿಗೆ ಸೌಲಭ್ಯದ, ಹಣಕಾಸಿನ ಕೊರತೆಯಿಂದಾಗಿ ತೀವ್ರ ಸಂಕಷ್ಟಪರಿಸ್ಥಿತಿಯನ್ನು ಎದುರಿಸ ಬೇಕಾಯಿತು. ಈ ಪ್ರದೇಶದ ಜನತೆ ಆ ದಿನಗಳನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ.

ವಿದ್ಯಾರ್ಥಿಗಳೆಂದರೆ ಮುಗುವಾಳಪ್ಪ ನವರಿಗೆ ಎಲ್ಲಿಲ್ಲದ ಪ್ರೀತಿ. ಅವರು ಗ್ರಾಮಾಂತರದ ಹಲವಾರು ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲೇ ವಾಸ್ತವ್ಯದ ವ್ಯವಸ್ಥೆ ಮಾಡಿ ಊಟ ತಿಂಡಿ ಇತರ ಅಗತ್ಯವಿರುವ ಸಹಾಯ ಮಾಡುತ್ತಿದ್ದರು. ಪತ್ನಿ ಸಿದ್ದಮ್ಮನವರು ಇದರಿಂದ ಎಂದೂ ಬೇಸರಗೊಂಡವರಲ್ಲ. ಬದಲಾಗಿ ಪತಿಯ ಸೇವಾಭಾವನೆ ಕಂಡು ಹೆಮ್ಮೆ ಪಡುತ್ತಿದ್ದರು.

97 ವರ್ಷಗಳ ತುಂಬು ಜೀವನ ನಡೆಸಿದ ಈ ಹಿರಿಯ ಸಂಗಾತಿ ಹಲವು ದಿನಗಳಿಂದ ತೀವ್ರ ಅಸ್ವಸ್ಥರಾಗಿದ್ದರು. ಈ ಪರಿಸ್ಥಿತಿಯಲ್ಲೂ ಕೂಡ ಪಕ್ಷ ಕಟ್ಟುವ ಅಮಿತೋತ್ಸಾಹ ಯುವಜನರಿಗೆ ಸ್ಫೂರ್ತಿ ನೀಡುವಂಥದ್ದು. ಅವರಿಂದು ನಮ್ಮಿಂದ ದೈಹಿಕವಾಗಿ ದೂರವಾಗಿದ್ದಾರೆ. ಅವರ ನೂರಾರು ನೆನಪುಗಳನ್ನು ಬಿಟ್ಟು.....

ಅಂತಿಮ ಯಾತ್ರೆ

ಮಾರ್ಚ್ 11ರ ಮಂಗಳವಾರ ಮಧ್ಯಾಹ್ನ 12ಕ್ಕೆ ಕೊನೆ ಯುಸಿರೆಳೆದ ಮುಗುವಾಳಪ್ಪ ನವರನ್ನು ನೋಡಲು ಅವರ ಅಸಂಖ್ಯಾತ ಅಭಿಮಾನಿಗಳು, ವಿವಿಧ ರಾಜಕೀಯ ಪಕ್ಷಗಳ, ವಿವಿಧ ಸಂಘಟನೆಗಳ ಮುಖಂಡರು ಆಗಮಿಸಿ ಅಂತಿಮ ದರ್ಶನ ಪಡೆದರು. 12ರ ಬುಧವಾರ ಬೆಳಗ್ಗೆ 9.30ರಿಂದ ಶರೀರ ಹೊತ್ತ ವಾಹನದ ಮೂಲಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯ್ತು. ವಿವೇಕಾನಂದ ಶಾಲಾ ಮಕ್ಕಳ ಬ್ಯಾಂಡ್ ವಾದ್ಯದ ಹಿಂದೆ ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕ ಸಂಗಾತಿಗಳು ಮುಗುವಾಳಪ್ಪನವರ ಆದರ್ಶ, ಕನಸುಗಳನ್ನು ನನಸು ಮಾಡುವ ಘೋಷಣೆಗಳನ್ನು ಕೂಗುತ್ತ ಹೆಜ್ಜೆ ಹಾಕಿದರು. ಅಂತಿಮ ದರ್ಶನ ಪಡೆಯಲು ಹೂಗುಚ್ಛ ಹಿಡಿದು ಸಾಲುಗಟ್ಟಿ ನಿಂತಿದ್ದ ಸಾರ್ವಜನಿಕರು, ಶಾಲೆಯಿಂದ ಹೊರಬಂದು ತಮ್ಮ ಪ್ರೀತಿಯ 'ಗಾಂಧಿ'ಯ ದರ್ಶನ ಪಡೆಯಲು ಸಾಲಾಗಿ ಹೂಹಿಡಿದು ನಿಂತಿದ್ದ ಮಕ್ಕಳ ದೃಶ್ಯ ಸಾಮಾನ್ಯವಾಗಿತ್ತು. ಅಂಗಡಿಗಳು, ವ್ಯಾಪಾರಸ್ಥರು, ವ್ಯಾಪಾರ ಸ್ಥಗಿತಗೊಳಿಸಿ ಹಿರಿಯ ಚೇತನಕ್ಕೆ ಗೌರವ ಸಲ್ಲಿಸಿದರು. ಇವೆಲ್ಲವೂ ಅವರಿಗಿರುವ ಅಭಿಮಾನ, ಗೌರವದ ದ್ಯೋತಕವಾಗಿದ್ದವು.



ಶ್ರದ್ಧಾಂಜಲಿ ಸಭೆ

ಇದೇ ಸಂದರ್ಭದಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಶಾಲಾ ಮಕ್ಕಳು ಬ್ಯಾಂಡ್ ಬಾರಿಸುವ ಮೂಲಕ ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ ಜನತೆಯ ವಿಮೋಚನೆಗಾಗಿ, ಅಸಂಖ್ಯಾತ ಕ್ರಾಂತಿಕಾರಿಗಳಿಗೆ ಆದರ್ಶ ಪ್ರಾಯವಾಗಿದ್ದರು. ದೈಹಿಕವಾಗಿ ಎಲ್ಲರಿಂದ ದೂರವಾಗಿದ್ದರೂ ಕೂಡ ಅವರ ನೆನಪು, ಆದರ್ಶಗಳು ಎಂದೆಂದೂ ಇರುವಂಥವು. ಅವರ ಜೀವನಶೈಲಿ ಇಂದಿನ ಯುವ ಪೀಳಿಗೆಗೆ ಆದರ್ಶವಾಗಬೇಕು. ಎಲ್ಲರನ್ನು ಪ್ರೀತಿಸುವ ಅವರ ಗುಣ ಮೆಚ್ಚುವಂಥದ್ದು, ಜನಚಳುವಳಿಯನ್ನು ಕಟ್ಟುವುದೇ ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದರು.


ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ನರಸಿಂಹಯ್ಯ ಮಾತನಾಡಿ - '1952ರಿಂದ ಚಿರಪರಿಚಿತರು. ನಮಗೆಲ್ಲಾ ಮಾರ್ಗದರ್ಶಕರಾಗಿ ಆದರ್ಶಪ್ರಾಯ ರಾಗಿದ್ದರು' ಎಂದು ಹೇಳಿದರು. ಕರ್ನಾಟಕ ರಾಜ್ಯ ರೈತಸಂಘದ ಡಾ.ವೆಂಕಟರೆಡ್ಡಿ ಮಾತನಾಡಿ 'ದೈಹಿಕವಾಗಿ ನಮ್ಮಿಂದ ದೂರವಾಗಿದ್ದರೂ ಕೂಡ ಚಳುವಳಿಯ ಮೂಲಕ ಸದಾ ನಮ್ಮ ಜೊತೆಗಿರುತ್ತಾರೆ. ಎಲ್ಲಾ ಎಡಪಂಥೀಯರಿಗೆ ಅವರೊಂದು ಶಕ್ತಿ, ಅವರ ನಡೆ, ನುಡಿ ಸರಳಜೀವನ ನಮಗೆ ಮಾರ್ಗದರ್ಶವಾಗಬೇಕು. ಕೇವಲ ಹೊಗಳಿಕೆಯಿಂದ ಶ್ರದ್ಧಾಂಜಲಿ ಸಲ್ಲಿಸುವುದಲ್ಲ, ಬದಲಿಗೆ ಚಳುವಳಿ ಕಟ್ಟುವ ಮೂಲಕ ಸಲ್ಲಿಸಬೇಕು. ತಾತ್ವಿಕವಾಗಿ ರಾಜಿಯಿಲ್ಲದ ಹೋರಾಟ ನಡೆಸಿದ ಅವರ ಬದ್ಧತೆ ಪ್ರಶ್ನಾತೀತ' ಎಂದರು.

'ಜನಶಕ್ತಿ' ಪತ್ರಿಕೆಯ ಸಂಪಾದಕರಾದ ಗುರುಶಾಂತ್ ಮಾತನಾಡಿ "ಶರಣರ ಮಹಿಮೆ ಮರಣದಲ್ಲಿ ನೋಡು" ಎನ್ನುವ ಹಾಗೆ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡ ಈ ಜನೋಸ್ತಮವೇ ಸಾಕ್ಷಿ. ಅವರ ಅಗಲಿಕೆ ಅತ್ಯಂತ ನೋವಿನ ವಿಚಾರ, ಜನರಿಗಾಗಿ ಬದುಕಿ, ದೇಶದ ಸಲುವಾಗಿ ತಮ್ಮ ಇಡೀ ಜೀವನ ಮುಡಿಪಾಗಿಟ್ಟಿದ್ದರು. ಆ ಮೂಲಕ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದಲ್ಲಿ ಮಿಳಿತಗೊಂಡಿದ್ದರು. ಅವರ ಆದರ್ಶಗಳನ್ನು ಮುಂದೊಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಮ್ಮ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ನಗರಸಭಾ ಸದಸ್ಯ ಪ್ರಭುದೇವ್ ಮಾತನಾಡಿ ಇಡೀ ತಾಲೂಕಿಗೆ ಇಂದು 'ಸೂತಕ'ದ ಛಾಯೆ ಆವರಿಸಿದೆ. ಅವರು ಮಾಡದ ಹೋರಾಟವಿಲ್ಲ. ಎಲ್ಲಾ ಸಾಮಾಜಿಕ ಹೋರಾಟಗಳಿಗೆ ನೇತೃತ್ವ ಕೊಟ್ಟಿದ್ದರು. ಕಾಲ್ನಡಿಗೆ ಮತ್ತು ಸೈಕಲ್‌ನಲ್ಲಿ ಮಾತ್ರ ಸಂಚರಿಸುತ್ತಿದ್ದರು. ಕೊನೆಯವರೆಗೂ ನವ ಯುವಕರಂತೆ ಬದುಕು ಸವೆಸಿದ ರೀತಿ ಆದರ್ಶಪ್ರಾಯವಾದುದು" ಎಂದರು.

ಜನವಾದಿ ಮಹಿಳಾ ಸಂಘಟನೆ ಪ್ರಭಾ ಮಾತನಾಡಿ ತಾಲ್ಲೂಕಿನ ಅತಿದೊಡ್ಡ ನೈತಿಕ ಶಕ್ತಿಯನ್ನು ಕಳೆದುಕೊಂಡಿದ್ದೇವೆ. ಎಲ್ಲಾ ಸುಖ ಸವಲತ್ತುಗಳನ್ನು ತ್ಯಜಿಸಿ ಸಾಮಾನ್ಯರಂತೆ ಬದುಕು ಸವೆಸಿದರು. ಲಿಂಗ ತಾರತಮ್ಯ ವಿರುದ್ಧವಾಗಿದ್ದ ಅವರು ಎಲ್ಲರೂ ಸಮಾನರಾಗಿ ಬದುಕಬೇಕೆಂದು ಹೇಳುತ್ತಿದ್ದರು. ಇತರರೊಂದಿಗೆ ಸೌಹಾರ್ದ ಸಂಬಂಧ ಹೊಂದಿದ್ದ ಅವರು ಅತಿದೊಡ್ಡ ಮಾನವವಾದಿಯಾಗಿದ್ದರು. ಅವರ ಆದರ್ಶಗಳನ್ನು ಮುಂದುವರೆಸುವುದೇ ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದು ಹೇಳಿದರು.

ವಕೀಲರಾದ ಕೃಷ್ಣಮೂರ್ತಿ, ಸಂಬಂಧಿಕರಾದ ರುಮಾಲಿ ನಾಗರಾಜ್, ಪವಾಡ ಸಂಶೋಧನ

ಪುಟ 13ಕ್ಕೆ



ಮಂಗಳೂರು ಮಹಾನಗರ ಪಾಲಿಕೆ ಹಗರಣಗಳ ಕೇಂದ್ರ

ಮಂಗಳೂರು ಮಹಾ ನಗರ ಪಾಲಿಕೆ ಹಗರಣಗಳ ಕೇಂದ್ರ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಭ್ರಷ್ಟಾಚಾರದ ಈ ಬಾರಿಯ ಸರದಿ ಪಾಲಿಕೆ ಸದಸ್ಯರದ್ದಲ್ಲ, ಬದಲಾಗಿ ರಾಜಕೀಯವನ್ನೇ ಕಪಿಮುಷ್ಠಿಯಲ್ಲಿ ಇಟ್ಟಿರುವ ಗುತ್ತಿಗೆದಾರರದ್ದು.

ಹುಸಿಯಾದ ವಿಶ್ವಾಸ -

ಕಳೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಬಂಡಾಯದ ಲಾಭ ಗಳಿಸಿದ ಬಿಜೆಪಿ, ಪಾಲಿಕೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಗದ್ದುಗೆ ಏರುವಲ್ಲಿ ಯಶಸ್ವಿಯಾಗಿದೆ. ಬಿಜೆಪಿ, ಉತ್ತಮ ಆಡಳಿತ ನೀಡಬಹುದು, ನಗರ ಅಭಿವೃದ್ಧಿಯಾಗಬಹುದು ಎಂಬ ವಿಶ್ವಾಸ ನಗರದ ಜನತೆಗೆ ಇತ್ತು. ಆದರೆ, ಜನರ ಈ ವಿಶ್ವಾಸ ಹುಸಿಯಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ಕೇವಲ 22 ದಿನದಲ್ಲೇ ಬಿಜೆಪಿಯ ಭ್ರಷ್ಟತೆಯ ಇನ್ನೊಂದು ಮುಖ ಅನಾವರಣಗೊಂಡಿತು.

ನಡೆದದ್ದೇನು?

ಪಾಲಿಕೆಯ ಆಯುಕ್ತ ಕೃಷ್ಣಪ್ಪ ಪೂಜಾರಿ ಮಾರ್ಚ್ ಅಂತ್ಯಕ್ಕೆ ನಿವೃತ್ತಿಯಾಗಲಿದ್ದರು. ಈ ಹಿನ್ನೆಲೆಯಲ್ಲಿ ನಿವೃತ್ತಿವರೆಗೆ ರಜೆಯಲ್ಲಿ ತೆರಳಿದ್ದರು. ಈ ಅವಕಾಶವನ್ನು ಉಪಯೋಗಿಸಿಕೊಂಡ ಗುತ್ತಿಗೆದಾರರು, ನೌಕರರನ್ನು ಬಳಸಿ ಟೆಂಡರ್ ಪತ್ರಗಳಿಗೆ ಆಯುಕ್ತರ ನಕಲಿ ಸಹಿ ಹಾಕುವ ಮಟ್ಟಕ್ಕೂ ಕೈ ಹಾಕಿದರು. ಟೆಂಡರ್ ಮಂಜೂರಾಗಬೇಕಿದ್ದರೆ ಅದಕ್ಕೆ ಕಾರ್ಯಪಾಲ ಎಂಜಿನಿಯರ್, ಸಹಾಯಕ ಕಾರ್ಯಪಾಲ ಎಂಜಿನಿಯರ್ ಹಾಗೂ ಆಯುಕ್ತರ ಸಹಿ ಅಗತ್ಯ. ಆಡಳಿತಾಧಿಕಾರಿಯಾಗಿದ್ದ ಜಿಲ್ಲಾಧಿಕಾರಿ ಕಣ್ತಪ್ಪಿಸಿ ಫೈಲ್‌ಗಳನ್ನು ಆಯುಕ್ತರ ಹಂತಕ್ಕೆ ತರುವಲ್ಲಿ ಗುತ್ತಿಗೆದಾರರು ಯಶಸ್ವಿಯಾದರು. ಇದಕ್ಕಾಗಿ ಅಧಿಕಾರಿಗಳ ಕೈಯನ್ನು ಸಾಕಷ್ಟು ಬಿಸಿ ಮಾಡಿದ್ದ ಗುತ್ತಿಗೆದಾರರು ಆಯುಕ್ತರ ಸಹಿಯನ್ನು ನಕಲು ಮಾಡಲು ಮುಂದಾದರು. ಆಗ ಅವರ ನೆರವಿಗೆ ಬಂದದ್ದು ಪಾಲಿಕೆ ನೌಕರರು. ಆಯುಕ್ತರು ರಜೆಯಲ್ಲಿರುವಂತೆಯೇ ಅವರ ಸಹಿಯನ್ನು ನಕಲು ಮಾಡಿ ಕಾಮಗಾರಿಗೆ ಗ್ರೀನ್ ಸಿಗ್ನಲ್ ನೀಡಿದರು.

ಭ್ರಷ್ಟಾಚಾರದ ಇತಿಹಾಸ

ಪಾಲಿಕೆಯಲ್ಲಿ ಭ್ರಷ್ಟಾಚಾರಕ್ಕೆ ನಾಂದಿ ಹಾಡಿದ್ದು ಕಾಂಗ್ರೆಸ್. ಕಳೆದ ಐದು ವರ್ಷಗಳಲ್ಲಿ ಪಾಲಿಕೆಯನ್ನು ತನ್ನ ಆಡುಂಬೊಲ ಮಾಡಿಕೊಂಡ ಕಾಂಗ್ರೆಸ್ ಸದಸ್ಯರು, ಹಣ ನುಂಗುವಲ್ಲಿ ಪಳಗಿದರು. ಒಂದೇ ಕಾಮಗಾರಿಗೆ ಹಲವು ಬಿಲ್, ಕಳಪೆ ಕಾಮಗಾರಿ ಹೀಗೆ ಮಂಗಳೂರು ನಗರ ಅಭಿವೃದ್ಧಿಗೆ ಬದಲಾಗಿ ಭ್ರಷ್ಟಾಚಾರಕ್ಕೆ ಕುಖ್ಯಾತಿ ಪಡೆಯಿತು.

ಹಗರಣದ ಹಿಂದೆ

ಐದು ಗುತ್ತಿಗೆದಾರರು ನಕಲಿ ಸಹಿ ಹಗರಣದ ಪ್ರಮುಖ ಆರೋಪಿಗಳು. ಈ ಪೈಕಿ ಇಬ್ಬರು ಕಾಂಗ್ರೆಸ್ ಬೆಂಬಲಿತರು. ಇನ್ನುಳಿದವರು ಬಿಜೆಪಿ ಕಟ್ಟಾಳುಗಳು. ಇವರು ಸಿಕ್ಕಿ ಬಿದ್ದ ಮಿಕಗಳು.


ಮಂಗಳೂರು ಮಹಾನಗರ ಪಾಲಿಕೆ

ಜಿಲ್ಲೆಯ ವರಿಷ್ಠ ನಾಯಕರೆನಿಸಿದ ಕೃಷ್ಣ ಪಾಲೆಮಾರ್, ಜನಾರ್ದನ ಪೂಜಾರಿ ಹಿಂಬಾಲಕರೇ ಈ ಕೃತ್ಯಕ್ಕೆ ಇಳಿದಿದ್ದಾರೆ. ಇದಿನ್ನೂ ಆರಂಭ, ಇನ್ನು ಬಯಲಿಗೆ ಬಾರದ ಹಗರಣಗಳೆಷ್ಟೋ? ಕಾಮಗಾರಿ ನಡೆಯದೆ ಪಾಸಾದ ಬಿಲ್‌ಗಳೆಷ್ಟೋ? ಇದರ ಜೊತೆಗೆ, ಈಗಾಗಲೇ ಅಧಿಕಾರದ ರುಚಿ ಪಡೆದ ಸಂಘ ಪರಿವಾರದ ಮಂದಿ ತಮ್ಮ ಕೆಲಸ ಮಾಡಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಆರಂಭಿಸಿಬಿಟ್ಟಿವೆ. ಬಿಜೆಪಿ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಈ ಎರಡೂ ಪಕ್ಷಗಳು ಭ್ರಷ್ಟಾಚಾರದ ತಮ್ಮ ದರ್ಶನ ಮಾಡಿವೆ.

ರಕ್ಷಣೆಗೆ ಮುಂದಾದ ಮೇಯರ್


ಹಗರಣ ಬಯಲಿಗೆ ಬರುತ್ತಿದ್ದಂತೆ ಮೇಯರ್ ಗಣೇಶ್ ಹೊಸಬೆಟ್ಟು ತಮ್ಮ ಕಚೇರಿಯಲ್ಲಿ ಸಂಘದ ಪ್ರಮುಖರ ಸಭೆ ನಡೆಸಿ ಮಾನ ಉಳಿಸಿಕೊಳ್ಳುವ ಬಗ್ಗೆ ಚರ್ಚೆ ನಡೆಸಿದರು. ರಾಜಕೀಯ ಗುರು ಪಾಲೆಮಾರ್ ಆಣತಿಯಂತೆ ಕಡತಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ನಕಲಿ ಸಹಿ ಇದ್ದ ಹಾಳೆಯನ್ನು ಹರಿದು ಹಾಕಿದರು. ಈ ಮೂಲಕ ಗುತ್ತಿಗೆದಾರರನ್ನು ವ್ಯವಸ್ಥಿತವಾಗಿ ರಕ್ಷಿಸುವ ಕೆಲಸ ರಾತೋರಾತ್ರಿ ನಡೆಯಿತು.

ಅಧಿಕಾರದ ಆರಂಭದ ದಿನಗಳಲ್ಲೇ ಈ ಪರಿಯ ಹಣದ ದಾಹ ಪ್ರದರ್ಶಿಸಿದ ಬಿಜೆಪಿ ಮಂದಿ ಐದು ವರ್ಷ ಯಾವ ರೀತಿ ಪೂರೈಸುತ್ತಾರೋ? ನಕಲಿ ಸಹಿ ಹಗರಣ ಇವರ ಮುಖವಾಡ ಅನಾವರಣ ಮಾಡಿದ್ದಂತೂ ಸತ್ಯ. ಜನತೆ ಈ ಬಗ್ಗೆ ಹೆಚ್ಚಿನ ಜಾಗ್ರತೆಯಿಂದ ಇರಬೇಕಾದ ಅಗತ್ಯವಿದೆ.

● ಸಿಮ್ಮಿಸಿ

ಬೆಳ್ತಂಗಡಿ : 'ರಕ್ತ ಹೀರುವೆವು' ಎನ್ನುವ 'ರಾಮಭಕ್ತ'ರು

ಹೌದು.... ಈ ಮಾತು ಸತ್ಯ. ಅಯೋಧ್ಯೆಯಿಂದ ಇಲ್ಲಿ ತನಕ ನಡೆದ ಎಲ್ಲಾ ಘಟನೆಗಳನ್ನು ಯಾವ ರೀತಿಯಲ್ಲಿ ನೋಡಿದರೂ ಈ ಮಾತು ಸತ್ಯ. ಸವಾಧಿಕಾರಿ ಹಿಟ್ಲರ್‌ನಿಂದ ಸ್ಫೂರ್ತಿ ಪಡೆದು ದೇಶದಲ್ಲಿ ಹಿಂದೂರಾಷ್ಟ್ರ ಹೆಸರಿನ ಸರ್ವಾಧಿಕಾರಕ್ಕಾಗಿ ಹಾತೊರೆಯುತ್ತಿರುವ, ಸಾಂಸ್ಕೃತಿಕ ಸಂಘಟನೆಯ ಸೋಗಿನಲ್ಲಿ ಕಾರ್ಯಾಚರಿಸುತ್ತಿರುವ ಹಿಂದೂ ಭಯೋತ್ಪಾದಕತೆ ಸಂಘಟನೆ - ಆರ್‌ಎಸ್‌ಎಸ್ - ಮತ್ತು ಅದರ ಬಾಲಬಡುಕ ಇತರ ವಿಷ ಜಂತು ಸಂಸ್ಥೆಗಳು ಮತ್ತು ಬಿಜೆಪಿ ಯ ಕಾರ್ಯವೈಖರಿ. ಇವರೆಲ್ಲ ಹಿಂದೂ ಧರ್ಮದ ಬಗ್ಗೆ, ಶ್ರೀರಾಮನ ಹೆಸರಿನಲ್ಲಿ ನರರಕ್ಕಸನ ಅವತಾರ ತಾಳಿದ್ದಾರೆ. ಇಲ್ಲಿ ಇವರ ಟಾರ್ಗೆಟ್ ಮುಸ್ಲಿಮರಲ್ಲ. ಕಮ್ಯೂನಿಸ್ಟರು. ಅದಕ್ಕಾಗಿಯೇ ಸಿಪಿಐ(ಎಂ) ಪಕ್ಷದ ಕೇಂದ್ರ ಕಛೇರಿಯಿಂದ ಹಿಡಿದು, ಬೆಂಗಳೂರು, ಆಂಧ್ರ, ಬೆಳ್ತಂಗಡಿಯವರೆಗೂ ತಲುಪಿದೆ. ಕೇರಳದಲ್ಲಿ ಪಕ್ಷದ ಕಾರ್ಯಕರ್ತರ ಕೊಲೆಗಳು, ದೆಹಯಲ್ಲಿ ನಾಯಕರ ಮೇಲೆ ಮಾರಣಾಂತಿಕ ಧಾಳಿಗಳು, ಕಛೇರಿಗಳ ಧ್ವಂಸ ಬೆಂಗಳೂರಿನಲ್ಲಿ ಬೆದರಿಕೆ, ದರೋಡೆ, ಬೆಳ್ತಂಗಡಿಯಲ್ಲಿ ರಕ್ತ ಹೀರುವ ಬೆದರಿಕೆ ಅದೂ ಭಯೋತ್ಪಾದಕತೆ ನಾಚುವಂತೆ!



ಬೆಳ್ತಂಗಡಿ ತಾಲೂಕಿನಲ್ಲಿ ಸಿಪಿಐ(ಎಂ) ಪಕ್ಷ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿರುವವರ, ಶೋಷಿತ ಜನರ ಆಶಾಕಿರಣವಾಗಿ ಪಕ್ಷ ಮುನ್ನುಗ್ಗುತ್ತಾ ಬೆಳೆಯುತ್ತಿದೆ. ಪಕ್ಷದ ಬೆಳವಣಿಗೆಯನ್ನು ತಾಲೂಕಿನಲ್ಲಿ ತಡೆ ಮಾಡಲು ರಾಜಕೀಯ ಪಕ್ಷಗಳೊಂದಿಗೆ ಜನರಿಂದ ತಿರಸ್ಕೃತರಾದ ಸಂಘಟನೆಗಳು ಒಂಟಿ ಕಾಲಲ್ಲಿ ಹೋರಾಡುತ್ತಿವೆ. ಆದರೆ ಮಾಡುವುದೇನು? ತಡೆ ಮಾಡುವ ರೀತಿಯೇ ಸಿಗದಿದ್ದಾಗ ಸಣ್ಣಪುಟ್ಟ ವಿಚಾರಗಳ ಬಗ್ಗೆ ಗೂಬೆ ಕೂರಿಸುವುದು, ಅದನ್ನೇ ರಂಪಾಟ ಮಾಡಿ ಹೆದರಿಸುವಂತಹ ಕ್ರಮ ಈ ದಂಡ ಪಿಂಡ ಸಂಘಟನೆಗಳಿಗೆ ಮಾಮೂಲಿಯಾಗಿದೆ.

ಕಚೇರಿಗೆ ಬೆದರಿಕೆ ಪತ್ರ

ಅಂದು ಬುಧವಾರ ಮಾರ್ಚ್ 12ರ ಬೆಳಿಗ್ಗೆ 8ರ ಸಮಯ ಬೆಳ್ತಂಗಡಿಯಲ್ಲಿ ಪಕ್ಷದ ಕಚೇರಿ ತೆರೆಯುವ ಸಮಯ. ಪಕ್ಷದ ಕಾರ್ಯಕರ್ತೆಯೋರ್ವರು ಕಚೇರಿಗೆ ಬಂದಾಗ ರಟ್ಟಿನ ತುಂಡೊಂದರಲ್ಲಿ - ''ಜೈ ಶ್ರೀರಾಮ್'', ಕಮ್ಯೂನಿಸ್ಟರೇ, ಕಾಲಿಗೆ ಮುಳ್ಳು ಚುಚ್ಚಿದರೆ ಅದು ಇಡೀ ದೇಹಕ್ಕೆ ನೋವು ಆಗಿ ಕಣ್ಣಲ್ಲಿ ನೀರು ಬರುತ್ತದೆ. ಅಂತೆಯೇ ಕೇರಳದ ಕಣ್ಣೂರು ಸಹ. ಕೆಣಕಿದರೆ ಎಚ್ಚರಿಕೆ ಹಿಂದೂ ಸಮಾಜ ಎದ್ದಿದೆ. ನಿಮ್ಮ ಮೋಸ, ವಿದೇಶಿ ನಿಷ್ಟೆ ಬಯಲಾಗಿದೆ. ನಿಮ್ಮ ರಕ್ತ ಹೀರುವುದು ಖಂಡಿತ. ಜೈಹಿಂದ್, ಜೈ ಶ್ರೀ ರಾಮ್" ಈ ರೀತಿ ಬರೆದು ಕಚೇರಿಯ ಬಾಗಿಲಲ್ಲಿ ನೇತು ಹಾಕಲಾಗಿತ್ತು. ತಕ್ಷಣ ಈ ವಿಚಾರ ಪಕ್ಷದ ನಾಯಕರಿಗೆ ತಿಳಿಸಲಾಯಿತು. ಪಕ್ಷದ ಕಾರ್ಯದರ್ಶಿಯವರು ಬೆಳ್ತಂಗಡಿ ಪೊಲೀಸರಿಗೆ ದೂರು ನೀಡಿದರು. ತಕ್ಷಣ ಪೊಲೀಸರು ಆಗಮಿಸಿ ಈ ಬಗ್ಗೆ ತನಿಖೆ ಕೈಗೊಂಡರು. ತನಿಖೆ ಇನ್ನೂ ಮುಂದುವರೆದಿದೆ. ಇದೀಗ ಪಕ್ಷದ ಕಚೇರಿಗೆ ರಾತ್ರಿ ಸಮಯ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಈ ಬಗ್ಗೆ ಪಕ್ಷದ ನಾಯಕರು, ಕಾರ್ಯಕರ್ತರು ವಿಚಲಿತರಾಗದೆ ಪಕ್ಷವನ್ನು ಮುನ್ನಡೆಸಲು ಸ್ಫೂರ್ತಿ ಪಡೆದಿರುವುದು ಮಾತ್ರ ನಿಜ.

ಎದುರಿಸಲು ಶಕ್ತಿ ಇಲ್ಲದವರು !

ಕಾಂಗ್ರೆಸ್, ಜೆಡಿ(ಎಸ್) ಪಕ್ಷದವರು ವೇದಿಕೆ ಸಿಕ್ಕಿದರೆ ಜಾತ್ಯಾತೀತತೆಯ ಬಗ್ಗೆ ಬಾರೀ ಬೊಗಳೆ ಬಿಡುತ್ತಾರೆ. ಆದರೆ ಕಾರ್ಯರೂಪದಲ್ಲಿ ಮಾತ್ರ ಜಿರೋ ಎಂಬುವುದಕ್ಕೆ ಉದಾಹರಣೆ ಇಲ್ಲಿದೆ. ಸಿಪಿಐ(ಎಂ) ಪಕ್ಷದ ಕಚೇರಿಗೆ ಬಿಜೆಪಿ, ಆರ್‌ಎಸ್‌ಎಸ್ ನ ಬೆದರಿಕೆ ಪತ್ರ ಬಂದಿರುವ ವಿಚಾರ ಕ್ಷಣಾರ್ಧರದಲ್ಲಿ ಕಾಳ್ಗಿಚ್ಚಿನಂತೆ ಹರಡಿತ್ತು. ಆದರೆ ತಾಲೂಕಿನ ಕಾಂಗ್ರೆಸ್, ಜೆಡಿಎ(ಎಸ್), ಬಿಎಸ್‌ಪಿ ಸೇರಿದಂತೆ ಯಾವುದೇ ಪಕ್ಷಗಳು ಖಂಡಿಸದೇ ಷಂಡರಂತೆ ವರ್ತಿಸಿದ್ದು, ಮಾತ್ರ ಇವರ ಮೃದು ಹಿಂದುತ್ವವನ್ನು ಸಾಬೀತು ಮಾಡಿಸುವಂತಿದೆ. ಒಟ್ಟಿನಲ್ಲಿ ಬಿಜೆಪಿಯನ್ನು ಎದುರಿಸಲು ಶಕ್ತಿಯಿಲ್ಲದವರಾಗಿ ವರ್ತಿಸುತ್ತಿದ್ದಾರೆ. ಇದಕ್ಕೆ ಕಾರಣವೂ ಇದೆ. ಕಳೆದ ವರ್ಷ ಆರ್‌ಎಸ್‌ಎಸ್ ಗುರು ಗೋಲ್ವಾಲ್ಕರ್ ಜನ್ಮಶತಮಾನೋತ್ಸವ ಸಮಿತಿಯಲ್ಲಿ ಜಾತ್ಯಾತೀತತೆಯ 'ರೂವಾರಿ'ಗಳಾದ ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ನಾಯಕರಿದ್ದರು. ಆ ಸಮಯ ಒಂದೇ ತಟ್ಟೆಯಲ್ಲಿ ಊಟ ಮಾಡಿದವರು ಈಗ ಯಾವ ಮುಖದಲ್ಲಿ ಬಿ.ಜೆ.ಪಿ.ಯನ್ನು ಎದುರಿಸಬೇಕೆಂಬ ಕೀಳರಿಮೆ ಕಾಂಗ್ರೆಸ್, ಜೆಡಿ(ಎಸ್) ನಾಯಕರಲ್ಲಿದ್ದಿರಬಹುದು. ಒಟ್ಟಿನಲ್ಲಿ ಬೆಳ್ತಂಗಡಿಯಲ್ಲಿ ಕೋಮುವಾದದ ವಿರುದ್ಧ ಸಿಪಿಐ(ಎಂ) ಪಕ್ಷ ಏಕಾಂಗಿ ಹೋರಾಟ ಮಾಡಬೇಕಾದ ಅನಿವಾರ್ಯತೆಯಿದೆ.

ಭಯೋತ್ಪಾದಕರಿವರು!

ಧರ್ಮ ರಕ್ಷಣೆ ಹೆಸರಿನಲ್ಲಿ ಧರ್ಮವೊಂದನ್ನು ಬಿಟ್ಟು, ಬೇರೆಲ್ಲ ಭಯೋತ್ಪಾದನೆ ಕೆಲಸ ಮಾಡುವ ಇವರು ತಮ್ಮ ವಿರೋಧಿಗಳನ್ನು ಬಗ್ಗುಬಡಿಯಲು ಯಾವುದೇ ಆಧುನಿಕ ಅಸ್ತ್ರಗಳನ್ನು ಉಪಯೋಗಿಸಲು ಹೇಸಲಾರರು. ಶ್ರೀ ನಿಡುಮಾಮಿಡಿ ಸ್ವಾಮಿಜೀ ಹೇಳುವಂತೆ "ಲಾಠಿಯಿಂದ ತ್ರಿಶೂಲ, ಮುಂದೆ ಗನ್" ಎಂಬಂತೆ ಬೆಳ್ತಂಗಡಿಯ ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷ ವಸಂತ ಭಟ್ ಮನೆಯಲ್ಲಿ ಪರವಾನಿಗೆ ರಹಿತ ನಾಡ ಬಂದೂಕ್ ಇತ್ತೀಚೆಗೆ ಪತ್ತೆಯಾಗಿತ್ತು. ಸದಾ ತನ್ನ ಬಾಯಿ ಹರಕುತನದಿಂದ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದ ಈತ ಬಾಯಿ ಬಿಟ್ಟರೆ ಕೆಎಫ್‌ಡಿ ನಾಯಕರನ್ನು ಮೀರಿಸುತ್ತಿದ್ದ. ಮುಸ್ಲೀಮರ ಮನೆಯಲ್ಲಿ ಈ ರೀತಿ ಬಂದೂಕು ಇಟ್ಟಿದ್ದಿದ್ದರೆ ಭಯೋತ್ಪಾದಕರ ಪಟ್ಟಿಗೆ ಸೇರುತ್ತಿದ್ದರು. ಆದರೆ ಈತ ಮಾತ್ರ ಪೊಲೀಸರ ಸಹಕಾರದಿಂದ ಇನ್ನೂ 'ತಲೆ ಮರೆಸಿಕೊಂಡಿದ್ದಾನೆ.. ಈ ಪ್ರಕರಣವನ್ನು ಮುಚ್ಚಿ ಹಾಕಿ ಮುಖ ಉಳಿಸಿಕೊಳ್ಳಲು ದೇಶಪ್ರೇಮಿಗಳ ಸೋಗಿನಲ್ಲಿ ದೇಶವನ್ನು ಒಡೆಯುತ್ತಿರುವ ಇತರ ಹಿಂದೂ ಭಯೋತ್ಪಾದಕರು ಪ್ರಯತ್ನ ನಡೆಸಿದ್ದಾರೆ. ಒಟ್ಟಿನಲ್ಲಿ ಬಗಲಲ್ಲಿ ಬಂದೂಕು ಇಟ್ಟುಕೊಂಡು ಭಯೋತ್ಪಾದನೆಯ ವಿರುದ್ಧ 'ಜನಜಾಗೃತಿ' ಮಾಡುವ ಇವರ ಮನಸ್ಥಿತಿ ಯಾವ ರೀತಿಯಾದದ್ದು? ಎಂಬ ಪ್ರಶ್ನೆ ಉತ್ತರವಿಲ್ಲದೆ ಉಳಿದಿದೆ.

ಧಮುಕಿ

ಇಡೀ ದೇಶದಾದ್ಯಂತ ಸಿಪಿಐ(ಎಂ) ಕಛೇರಿ ಮತ್ತು ಮುಖಂಡರ ಮೇಲೆ ಧಾಳಿ ಮಾಡಿರುವ ಸಂಘ ಪರಿವಾರದ ವಿರುದ್ಧ ಇತ್ತೀಚೆಗೆ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯ ತೀರ್ಮಾನದಂತೆ ದ.ಕ. ಜಿಲ್ಲೆಯ ವಿವಿಧ ಕಡೆ ಪ್ರತಿಭಟನೆ ನಡೆದಿದೆ. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ದ.ಕ. ಜಿಲ್ಲೆಯ ಬಿಜೆಪಿಯ ಅಧ್ಯಕ್ಷ ಮೋನಪ್ಪ ಭಂಡಾರಿಯೆಂಬಾತ "ದ.ಕ. ಜಿಲ್ಲೆಯ ಕಮ್ಯೂನಿಸ್ಟರ ಪ್ರತಿಭಟನೆ ಜಿಲ್ಲೆಯ ಶಾಂತಿಪ್ರಿಯ ಜನತೆಯನ್ನು ರೊಚ್ಚಿಗೆಬ್ಬಿಸುತ್ತಿದೆ. ಇದು ಸ್ಫೋಟಗೊಂಡು ಮುಂದೆ ಯಾವುದೇ ಅನಾಹುತವಾಗಬಹುದು". "ಕೇರಳದ ಕಮ್ಯೂನಿಸ್ಟರಿಗೆ ಬುದ್ಧಿವಾದ ಹೇಳಿದರೆ ಉತ್ತಮ. ತಪ್ಪಿದಲ್ಲಿ ದ.ಕ. ಜಿಲ್ಲೆಯಲ್ಲಿ ಮುಂದೆ ಏನೂ ನಡೆಯಬಹುದು" ಎಂಬ ಬೆದರಿಕೆಯನ್ನು ಹಾಕಿದ್ದು ಓರ್ವ ನ್ಯಾಯವಾದಿಯಾಗಿರುವ ಈತ ಈ ರೀತಿ ಉರಿಯುವ ಬೆಂಕಿಗೆ ತುಪ್ಪ ಸುರಿಯಲು ಹೊರಟರೆ ಉಳಿದವರ ಗತಿಯೇನು?

■ ಕಾವ್ಯ, ಬೆಳ್ತಂಗಡಿ

ಇಸ್ರೇಲಿ ಶಸ್ತ್ರಾಸ್ತ್ರ ಕಂಪನಿಗಳ ಭ್ರಷ್ಟಾಚಾರ

ಇಸ್ರೇಲ್ ಈಗ ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ದೇಶಗಳಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ ಈ ಸ್ಥಾನ ಪಡೆಯಲು ಅಲ್ಲಿನ ಸರಕಾರೀ ಮತ್ತು ಖಾಸಗೀ ಶಸ್ತ್ರಾಸ್ತ್ರ ಕಂಪನಿಗಳು ಈ ದೇಶದ ಕಾನೂನುಗಳನ್ನು ಉಲ್ಲಂಘಿಸಿವೆ, ಲಂಚಕೋರತನವನ್ನು ಬೆಳೆಸಿವೆ ಎಂದು ಈಗ ಭಾರತದಲ್ಲೂ, ಸ್ವತಃ ಇಸ್ರೇಲಿನಲ್ಲೂ ಬಯಲಿಗೆ ಬರುತ್ತಿದೆ. ಆದರೆ ಭಾರತ ಸರಕಾರ ಈ ಬಗ್ಗೆ ಏನೂ ಕ್ರಮ ಕೈಗೊಳ್ಳುತ್ತಿಲ್ಲ. ಈ ಹಿಂದೆ ಕುಖ್ಯಾತ ಬೊಫೋರ್ಸ್ ಹಗರಣದಲ್ಲಿ ಮಧ್ಯಸ್ಥಗಾರರನ್ನು ಬಳಸಿದ್ದಕ್ಕಾಗಿ ಸ್ವೀಡಿಷ್ ಕಂಪನಿ ಬೊಫೋರ್ಸ್‌ನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗಿತ್ತು. 2005ರಲ್ಲಿ ದಕ್ಷಿಣ ಆಫ್ರಿಕಾದ ಕಂಪನಿ ಡೆನೆಲ್ ಕೂಡಾ ಈ ರೀತಿ ನಮ್ಮ ದೇಶದ ಕಾನೂನನ್ನು ಉಲ್ಲಂಘಿಸಿ ಶಸ್ತ್ರಾಸ್ತ್ರ ವ್ಯವಹಾರಗಳಲ್ಲಿ ಮಧ್ಯಸ್ಥಗಾರರನ್ನು ಬಳಸಿದ್ದಕ್ಕಾಗಿ ಮತ್ತು ಲಂಚ ಕೊಟ್ಟದ್ದಕ್ಕಾಗಿ ಕಪ್ಪು ಪಟ್ಟಿಗೆ ಸೇರಿತ್ತು. ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆದರೆ ಇಸ್ರೇಲಿ ಸರಕಾರೀ ಒಡೆತನದ ಐಎಐ(ಇಸ್ರೇಲ್ ಏರ್ ಕ್ರಾಫ್ಟ್ ಇಂಡಸ್ಟ್ರೀಸ್) ಮತ್ತು ರಫೇಲ್ ಕಾರ್ಪೊರೇಷನ್ ವಿರುದ್ಧ ಇಂತಹ ಯಾವುದೇ ಕ್ರಮ ಕೈಗೊಂಡಿಲ್ಲ ಮಾತ್ರವಲ್ಲ ಅವರೊಡನೆ ಇನ್ನೊಂದು ವ್ಯವಹಾರವನ್ನು ಕುದುರಿಸಲು ಮುಂದಾಗಿರುವ ಬಗ್ಗೆ ದೇಶದಲ್ಲಿ ಆತಂಕ ಮೂಡಿದೆ. ಈ ವಿಷಯವಾಗಿ ಎಡಪಕ್ಷಗಳು ಮಾರ್ಚ್ 17ರಂದು ಪ್ರಧಾನಮಂತ್ರಿಗಳಿಗೆ ಪತ್ರ ಬರೆದಿವೆ.

ತೆಹಲ್ಕಾ ಟೇಪು ಹಗರಣದಲ್ಲಿ ಬಾರಾಕ್ ಕ್ಷಿಪಣಿಗಳ ಖರೀದಿಯಲ್ಲಿ ಅವ್ಯವಹಾರ ನಡೆದ ಬಗ್ಗೆ ದೊಡ್ಡ ಸುದ್ದಿಯಾದದ್ದು ನಮ್ಮ ಓದುಗರಿಗೆ ನೆನಪಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಾವಧಿಯಲ್ಲಿ ಮೇಲೆ ಹೇಳಿದ ಇಸ್ರೇಲಿ ಕಂಪನಿಗಳೊಂದಿಗೆ ಹಡಗಿನಿಂದ ಹಾರಿಸುವ ಬಾರಾಕ್ ಕ್ಷಿಪಣಿಗಳ ಪೂರೈಕೆಗಾಗಿ 1300ಕೋಟಿ ರೂಪಾಯಿಗಳ ವ್ಯವಹಾರವಾಗಿತ್ತು. ಆದರೆ ಈ ವ್ಯವಹಾರದಲ್ಲಿ ವಿಧಿ-ವಿಧಾನಗಳ ಉಲ್ಲಂಘನೆ ಮಾತ್ರವಲ್ಲ, ನೇರವಾಗಿ ಲಂಚಗುಳಿತನವೂ ಇತ್ತು ಎಂಬುದನ್ನು ತೆಹಲ್ಕಾ ಟೇಪುಗಳು ಹೊರಗೆಳೆದಿದ್ದವು. ಇತ್ತೀಚೆಗೆ ಈ ವ್ಯವಹಾರದಲ್ಲಿ ಇದ್ದಾರೆ ಎನ್ನಲಾದ ದಿಲ್ಲಿಯ ಶಸ್ತ್ರಾಸ್ತ್ರ ವ್ಯಾಪಾರಿಗಳಾದ ನಂದಾ ಮತ್ತು ಆತನ ಸಂಗಡಿಗರ ಬಂಧನ ಇದಕ್ಕೆ ಮತ್ತಷ್ಟು ಪುರಾವೆ. 2006ರಲ್ಲಿ ಸಿಬಿಐ ಸಲ್ಲಿಸಿದ ಎಫ್‌ಐಆರ್ ಇಸ್ರೇಲಿ ಕಂಪನಿ ಐಎಐ ಯನ್ನು ಆಪಾದಿತ ಎಂದೂ ಸುರೇಶ್ ನಂದಾ ಮತ್ತು ಆತನ ಕುಟುಂಬದವರನ್ನು ಈ ಕಂಪನಿಯ ಏಜೆಂಟರೆಂದೂ ನಮೂದಿಸಿದೆ.

ಅಷ್ಟೇ ಅಲ್ಲ, ಇತ್ತೀಚೆಗೆ ಇಸ್ರೇಲಿನಲ್ಲೂ ಈ ಎರಡು ಕಂಪನಿಗಳ ಲಂಚಕೋರತನ ಮತ್ತು ಭ್ರಷ್ಟಾಚಾರದ ಬಗ್ಗೆ , ಅವು ಭಾರತದ ಏಜೆಂಟರಿಗೆ ಲಂಚ ನೀಡಿದ ಬಗ್ಗೆ ಪುರಾವೆಗಳು ಬೆಳಕಿಗೆ ಬಂದಿವೆ. ತನ್ನ ಬದಲಿಗೆ ಇನ್ನೊಬ್ಬ ಏಜೆಂಟನೊಂದಿಗೆ ವ್ಯವಹಾರ ಕುದುರಿಸಲಾಗಿದೆ, ತನಗೆ ಹೆಚ್ಚಿನ ಕಮಿಶನ್ ಕೊಡಬೇಕು ಎಂದು ಒಬ್ಬ ಭಾರತೀಯ ಏಜೆಂಟ್ ಇಸ್ರೇಲಿನ ರಕ್ಷಣಾ ಇಲಾಖೆಗೆ ಅರ್ಜಿ ಹಾಕಿದ್ದು 2005ರ ವರೆಗೆ ಐಎಐ ಕಂಪನಿಯ ಮುಖ್ಯಸ್ಥನಾಗಿದ್ದ ಮೋಷೆ ಕೆರೆಟ್ಸ್ ಮತ್ತೊಬ್ಬ ಏಜೆಂಟನನ್ನು ಬಂಧಿಸಲಾಗಿದೆ.

ಹೀಗಿದ್ದರೂ ಇಸ್ರೇಲಿ ಕಂಪನಿಗಳ ವಿರುದ್ಧ ಕ್ರಮವನ್ನು ಕೈಗೊಂಡಿಲ್ಲ, ಮಾತ್ರವಲ್ಲ, ಅವರೊಡನೆ ಮತ್ತೆ 10,000ಕೋಟಿ ರೂಪಾಯಿಗಳ ವ್ಯವಹಾರಕ್ಕೆ ಯುಪಿಎ ಸರಕಾರ ಸಹಿ ಹಾಕಿರುವ ಬಗ್ಗೆ ಎಡಪಕ್ಷಗಳು ತೀವ್ರ ಆತಂಕ ವ್ಯಕ್ತಪಡಿಸಿವೆ. ಭಾರತ ಈಗ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಪಡೆಯಲು ಹೊರಟಿರುವಾಗ ದೇಶದ ಕಾನೂನುಗಳನ್ನು ಉಲ್ಲಂಘಿಸುವ ಇಂತಹ ಕೃತ್ಯಗಳ ಬಗ್ಗೆ ಕಣ್ಣು ಮುಚ್ಚಿ ಕೂತಿರುವುದು ತಪ್ಪು ಸಂಕೇತ ನೀಡುತ್ತದೆ, ಇಡೀ ವ್ಯವಸ್ಥೆಯನ್ನು ಅದು ಭ್ರಷ್ಟಗೊಳಿಸುವ ಸಾಧ್ಯತೆಯಿದೆ ಎಂದು ಎಡ ಪಕ್ಷಗಳು ಎಚ್ಚರಿಸಿವೆ. ಇದು ಶಸ್ತ್ರಾಸ್ತ್ರ ಉತ್ಪಾದನೆಯಲ್ಲಿ ಸ್ವಾವಲಂಬನೆಯ ಆಗತ್ಯವನ್ನು ಕೂಡಾ ತೋರಿಸುತ್ತದೆ ಎಂದು ಅವು ಹೇಳಿವೆ.

ಯುಪಿಎ ಸರಕಾರ ತಪ್ಪಿತಸ್ಥ ಇಸ್ರೇಲಿ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಸಿಬಿಐ ಬಾರಾಕ್ ಹಗರಣದ ತನಿಖೆಯನ್ನು ಪೂರ್ಣಗೊಳಿಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂದು ಎಡಪಕ್ಷಗಳು ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿವೆ.

ನಂದಿಗ್ರಾಮದಲ್ಲಿ ಈಗ ಅಭಿವೃದ್ಧಿ ಚಟುವಟಿಕೆಗಳ ಭರಾಟೆ

ಇರಾಕ್, ಅಫಘನಿಸ್ತಾನ ಮತ್ತು ಗುವಾಂಟನಮೋದ ಅಮೆರಿಕನ್ ಬಂಧಿಖಾನೆಯಲ್ಲಿ ಅಮೆರಿಕನ್ ಪಡೆಗಳು ಪ್ರತಿದಿನ ಅತ್ಯಾಚಾರಗಳನ್ನು ನಡೆಸುತ್ತಿದ್ದರೂ, ಅದನ್ನು ಸಮರ್ಥಿಸಿಕೊಂಡೇ ವಿಶ್ವದ ಯಾವ ಭಾಗದಲ್ಲಿ ಏನು 'ಮಾನವ ಹಕ್ಕುಗಳ ಉಲ್ಲಂಘನೆ' ನಡೆಯುತ್ತಿದೆ ಎಂದು ಸದಾ ಹುಡುಕುತ್ತಿರುವ ಅಮೆರಿಕಾದ ವಿದೇಶಾಂಗ ಇಲಾಖೆಗೆ ಎಡರಂಗದ ಆಡಳಿತದ ಪಶ್ಚಿಮ ಬಂಗಾಳದ ನಂದಿಗ್ರಾಮ ಕಾಣದಿರಲು ಸಾಧ್ಯವೇ?ಆದರೆ ಅವರೇನೇ ಹೇಳಲಿ, ಒಂದು ವರ್ಷದ ಭೀಕರ ಅನುಭವಗಳ ನಂತರ ಅಲ್ಲಿ ಮತ್ತೆ ಜನಜೀವನ ಸಾಮಾನ್ಯಗೊಳ್ಳುತ್ತಿದೆ, ಅಭಿವೃದ್ಧಿ ಕಾರ್ಯಕ್ರಮಗಳು ಭರದಿಂದ ಸಾಗಿವೆ.

ನಂದಿಗ್ರಾಮದ ಬ್ಲಾಕ್ 1ರಲ್ಲಿ 62ಲಕ್ಷ ರೂ.ಗಳ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಎಲ್ಲಾ ಪಂಚಾಯತುಗಳಲ್ಲಿ ಜಾಬ್ ಕಾರ್ಡುಗಳನ್ನು ವಿತರಿಸಲಾಗಿದೆ. 72ಲಕ್ಷ ರೂ. ಖರ್ಚಿನಲ್ಲಿ ಕಾಲುವೆ ಆಧಾರಿತ ನೀರಾವರಿ ವ್ಯವಸ್ಥೆಯನ್ನು ಸರಿಪಡಿಸಲಾಗುತ್ತಿದೆ. ವಿವಿಧ ಕಾಮಗಾರಿಗಳಿಂದ ಕಳೆದ ಎರಡು ತಿಂಗಳಲ್ಲಿ 20ಲಕ್ಷ ರೂ.ಗಳಷ್ಟು ಉದ್ಯೋಗ ಒದಗಿಸಲಾಗಿದೆ. ಗ್ರಾಮೀಣ ವಿದ್ಯುದೀಕರಣ ಭರದಿಂದ ಸಾಗಿದೆ. ಇದಕ್ಕಾಗಿ 20 ಲಕ್ಷ ರೂ.ಗಳ ಹೊಸ ಯೋಜನೆ ಆರಂಭಗೊಂಡಿದೆ.

ಹೊಸದೊಂದು ಸೇತುವೆ ನಿರ್ಮಾಣಗೊಳ್ಳುತ್ತಿದೆ. ಹೊಸದಾಗಿ ನಾಲ್ಕು ಮಾಧ್ಯಮಿಕ ಶಾಲೆಗಳು ಮತ್ತು ಇನ್ನೂ ನಾಲ್ಕು ಮಕ್ಕಳ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. 22 ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗುತ್ತಿದೆ. ಏಳು ಹೈಸ್ಕೂಲುಗಳ ಅಭಿವೃದ್ಧಿಗೆ ತಲಾ 2ಲಕ್ಷ ರೂ. ಅನುದಾನ ನೀಡಲಾಗಿದೆ.

ಆರು ಪಂಚಾಯತುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಆರಂಭವಾಗುತ್ತಿವೆ. 22 ಕೊಳವೆ ಬಾವಿಗಳು ನಿರ್ಮಾಣಗೊಳ್ಳುತ್ತಿವೆ. 100 ಸ್ವಯಂ ಸೇವಾ ಗುಂಪುಗಳಿಗೆ ಪ್ರಾಣಿ ಸಂಪನ್ಮೂಲ ಇಲಾಖೆ 1.2ಲಕ್ಷ ಕೋಳಿಮರಿಗಳನ್ನು ಒದಗಿಸಿದೆ.

ಈ ಅಭಿವೃದ್ಧಿ ಚಟುವಟಿಕೆಗಳಿಂದಾಗಿ ಮತ್ತು ಗ್ರಾಮೀಣ ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ತೃಣಮೂಲ- ಮಾವೋವಾದಿ ಕೂಟ ಅಲ್ಲಲ್ಲಿ ತಮ್ಮ ಹಿಂಸಾಕಾರ್ಯವನ್ನು ಮುಂದುವರೆಸುವ ಪ್ರಯತ್ನ ನಡೆಸಿವೆ. ಈ ಮೂಲಕ ತಮ್ಮ ಹತಾಶೆಯನ್ನು ವ್ಯಕ್ತಗೊಳಿಸುತ್ತಿವೆ.

'ಬೆಲೆಯೇರಿಕೆಯನ್ನು ತಡೆಯಲು ತಕ್ಷಣ ಕ್ರಮಗಳು ಅಗತ್ಯ' ಸಂಸತ್ತಿನ ಎದುರು ಎಡಪಕ್ಷಗಳ ಧರಣಿ

ಬೆಲೆಯೇರಿಕೆ ಇನ್ನಷ್ಟು ತೀವ್ರಗೊಳ್ಳುತ್ತಿದೆ. ಸಗಟು ಸೂಚ್ಯಂಕ ಆಧಾರಿತ ಹಣದುಬ್ಬರ 6ಶೇ. ತಲುಪುತ್ತಿದೆ. ಮುಖ್ಯವಾಗಿ ಆಹಾರ ಪದಾರ್ಥಗಳ ಬೆಲೆಯೇರಿಕೆಯಿಂದಾಗಿ ಇದು ಸಂಭವಿಸುತ್ತಿದೆ ಎಂಬುದು ಸ್ಪಷ್ಟವಾಗಿದೆ. ಜನಗಳು ಇಂತಹ ಬೆಲೆಯೇರಿಕೆಗಳಿಂದ ತತ್ತರಿಸುತ್ತಿದ್ದಾರೆ. ಯುಪಿಎ ಸರಕಾರ ಇದು ಆರ್ಥಿಕದಲ್ಲಿ ಹಣದ ಹರಿವು ಹೆಚ್ಚಾಗಿ ಆಗಿರುವ ಹಣದುಬ್ಬರ ಎನ್ನುತ್ತಿದೆ. ಆದರೆ ಇಂತಹ ವಿಶ್ಲೇಷಣೆ ಮೂಲ ಅಂಶವನ್ನೇ ಕಾಣುವುದಿಲ್ಲ, ಆದ್ದರಿಂದ ಇತ್ತೀಚಿನ ಬಜೆಟ್ ಬೆಲೆಯೇರಿಕೆ ತಡೆಯುವ ಕ್ರಮಗಳನ್ನು ಸೂಚಿಸುವಲ್ಲಿ ವಿಫಲವಾಗಿದೆ ಎಂದಿರುವ ಎಡ ಪಕ್ಷಗಳು ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ತಡೆಯಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿ ಮಾರ್ಚ್18ರಂದು ಸಂಸತ್ತಿನ ಎದುರು ಧರಣಿ ನಡೆಸಿದವು.

ಆಹಾರ ಪದಾರ್ಥಗಳ ಬೆಲೆಯೇರಿಕೆಗೆ ಮೂಲ ಕಾರಣ ಯುಪಿಎ ಸರಕಾರ ಅವುಗಳಲ್ಲಿ ಮುಂಗಡ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟದ್ದು. ಈ ಮಾರುಕಟ್ಟೆಯಲ್ಲಿನ ಸಟ್ಟಾಕೋರತನದಿಂದಾಗಿ ಬೆಲೆಗಳು ಏರಿವೆ. ಸಂಸದೀಯ ಸ್ಥಾಯೀ ಸಮಿತಿ ಕೂಡಾ ಇದನ್ನು ಗಮನಿಸಿ 25 ಕೃಷಿ ಸರಕುಗಳಲ್ಲಿ ಮುಂಗಡ ವ್ಯಾಪಾರವನ್ನು ನಿಷೇಧಿಸಬೇಕು ಎಂದು ಹೇಳಿದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಗೊಳಿಸುವ ಬದಲು ಮೊಟಕುಗೊಳಿಸುವ ನೀತಿಗಳು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸಿವೆ. ಆದ್ದರಿಂದ ಎಡಪಕ್ಷಗಳ ಈ ಧರಣಿಯಲ್ಲಿ ಬೆಲೆಯೇರಿಕೆಯನ್ನು ತಡೆಯಲು ಈ ಕೆಳಗಿನ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು:

1. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು (ರೇಷನ್)ಬಲಗೊಳಿಸಬೇಕು, ಅದನ್ನು ಸಾರ್ವತ್ರಿಕಗೊಳಿಸಿ ಎಲ್ಲರಿಗೂ ರೇಶನ್ ಕಾರ್ಡ್ ನೀಡಬೇಕು ಹಾಗೂ ರಾಜ್ಯಗಳ ಕೋಟಾಗಳಲ್ಲಿ ಕಡಿತಗಳನ್ನು ನಿಲ್ಲಿಸಬೇಕು.
2. ಸಂಸತ್ತಿನ ಸ್ಥಾಯೀ ಸಮಿತಿಯ ಪ್ರಸ್ತಾಪದಂತೆ 25 ಕೃಷಿ ಸರಕುಗಳಲ್ಲಿ ಮುಂಗಡ ವ್ಯಾಪಾರವನ್ನು ನಿಷೇಧಿಸಬೇಕು.
3. ತೈಲ ಆಮದುಗಳ ಮೇಲಿನ ಸೀಮಾಸುಂಕ ಮತ್ತು ಅಬಕಾರೀ ಸುಂಕಗಳನ್ನು ಕಡಿತ ಮಾಡಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯೇರಿಕೆಯಾಗದಂತೆ ಮಾಡಬೇಕು
4. ಆವಶ್ಯಕ ಸರಕುಗಳ ಕಳ್ಳ ದಾಸ್ತಾನಿನ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಎನ್‌ಡಿಎ ಸರಕಾರ ತೆಗೆದು ಹಾಕಿದ ಆವಶ್ಯಕ ಸರಕುಗಳ ಕಾನೂನಿನ ಅಂಶಗಳನ್ನು ಮತ್ತೆ ತರಬೇಕು.

ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾದ ಹಲವು ಸಂಸತ್ ಸದಸ್ಯರು ಹಾಗೂ ಶಾಸಕರು ಈ ಧರಣಿಯಲ್ಲಿ ಭಾಗವಹಿಸಿದ್ದರು. ಧರಣಿಯನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್, ಪಶ್ಚಿಮ ಬಂಗಾಳ್ ಎಡರಂಗದ ಅಧ್ಯಕ್ಷರಾದ ಬಿಮನ್ ಬಸು, ಸಿಪಿಐನ ಪ್ರಧಾನ ಕಾರ್ಯದರ್ಶಿ ಎ ಬಿ ಬರ್ಧನ್ ಮತ್ತು ಕಾರ್ಯದರ್ಶಿ ಡಿ. ರಾಜ, ಫಾರ್ವರ್ಡ್ ಬ್ಲಾಕ್ ನ ಪ್ರಧಾನ ಕಾರ್ಯದರ್ಶಿ ದೇವಬ್ರತ ಬಿಸ್ವಾಸ್, ಆರ್‌ಎಸ್‌ಪಿ ಕಾರ್ಯದರ್ಶಿ ಅಬನಿ ರಾಯ್ ಅಲ್ಲದೆ ಸಂಸತ್ ಸದಸ್ಯರಾದ ಬೃಂದಾ ಕಾರಟ್ ಹಾಗೂ ಎ ವಿಜಯರಾಘವನ್ ಮಾತನಾಡಿದರು.

ಜಮ್ಮು-ಕಾಶ್ಮೀರ : ಸಾರಿಗೆ ನೌಕರರ ಮೇಲೆ ದಮನಚಕ್ರ

ಕಳೆದ ಆರು ತಿಂಗಳಿಂದ ಪಾವತಿಯಾಗದಿರುವ ಸಂಬಳವನ್ನು ನೀಡಬೇಕು ಎಂದು ಆಗ್ರಹಿಸಿ ಧರಣಿ ಮಾಡುತ್ತಿದ್ದ ಜಮ್ಮು ಕಾಶ್ಮೀರ ಸಾರಿಗೆ ಕಾರ್ಮಿಕರ ಹಾಗೂ ಅವರ ಕುಟುಂಬದವರ ಮೇಲೆ ಅಲ್ಲಿಯ ಪೋಲೀಸರು ತೀವ್ರ ಲಾಠಿ ಪ್ರಹಾರ ನಡೆಸಿ ಅವರನ್ನು ಬಂಧಿಸಿದ್ದಾರೆ .ಇದನ್ನು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ ಬಲವಾಗಿ ಖಂಡಿಸಿದೆ. ಜೂನ್ ತಿಂಗಳಲ್ಲೇ ಸಾರಿಗೆ ಕಾರ್ಮಿಕರು ಚಳುವಳಿ ನಡೆಸಿದ್ದರು. ಆಗ ಸಿಐಟಿಯು ಮಧ್ಯಪ್ರವೇಶದಿಂದಾಗಿ ಮುಖ್ಯ ಮಂತ್ರಿಗಳೊಂದಿಗೆ ಮಾತುಕತೆ ನಡೆದು ಬಾಕಿ ಸಂಬಳವನ್ನು ತೆರಲಾಗುವುದು ಹಾಗೂ ಪ್ರಮುಖ ಸಮಸ್ಯೆಗಳನ್ನು ಇತ್ಯರ್ಥ ಮಾಡಲಾಗುವುದು ಎಂದು ಭರವಸೆ ನೀಡಲಾಯಿತು. ಆದರೆ ಈಗ ಮತ್ತೆ ಅದರ ಉಲ್ಲಂಘನೆಯಾಗಿದೆ. ಮತ್ತೆ ಚಳುವಳಿಗಿಳಿದ ಕಾರ್ಮಿಕರ ಮುಖಂಡರಾದ ಶಕೀಲ್ ಅಹ್ಮದ್ ಮತ್ತು ಇತರರನ್ನು ಬಂಧಿಸಿ ಜೈಲಿನಲ್ಲಿಡಲಾಗಿದೆ. ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಕೆ. ದಿವಾಕರನ್ ಜಮ್ಮು-ಕಾಶ್ಮೀರದ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಅವರನ್ನು ಬಿಡುಗಡೆ ಮಾಡಬೇಕು, ಈ ಸಂಬಂಧೀ ಎಲ್ಲ ಕರಾಳ ಕಾನೂನುಗಳನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಕಾರ್ಮಿಕರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಆಗ್ರಹಿಸಿದ್ದಾರೆ.



ಇಡೀ ಜಗತ್ತಿನ ಗಮನಸೆಳೆಯುತ್ತಿರುವ ಬೀಜಿಂಗ್ ಒಲಂಪಿಕ್ಸ್ ಇನ್ನೇನು ಆರಂಭವಾಗಬೇಕಿದೆ. ಈ ಘಟ್ಟದಲ್ಲಿ ಅದಕ್ಕೆ ಅಡ್ಡಿಪಡಿಸಲು ಬಯಸುವ ಶಕ್ತಿಗಳು ದಾಂಧಲೆ, ಹಿಂಸೆಗೆ ಇಳಿದಿವೆ.

ಲ್ಹಾಸಾ ಹಿಂಸಾಚಾರ

ಒಲಂಪಿಕ್ಸ್ ಹಾಳುಗೆಡಹವಲು ದಲೈ ಲಾಮ ಕುತಂತ್ರಗಳು

ಶರತ್‌ಚಂದ್ರ

ಟಿಬೆಟ್ ರಾಜಧಾನಿ ಲ್ಹಾಸಾ ಮತ್ತು ಇತರ ಕೆಲವು ಪಟ್ಟಣಗಳಲ್ಲಿ ಕಳೆದ ವಾರ ಭುಗಿಲೆದ್ದ ಚಳುವಳಿ, ಹಿಂಸಾಚಾರ ಟಿಬೆಟ್ ನ ಪ್ರಶ್ನೆಯ ಬಗ್ಗೆ ಪುನಃ ಅಂತರ್ರಾಷ್ಟ್ರೀಯ ಗಮನ ಸೆಳೆದಿದೆ. ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿದೆ. ಪತ್ರಿಕೆ ಫೋಟೊ ಮತ್ತು ಟಿವಿ ವಿಡಿಯೋಗಳನ್ನು ಗಮನಿಸಿದರೆ ಚಳುವಳಿಗಾರರು ಭಾರೀ ಹಿಂಸಾಚಾರದಲ್ಲಿ ತೊಡಗಿದರು ಎಂಬುದು ಸ್ಪಷ್ಟ. ಮೂವತ್ತಕ್ಕೂ ಹೆಚ್ಚು ಸ್ಕೂಲು, ಆಸ್ಪತ್ರೆ, ಬ್ಯಾಂಕ್, ಅಂಗಡಿ, ಸಾರ್ವಜನಿಕ ಕಟ್ಟಡಗಳಿಗೆ ಬೆಂಕಿ ಇಟ್ಟರು. ಹಾಳುಗೆಡವಲು ಪ್ರಯತ್ನಿಸಿದರು. ನೂರಕ್ಕೂ ಹೆಚ್ಚು ಮನೆಗಳೂ ಅದರಲ್ಲಿ ಸೇರಿದ್ದವು. ಹಲವು ಖಾಸಗಿ ಮತ್ತು ಸಾರ್ವಜನಿಕ ವಾಹನಗಳನ್ನು ಹಾಳುಗೆಡವಲು ಸುಡಲು ಪ್ರಯತ್ನಿಸಿದರು. 12 ಕ್ಕೂ ಹೆಚ್ಚು ಪೋಲಿಸರು, ಸಾರ್ವಜನಿಕರು ಈ ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ. ನೂರಾರು ಜನ ತೀವ್ರವಾಗಿ ಗಾಯಗೊಂಡಿದ್ದಾರೆ. ಹಿಂಸಾಚಾರದಲ್ಲಿ ಸುಮಾರು ಮೂರು ಕೋಟಿ ಡಾಲರುಗಳಷ್ಟು ಆಸ್ತಿ ಪಾಸ್ತಿಗಳಿಗೆ ನಷ್ಟವಾಗಿದೆ. ಮುನ್ನೂರಕ್ಕೂ ಹೆಚ್ಚು ಚಳುವಳಿಗಾರರು ಲ್ಹಾಸಾದ ಝ್ಯುಬಂಗ್ ಮತ್ತು ಇತರ ಬುದ್ಧಮಠಗಳಿಂದ ಬಂದಿದ್ದರು. ಚಳುವಳಿಗಾರರು ದಲೈ ಲಾಮಾರ ನಾಯಕತ್ವದ 'ಟಿಬೆಟ್ ದೇಶಾಂತರ ಸರ್ಕಾರ'ದ ಧ್ವಜಗಳನ್ನು ಹಿಡಿದಿದ್ದು ಇದು ಯೋಜಿತ ಹಿಂಸಾತ್ಮಕ ಚಳುವಳಿಯಾಗಿತ್ತು. ಚಳುವಳಿಗಾರರಿಗೆ ಜನಬೆಂಬಲ ಇರುವ ಯಾವ ಲಕ್ಷಣಗಳೂ ಕಾಣಲಿಲ್ಲ. ಭಾರೀ ರ‍್ಯಾಲಿಗಳು, ಪ್ರದರ್ಶನಗಳೂ ಕಾಣಲಿಲ್ಲ. 'ಟಿಬೆಟ್ ಸ್ವಾತಂತ್ರ್ಯ' ಎಂಬ ದಲೈ ಲಾಮಾರ ಬೆಂಬಲಿಗರ ಖಾಯಂ ಬೇಡಿಕೆ ಬಿಟ್ಟರೆ ಯಾವುದೇ ಜನವಿಭಾಗಗಳ ನಿರ್ದಿಷ್ಟ ಬೇಡಿಕೆ ಇಲ್ಲ. 'ಟಿಬೆಟ್ ಸ್ವಾತಂತ್ರ್ಯ'ದ ಬಗ್ಗೆ ಅಭಿಪ್ರಾಯ ಏನೇ ಇರಲಿ, ಇವೆಲ್ಲಾ ಈ ವರದಿಗಳಿಂದ ಹೊ ರಡುವ ನಿಜಸಂಗತಿಗಳು.

ಟಿಬೆಟ್ ನ ಹಿಂಸಾಚಾರವನ್ನು ಆರಂಭಿಸಿದ್ದು ಯಾರು ಎಂಬ ಬಗ್ಗೆ ಸಹಅಂತಹ ವಿವಾದ ಏನೂ ಇಲ್ಲ. ಚಳುವಳಿಗಾರರ ಹಿಂಸಾಚಾರ ಎದುರಿಸುವುದರಲ್ಲಿ ಟಿಬೆಟ್ ಪ್ರಾದೇಶಿಕ ಸರ್ಕಾರ ಸಾಕಷ್ಟು ಸಂಯಮ ತೋರಿತು. ಆದ್ದರಿಂದಲೇ ಹಿಂಸಾಚಾರ ಈ ಮಟ್ಟಕ್ಕೆ ಹೋಯಿತು. ಈ ಹಿಂಸಾಚಾರ ಟಿಬೇಟನ್ನರ ಮೇಲೆ ಚೀನಾ ಸರ್ಕಾರದ 'ದಮನ' ದ ಉದಾಹರಣೆ. ಆದ್ದರಿಂದ ಬೀಜಿಂಗ್ ಒಲಿಂಪಿಕ್ಸ್ ಬಹಿಷ್ಕರಿಸಬೇಕು ಎಂಬ ಭಾರತ ಮತ್ತು ಇತರ ದೇಶಗಳಲ್ಲಿ ದಲೈ ಲಾಮಾರ ಬೆಂಬಲಿಗರ ಹಿಂಸಾತ್ಮಕ ಪ್ರದರ್ಶನಗಳು, ಅದಕ್ಕೆ ಅಮೆರಿಕ ಮತ್ತು ಕೆಲವು ಯುರೋಪಿಯನ್ ರಾಜಕಾರಣಿಗಳ ಬೆಂಬಲ - ಇತ್ಯಾದಿ ಘಟನೆಗಳ ಸರಣಿ ಸೂಕ್ಷ್ಮವಾಗಿ ಗಮನಿಸಿದರೆ, ಈ ಚಳುವಳಿ ಮತ್ತು ಅದರ ಟೈಮಿಂಗ್ ಬೀಜಿಂಗ್ ಒಲಿಂಪಿಕ್ಸ್ ನಿಲ್ಲಿಸುವ ಅಥವಾ ಕನಿಷ್ಟ ಅದಕ್ಕೆ ಅಡೆ ತಡೆ ಒಡ್ಡುವ ಪ್ರಯತ್ನ. ಬೀಜಿಂಗ್ ಒಲಿಂಪಿಕ್ಸ್ ಮೂಲಕ ಚೀನಾಗೆ ಬರುವ ಅಂತರ್ರಾಷ್ಟ್ರೀಯ ಗಮನದ ಒಂದು ಭಾಗ 'ಟಿಬೆಟ್ ಸ್ವಾತಂತ್ರ್ಯ'ದತ್ತ ಸೆಳೆಯುವ ಪ್ರಯತ್ನ ಎಂದು ಕಾಣುತ್ತದೆ. ಆದ್ದರಿಂದ 'ಟಿಬೆಟ್ ಸ್ವಾತಂತ್ರ್ಯ' ಚಳುವಳಿ, ಅದರ ಹಿನ್ನೆಲೆ, ಚರಿತ್ರೆ ಬಗ್ಗೆ ಒಂದು ಕಿರು ವಿಶ್ಲೇಷಣೆ ಈ ಘಟನಾವಳಿ ಅರ್ಥ ಮಾಡಿಕೊಳ್ಳಲು ಅಗತ್ಯ.

ಟಿಬೆಟ್ ಒಂದು ಜನಾಂಗೀಯ, ಧಾರ್ಮಿಕ, ಸಾಂಸ್ಕೃತಿಕ ದೃಷ್ಟಿಯಿಂದ ವಿಶಿಷ್ಟತೆ ಇರುವ ಪ್ರದೇಶ ಎನ್ನುವ ಬಗ್ಗೆ ಸಂಶಯವಿಲ್ಲ. ಆದರೆ ರಾಜಕೀಯವಾಗಿ ಅದು ಒಂದು ಸ್ವತಂತ್ರ ದೇಶವಾಗಿತ್ತೆ 'ಟಿಬೆಟ್ ಚೀನಾ ಸರ್ಕಾರದ ವಸಾಹತು' ಆಗಿದೆಯೆ? 'ಟಿಬೆಟ್ ಸ್ವಾತಂತ್ರ್ಯ'ವನ್ನು ಕೇಳುತ್ತಿರುವವರು ಯಾರು? ಅದು ಟಿಬೆಟ್ ಜನತೆಯ ಬೆಂಬಲ ಪಡೆದಿದೆಯೆ? ಎನ್ನುವ ಪ್ರಶ್ನೆಗಳಿಗೆ ಉತ್ತರ ಹುಡುಕಲು ಪ್ರಯತ್ನಿಸೋಣ.

ಟಿಬೆಟ್ 13 ನೇ ಶತಮಾನದಿಂದಲೂ ಮಂಗೋಲ್ ಅಥವಾ ಚೀನಾದ ದೊರೆಗಳ ಆಡಳಿತಕ್ಕೆ ಒಳಪಟ್ಟಿತ್ತು. ಆಗಿನಿಂದಲೇ ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಅಧಿಕಾರವನ್ನು ಒಂದೇ ವ್ಯಕ್ತಿಯಲ್ಲಿ ಕೇಂದ್ರೀಕರಿಸಿದ ವಿಶಿಷ್ಟ ವ್ಯವಸ್ಥೆ ಬಳಕೆಗೆ ಬಂತು. ಆದರೆ ಈ ವ್ಯಕ್ತಿ ಮಂಗೋಲ್ ಅಥವಾ ಚೀನಾದ ದೊರೆಗಳ ಜತೆ ರಾಜ ಮತ್ತು ಪುರೋಹಿತರ ಅಥವಾ ಪ್ರಾದೇಶಿಕ ಸಾಮಂತರ ನಡುವೆ ಇರುವ ಸಂಬಂಧ ಇತ್ತು. 16 ನೆ ಶತಮಾನದಲ್ಲಿ ಗೆಲುಗ್ ಎಂಬ ಬುದ್ಧ ಪಂಥ ಟಿಬೆಟ್‌ನಲ್ಲಿ ಬಲವಾದ ಮೇಲೆ ಅದರ ಮುಖ್ಯಸ್ಥನನ್ನು 'ದಲೈ' ಎಂಬ ಬಿರುದು ಕೊಟ್ಟು ಮೊದಲ ಬಾರಿ ನೇಮಿಸಿದ್ದು ಮಿಂಗ್ ಎಂಬ ಮಂಗೋಲ ವಂಶದ ದೊರೆ ಎಂಬುದು ಚಾರಿತ್ರಿಕ ಸತ್ಯ. ಈಗಿನ ದಲೈ-ಲಾಮಾ ಪದ್ಧತಿ ಔಪಚಾರಿಕವಾಗಿ ಜಾರಿಗೆ ಬಂದಿದ್ದು 17 ನೇ ಶತಮಾನದ ಮಧ್ಯ. ಕಿಂಗ್ ವಂಶದ ದೊರೆ ಈಗ ಐದನೇ ದಲೈ-ಲಾಮಾ ಎಂದು ಕರೆಯಲಾಗುವ ವ್ಯಕ್ತಿಗೆ ಬೀಜಿಂಗ್‌ನಲ್ಲಿ 'ದಲೈ-ಲಾಮಾ' ಬಿರುದು ಮತ್ತು ಚೀನಾ ಚಕ್ರವರ್ತಿಯ ಪರವಾಗಿ ಆಳಲು ಚಿನ್ನದ ಮುದ್ರೆಯನ್ನು ಕೊಟ್ಟಿದ್ದು ಚರಿತ್ರೆಯಲ್ಲಿ ದಾಖಲಾಗಿದೆ. 'ದಲೈ-ಲಾಮಾ'ನನ್ನು ಹುಡುಕುವ ಮತ್ತು ನೇಮಿಸುವ ವಿಶಿಷ್ಟ ಪದ್ಧತಿ ಜಾರಿಗೆ ಬಂದಿದ್ದು ಆ ಅವಧಿಯಲ್ಲೇ. ಈ ಪದ್ಧತಿಯಲ್ಲಿ ಚೀನಾದ ಚಕ್ರವರ್ತಿಗೆ ದೊಡ್ಡ ಪಾತ್ರವಿತ್ತು. ಈ ಪದ್ಧತಿ ಚೀನಾದ ಮಧ್ಯಕಾಲೀನ ಪಾಳೆಯಗಾರಿ ವ್ಯವಸ್ಥೆಯ ಭಾಗವಾಗಿತ್ತು. ಒಂದು ಪ್ರದೇಶದಲ್ಲಿ ಧಾರ್ಮಿಕ ಅಥವಾ ಆರ್ಥಿಕ (ಉದಾ: ಜಮೀನು ಒಡೆತನ ಹೊಂದಿದವರಿಗೆ) ಅಧಿಪತ್ಯ ಪಡೆದಿರುವವರಿಗೆ, ಪ್ರಾದೇಶಿಕ ದೊರೆ ಅಥವಾ ಪಾಳೆಯಗಾರನಾಗಿ ನೇಮಿಸುವ ಪದ್ಧತಿ ಟಿಬೆಟ್ ಮಾತ್ರವಲ್ಲ ಬೇರೆ ಪ್ರದೇಶಗಳಲ್ಲೂ ಇತ್ತು. ಆ ಕಾಲದಲ್ಲಿ ಜಗತ್ತಿನಾದ್ಯಂತ ಇದ್ದ ಪಾಳೆಯಗಾರಿ ವ್ಯವಸ್ಥೆಯಲ್ಲಿ ಬೇರೆ ದೇಶಗಳಲ್ಲೂ ಇತ್ತು. ಇದೇ ಆಧಾರದ ಮೇಲೆ ಟಿಬೆಟ್ ಒಂದು ಸಾರ್ವಭೌಮ ದೇಶವಾಗಿತ್ತು ಎಂಬ ವಾದಕ್ಕೆ ಆಧಾರಗಳಿಲ್ಲ.



ಶೋಷಣೆ - ಕ್ರೌರ್ಯ

'ದಲೈ ಲಾಮಾ'ಗಳು ಆಳುತ್ತಿದ್ದದ್ದು ಚೀನಾದ ಚಕ್ರವರ್ತಿಗಳ ಸಾಮಂತರಾಗಿ, ಪಾಳೆಯಗಾರಿ ವ್ಯವಸ್ಥೆಯ ಭಾಗವಾಗಿ. 'ದಲೈ ಲಾಮಾ'ಗಳ ಮೇಲೆ ಟಿಬೆಟ್ ಜನತೆಗೆ ಧಾರ್ಮಿಕ ಭಾವನೆಗಳಿಂದ ಅಪಾರ ಭಯ-ಭಕ್ತಿ ಇದ್ದದ್ದೂ ಏನೂ ಆಶ್ಚರ್ಯ ಅಲ್ಲ. ಆದರೆ ಧಾರ್ಮಿಕ-ಆರ್ಥಿಕ-ರಾಜಕೀಯ ಸರ್ವಾಧಿಕಾರ ಇರುವ ವಿಶಿಷ್ಟ ವ್ಯವಸ್ಥೆಯ 'ದಲೈ ಲಾಮಾ'ಗಳ ಆಳ್ವಿಕೆಯ ಕಾಲ ಟಿಬೆಟ್ ನ ಸುವರ್ಣ ಯುಗವಾಗಿ ಇದ್ದದ್ದು, ಶೇ.5 ರಷ್ಟು ಇದ್ದ 'ಕುಲೀನ'ರಿಗೆ (ಬುದ್ಧ ಮಠದ ಸನ್ಯಾಸಿಗಳು, ಅಧಿಕಾರಿಗಳು, ಜಮೀನುದಾರರು) ಮಾತ್ರ. ಶೇ. 95 ಟಿಬೆಟನ್ನರ ಪಾಲಿಗೆ ಇದ್ದದ್ದು ಜಗತ್ತಿನಲ್ಲೇ ಕುಪ್ರಸಿದ್ಧವಾದ ಅತ್ಯಂತ ಕ್ರೂರವಾದ ಆರ್ಥಿಕ-ರಾಜಕೀಯ-ಸಾಮಾಜಿಕ ಶೋಷಣೆ ಮತ್ತು ಗುಲಾಮಗಿರಿ ಮಾತ್ರ. ಆರ್ಥಿಕತೆ ಜನತೆಯ ಕನಿಷ್ಟ ಆಹಾರದಂತಹ ಆವಶ್ಯಕತೆಯನ್ನು ಪೂರೈಸಲಾಗದ ಓಬೀರಾಯನ ಕಾಲದ ಕೃಷಿ ಮೇಲೆ ಅವಲಂಬಿಸಿತ್ತು. ಆದ್ದರಿಂದ ಶೇ.5 'ಕುಲೀನರ ಐಶಾರಾಮ ಪೂರೈಸಲು ಬಡವರ ರಕ್ತ ಹೀರುವ ಶೋಷಕ ವ್ಯವಸ್ಥೆ ಜಾರಿಯಲ್ಲಿತ್ತು. ಮೈ ಮುರಿಯುವ ದುಡಿತ, ಭಾರೀ ತೆರಿಗೆ, ಬಿಟ್ಟಿ ಚಾಕರಿ ಅಲ್ಲದೆ ಇತರ ಶೋಷಣೆಗೆ ಒಳಗಾಗಿದ್ದರು. ಜಾನುವಾರುಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದ ಈ ದುರ್ಗಮ ಪ್ರದೇಶದಲ್ಲಿ ಕುಲೀನರು ಗುಲಾಮರು ಹೊರುವ ಪಲ್ಲಕಿಗಳ ಅಥವಾ ಎಳೆಯುವ ಗಾಡಿಗಳಲ್ಲಿ ಪ್ರಯಾಣ ಮಾಡುತ್ತಿದ್ದರು. ಇಂತಹ ಅಮಾನವೀಯ ವ್ಯವಸ್ಥೆ ವಿರುದ್ಧ ಸಿಡಿದೇಳದಂತೆ ಕ್ರೂರ ಆಡಳಿತ ವ್ಯವಸ್ಥೆ ಇತ್ತು. ಕೆಲಸ ಮಾಡುವಾಗ ಕುಲೀನರನ್ನು ಹೊತ್ತು ಪ್ರಯಾಣ ಮಾಡುವಾಗ ಸತತ ಚಾಟಿಯೇಟು ಸಾಮಾನ್ಯವಾಗಿತ್ತು. ಯಾವುದೇ ರೀತಿಯ ಶಿಕ್ಷಣ, ಆರೋಗ್ಯ, ಸಾಂಸ್ಕೃತಿಕ ಹಕ್ಕು ಇಲ್ಲದೆ ಶೇ. 95 ಟಿಬೆಟನ್ನರ ಬದುಕು ದುರ್ಭರವಾಗಿತ್ತು. 1951 ರಲ್ಲಿ ಕೇವಲ ಶೇ.2 ಶಿಕ್ಷಣ ಪಡೆದವರು ಇದ್ದರು. ಶಿಕ್ಷಣ ಪಡೆದವರು ಎಲ್ಲರೂ ಕುಲೀನರ ಮಕ್ಕಳು ಎಂದು ಬೇರೆ ಹೇಳಬೇಕಾಗಿಲ್ಲ. ಆಗಿನ ಸರಾಸರಿ ಆಯಸ್ಸು ಕೇವಲ 36 ಆಗಿತ್ತು.

ಲಾಮಾಗಳಿಗೆ ಇಲ್ಲವಾಗಿತ್ತು ಜನಬೆಂಬಲ

ಚೀನಾದ 1949 ರ



ಹಿಂದಿದ್ದ ಟಿಬೇಟಿಯನ್ ಶ್ರಮಿಕವರ್ಗದ ದಾರುಣ ಸ್ಥಿತಿ

ಪಾಳೆಯಗಾರಿ-ವಿರೋಧಿ ಕ್ರಾಂತಿ ಬಹುಸಂಖ್ಯಾತ ಟಿಬೆಟನ್ನರಿಗೆ ಆಕರ್ಷವಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. ಅದೇ ರೀತಿ ಅದು ಟಿಬೆಟ್ ನ ಕುಲೀನರಿಗೆ ಸಿಂಹಸ್ವಪ್ನವಾಯಿತು. ಚೀನಾದ ಬೇರೆ ಪ್ರದೇಶಗಳಲ್ಲಿ ಇದ್ದಷ್ಟು ಪಾಳೆಯಗಾರಿ-ವಿರೋಧಿ ಕಮ್ಯುನಿಸ್ಟ್ ನೇತೃತ್ವದ ಚಳುವಳಿಗೆ ಜನಬೆಂಬಲ ಇರಲಿಲ್ಲ. ಆದ್ದರಿಂದ ಟಿಬೆಟ್ ನ ಪಾಳೆಯಗಾರಿ-ವಿರೋಧಿ ಕ್ರಾಂತಿ ಆ ಪ್ರದೇಶದ ಮೇಲೆ ಚೀನಾದ ಕಮ್ಯುನಿಸ್ಟ್ ಸರ್ಕಾರದ ಅಧಿಪತ್ಯ ಸ್ಥಾಪಿಸುವ ಮತ್ತು ಟಿಬೆಟ್‌ನ ಜನತೆಯ ರಾಜಕೀಯ-ಸಾಮಾಜಿಕ



ಪ್ರಜ್ಞೆಯ ಬೆಳವಣಿಗೆಯ ಸಂಕೀರ್ಣ ಪ್ರಕ್ರಿಯೆಯಿಂದ ಇನ್ನೂ ನಿಧಾನವಾಗಿ ಆಯಿತು. ದಲೈ ಲಾಮಾನ ನಾಯಕತ್ವದಲ್ಲಿ ಟಿಬೆಟ್ ಕುಲೀನರು ತಮ್ಮ ಐಶಾರಾಮದ ಜೀವನ ಮತ್ತು ಸವಲತ್ತುಗಳನ್ನು ರಕ್ಷಿಸಿಕೊಳ್ಳಲು ಹೋರಾಡುವುದು ನಿರೀಕ್ಷಿತವಾಗಿತ್ತು. ಈ ಹೋರಾಟ ಎರಡೂ ಕಡೆಯಿಂದ ಅಹಿಂಸಾತ್ಮಕವಾಗಿ ಆಗಲಿಲ್ಲ. ಚೀನಾದ ಸಾಮ್ರಾಜ್ಯಶಾಹಿ-ವಿರೋಧಿ ಕಮ್ಯುನಿಸ್ಟ್ ಕ್ರಾಂತಿಯ ಜಾಗತಿಕ ಪರಿಣಾಮಗಳಿಂದ ಕಸಿವಿಸಿಗೊಂಡ ಸಾಮ್ರಾಜ್ಯಶಾಹಿ ದಲೈ ಲಾಮಾನ ಬೆಂಬಲಕ್ಕೆ ನಿಲ್ಲುವುದು ಮತ್ತು ಆತನನ್ನು ತಮ್ಮ ಜಾಗತಿಕರಾಜಕೀಯ ದಾಳವಾಗಿ ಬಳಸಿದ್ದು ಸ್ವಾಭಾವಿಕವೇ. ಚೀನಾದ ಕಮ್ಯುನಿಸ್ಟ್ ಕ್ರಾಂತಿಯ ವಿರುದ್ಧ ಪಿತೂರಿ ನಡೆಸಲು ಟಿಬೆಟ್ ನ ಸ್ವಾತಂತ್ರ್ಯ ಎರಡನೇ ಮಹಾಯುದ್ಧದ ನಂತರ ವರ್ಚಸ್ಸು ಕಳೆದುಕೊಂಡ ಕೆಲವು ಯುರೋಪಿಯನ್ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗೆ ಒಳ್ಳೆಯ ನೆಪವಾಯ್ತು. ಧಾರ್ಮಿಕ ಭಾವನೆಗಳಿಂದ ದಲೈ ಲಾಮಾ ಮತ್ತು ಆತನ ಸ್ವಾತಂತ್ರ್ಯ ಚಳುವಳಿಗೆ ಟಿಬೆಟ್‌ನ ಒಳಗೆ ಇರುವ ಸಣ್ಣ ಜನವಿಭಾಗಕ್ಕೆ ಅನುಕಂಪ-ಬೆಂಬಲ ಇದ್ದರೂ, ಅವರದ್ದು 'ಸ್ವಾತಂತ್ರ್ಯ ಹೋರಾಟ' ಎನ್ನುವಷ್ಟು ಬೆಂಬಲ ಇಲ್ಲ ಎನ್ನುವುದು ನಿಸ್ಸಂಶಯ. ಸುಮಾರು 50 ವರ್ಷಗಳ ನಂತರವೂ ಜಗತ್ತಿನ ಯಾವುದೇ ದೇಶ 'ದಲೈ ಲಾಮಾರ ದೇಶಾಂತರ ಟಿಬೆಟ್ ಸರ್ಕಾರ'ಕ್ಕೆ ಮಾನ್ಯತೆ ಕೊಟ್ಟಿಲ್ಲ. ಮಾತ್ರವಲ್ಲ ಅಮೆರಿಕದ ಒತ್ತಡದಿಂದ 1959 ರಿಂದ ಹಲವು ಬಾರಿ 'ಟಿಬೆಟ್‌ನಲ್ಲಿ ಮಾನವ ಹಕ್ಕುಗಳ ದಮನ'ದ ಬಗ್ಗೆ ವಿಶ್ವ ಸಂಸ್ಥೆ ನಿರ್ಣಯ ಪಾಸು ಮಾಡುತ್ತಿರುವಾಗಲೂ ಹಲವು ದಶಕಗಳ ಕಾಲ ತೈವಾನ್‌ಗೆ ಮಾತ್ರ ಅಲ್ಲಿ ಮಾನ್ಯತೆ ಇದ್ದದ್ದು! ತೈವಾನ್ ಸರ್ಕಾರ (ಟಿಬೆಟ್ ಸೇರಿದಂತೆ) ಇಡೀ ಚೀನಾದ ಪ್ರತಿನಿಧಿ ತಾನು ಅಂತ ಹೇಳುತ್ತಿತ್ತು! ಅಮೆರಿಕ ಮತ್ತು ಅದರ ಹಿಂಬಾಲಕರು ತಲೆದೂಗುತ್ತಿದ್ದರು.

ಆಧುನೀಕರಣದತ್ತ ಟಿಬೆಟ್

ಇನ್ನು ಚೀನಾ ಟಿಬೆಟ್‌ನಲ್ಲಿ 'ವಸಾಹತುಶಾಹಿ' ಸರ್ಕಾರದ ರೀತಿ ವರ್ತಿಸುತ್ತಿದೆಯೆ? ಟಿಬೆಟ್ ನ ಜನತೆಯ ಶೋಷಣೆ ಮಾಡುತ್ತಿದ್ದಾರೆಯೆ? ದಲೈ ಲಾಮಾರ ನಾಯಕತ್ವದ 'ಸ್ವತಂತ್ರ ಟಿಬೆಟ್' ಬಯಸುತ್ತಾರೆಯೆ? ಎಂಬ ಪ್ರಶ್ನೆಗೆ ಉತ್ತರ ಟಿಬೆಟ್‌ನ ಈಗಿನ ಸ್ಥಿತಿ-ಗತಿ ಮೇಲೆ ಹೇಳಬಹುದು. 'ವಸಾಹತುಶಾಹಿ' ಸರ್ಕಾರ ಸಾಮಾನ್ಯವಾಗಿ ಒಟ್ಟಾರೆಯಾಗಿ ಆ ಪ್ರದೇಶದಿಂದ ಸಂಪನ್ಮೂಲಗಳನ್ನು ಹೊರಗೆ ಒಯ್ಯುತ್ತದೆ. ಟಿಬೆಟ್‌ನ ಬೆಳವಣಿಗೆಯಲ್ಲಿ 1950-1998 ರ ನಡುವೆ 49 ಶತಕೋಟಿ ಯೂವಾನ್ ಹೂಡಿಕೆ ಮಾಡಿದೆ. ಟಿಬೆಟ್‌ನಲ್ಲಿ ಐದು ದಶಕಗಳ ಕಾಲ ತಂದ ರಾಜಕೀಯ-ಸಾಮಾಜಿಕ-ಆರ್ಥಿಕ ಸುದಾರಣೆಗಳಿಂದ ಅಲ್ಲಿನ ಜೀವನ ಮಟ್ಟ ಚೀನಾದ ಇತರ ಪ್ರದೇಶಗಳ ಮಟ್ಟಕ್ಕೆ ಬಂದಿದೆ. ಟಿಬೆಟ್ ಈಗ ಆಧುನಿಕ ಕೃಷಿ, ಕೈಗಾರಿಕೆ, ಸೇವೆ ಕ್ಷೇತ್ರಗಳಿರುವ ಸಮಗ್ರ ಆರ್ಥಿಕ ಹೊಂದಿದೆ. ಲ್ಹಾಸಾಗೆ ಪ್ರಸಿದ್ಧ 'ಜಗತ್ತಿನ ಅತ್ಯಂತ ಎತ್ತರದ ರೈಲು' ಸೇರಿದಂತೆ ಹಲವು ಭಾರೀ ಬೆಳವಣಿಗೆಯ ಯೋಜನೆಗಳ ಜಾರಿ ಆಗಿದೆ. ನಾಲ್ಕು ವಿಶ್ವವಿದ್ಯಾಲಯಗಳಿರುವ ವ್ಯಾಪಕ ಶಿಕ್ಷಣ ವ್ಯವಸ್ಥೆ ಇದೆ. 1951 ರಲ್ಲಿ ಬರಿಯ 36 ಇದ್ದ ಸರಾಸರಿ ಆಯಸ್ಸು ಈಗ 65 ಕ್ಕೇರಿದೆ. ಟಿಬೆಟ್‌ನ ತಲಾ ಆದಾಯ ಚೀನಾದ ಇತರ ಪ್ರದೇಶಗಳ ಮಟ್ಟದ ಹತ್ತಿರ ಬಂದಿದೆ. ಟಿಬೆಟ್‌ನ ಜಿಡಿಪಿ (ಒಟ್ಟು ಉತ್ಪಾದನೆ) ಏರಿಕೆ ದರ ಕಳೆದ ಆರು ವರ್ಷಗಳಲ್ಲಿ ಶೇ. 10 ಆಗಿದ್ದು ಚೀನಾದ ರಾಷ್ಟ್ರೀಯ ದರಕ್ಕಿಂತ ಹೆಚ್ಚಾಗಿದೆ. 1980 ಮತ್ತು 1998 ರ ನಡುವೆ ಜಿಡಿಪಿ ನಾಲ್ಕು ಪಟ್ಟು ಆಗಿದೆ. ದಲೈ ಲಾಮಾರ ಆಪಾದನೆಗೆ ವ್ಯತಿರಿಕ್ತವಾಗಿ ಈಗಲೂ ಈ ಎಲ್ಲಾ ಬೆಳವಣಿಗೆಯ ಫಲ ಉಣ್ಣುವವರು

ಪುಟ 10ಕ್ಕೆ

ನಿಷೇದಾಜ್ಞೆಯ ನಡುವೆಯೂ ತ್ರಿಶೂಲ ಹಂಚಿರುವ ಶ್ರೀರಾಮಸೇನೆಯು ಗದಗ್ ಜಿಲ್ಲೆಯನ್ನು ಕೋಮುದ್ವೇಷದ ಕುಂಡವನ್ನಾಗಿಸಲು ಬಯಸಿದೆ. ಜಿಲ್ಲಾಡಳಿತ ಚಪ್ಪಾಳೆ ತಟ್ಟಿದೆ.



ಗದಗ

ತ್ರಿಶೂಲ ಹಂಚಿಕೆಯೂ ನಿಷೇದಾಜ್ಞೆ ಎಂಬ ನಾಟಕವೂ

ಗದಗ ಜಿಲ್ಲೆಯ ಜನ ಶತಮಾನಗಳಿಂದ ಸೌಹಾರ್ದಯುತ ಬಾಳುವೆ ಮಾಡಿಕೊಂಡೇ ಬಂದಿದ್ದಾರೆ. ಮತ-ಧರ್ಮಗಳ ದ್ವೇಷಕ್ಕೆ ಅವಕಾಶ ಕೊಡದೇ ಪರಸ್ಪರ - ಸಹಬಾಳ್ವೆಯಿಂದ ಬದುಕು ಸಾಗಿಸುತ್ತಲೇ ಇದ್ದಾರೆ. ಹಿಂದು-ಮುಸ್ಲಿಂ ಧರ್ಮಗಳನ್ನು ಪಾಲಿಸುವ, ದೈವಗಳನ್ನು ಆರಾಧಿಸುವ ಮಂದಿರ, ಮಠ, ಮಸೀದಿಗಳಿಗೆ ಸಂಬಂದಿಸಿದ ಮುಖಂಡರುಗಳನ್ನು ಒಳಗೊಂಡ ಒಂದೇ ಟ್ರಸ್ಟು ಗದಗ ನಗರದಲ್ಲಿ ದಶಮಾನಗಳಿಂದ ಚಾಲ್ತಿಯಲ್ಲಿದೆ. ಗದುಗಿನ ಸೌಹಾರ್ದ ಬದುಕಿನ ಪರಂಪರೆ ಮುಂದುವರಿಕೆಗೆ ಮಠ-ಮಸೀದಿಗಳ ಕಾಣಿಕೆ ನಿರಂತರ ಸಾಗುತ್ತಲೇ ಇದೆ. ಜಿಲ್ಲೆಯ ಡಂಬಳ-ಗದಗ ತೋಂಟದಾರ್ಯ ಮಠ, ಗವಾಯಿಗಳ ವೀರೇಶ್ವರ ಪುಣ್ಯಾಶ್ರಮ, ಹಾಲಕೆರೆ - ಮುಂಡರಗಿ ಅನ್ನದಾನೇಶ್ವರ ಮಠ, ಲಕ್ಷ್ಮೇಶ್ವರ ದೂದಪೀರ ದರ್ಗಾ, ಶಿರಹಟ್ಟಿ ಫಕೀರೇಶ್ವರ ಮಠಗಳು ಜಿಲ್ಲೆಯ ಸೌಹಾರ್ದ ಪರಂಪರೆಯ ಕಾರಣಕ್ಕಾಗಿಯೇ ನಾಡಿನೆಲ್ಲೆಡೆ ಹೆಸರಿದೆ.

ವಿಷಾದದ ಸಂಗತಿಯೆಂದರೆ ಕಳೆದ 8-19 ವರ್ಷಗಳಿಂದ ಈ ಸೌಹಾರ್ದ ಪರಂಪರೆಗೆ ಕೋಮುವಾದಿ ಶಕ್ತಿಗಳಿಂದ ಆತಂಕ ಶುರುವಾಗಿದೆ. ಪರಿತಪಿಸುವ ಜನ -

ವಿಷ ಬೀಜ ಬಿತ್ತುವ ಪರಿವಾರ

ದೇವರು - ಧರ್ಮವನ್ನೇ ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಂಡಿರುವ ಆರ್‌ಎಸ್‌ಎಸ್ ಪರಿವಾರ ಧರ್ಮಾಂಧತೆಯ ವಿಷ ಬೀಜ ಬಿತ್ತಿ ನಾಡನ್ನು ವಿಭಜಿಸುವ ಕಾರ್ಯಕ್ಕೆ ವ್ಯವಸ್ಥಿತವಾಗಿ ಮುಂದಾಗಿದೆ. ತ್ರಿಶೂಲ ದೀಕ್ಷೆ, ಹಿಂದೂ ಸಮಾಜೋತ್ಸವ, ಹಿಂದೂ ಜಾಗೃತ ಸಮಾವೇಶದಂತಹ ವಿವಿಧ ಕಾರ್ಯಕ್ರಮಗಳನ್ನು ನಾನಾ ಸಂಘಟನೆಗಳ ಹೆಸರಿನಲ್ಲಿ ಮಾಡುವ ಮೂಲಕ ರಾಜಕೀಯವಾಗಿ ಬಿಜೆಪಿ ಬೆಳವಣಿಗೆಗೆ ಇನ್ನಿಲ್ಲದ ಕಸರತ್ತು ನಡೆಸುತ್ತಲೇ ಬರಲಾಗುತ್ತಿದೆ.

ರಾಜಕೀಯ ಹಿತಾಸಕ್ತಿ - ಮತ ರಾಜಕಾರಣಕ್ಕಾಗಿ ಜಿಲ್ಲೆಯ ಕೊಣ್ಣೂರು, ಹೊಳೆ-ಆಲೂರು, ಅಡವಿ ಸೋಮಾಪುರ, ಕೋಟುಮಚಗಿ, ಶಿರಹಟ್ಟಿ, ಲಕ್ಷ್ಮೇಶ್ವರ ಮುಂತಾದ ಊರುಗಳಲ್ಲಿ ಕೋಮು ಗಲಭೆಗಳು ಯೋಜಿತವಾಗಿ ಸಂಭವಿಸಿದವು. ಗಜೇಂದ್ರಗಡ, ಗದಗ ಪಟ್ಟಣಗಳಲ್ಲೂ ಗಲಭೆ ಹಬ್ಬಿಸುವ ಪ್ರಯತ್ನಗಳೂ ನಡೆದವು. ಸಂಭವಿಸಿದ ಗಲಭೆಗಳಿಗೆ ಸಂಘ ಪರಿವಾರದ ಸಂಘಟನೆಗಳೇ ಕಾರಣವಾಗಿದ್ದವು. ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿ-ಪಾಸ್ತಿ ನಾಶವಾಗಿ ಅನೇಕ ಕುಟುಂಬಗಳು ಬೀದಿಗೆ ಬಿದ್ದವು. ಮತ್ತೆ ಅಲ್ಲಿ ಜನ-ಜೀವನ ಸಹಜ ಸ್ಥಿತಿಗೆ ಬರಲು ಎಷ್ಟೋ ದಿನಗಳೇ ಬೇಕಾದವು. ಈಗಲೂ ಅಲ್ಲಿಯ ಜನಸಾಮಾನ್ಯರಲ್ಲಿ ಕೋಮುಗಲಭೆಯ ಭೀತಿ ಉಳಿದುಕೊಂಡಿದೆ. ಸಹಜ ಬದುಕಿಗಾಗಿ ಜನ ಪರಿತಪಿಸುತ್ತಿದ್ದಾರೆ.

ಸಂವಿಧಾನ ಪ್ರತಿಪಾದಿಸಿದ 'ಜಾತ್ಯಾತೀತ ರಾಷ್ಟ್ರ' ಪರಿಕಲ್ಪನೆಯ ವಿರೋಧಿಯಾಗಿ 'ಹಿಂದೂರಾಷ್ಟ್ರ'ದ ವಿಚಾರವನ್ನು ಹೇಳುವ ರಾಷ್ಟ್ರವಿರೋಧಿ ಚಟುವಟಿಕೆಗಳನ್ನು ನಡೆಸುವ ಬಜರಂಗದಳ, ವಿ.ಹೆಚ್.ಪಿ., ಶ್ರೀರಾಮಸೇನೆ, ಎ.ಬಿ.ವಿ.ಪಿ. ಮುಂತಾದ ಸಂಘಟನೆಗಳನ್ನು ಒಳಗೊಂಡ ಆರ್‌ಎಸ್‌ಎಸ್ ಪರಿವಾರವನ್ನು ಪರಿಣಾಮಕಾರಿಯಾಗಿ ಮಟ್ಟ ಹಾಕುವ ಸಲುವಾಗಿ ಜಾತ್ಯಾತೀತ-ಪ್ರಜಾಸತ್ತಾತ್ಮಕ ಶಕ್ತಿಗಳು ಒಟ್ಟಾಗಿ ಹೋರಾಡುವುದು ಅವಶ್ಯಕವಾಗಿದೆ.

ಧರ್ಮಾಂಧತೆಯ ವಿಷ ಬೀಜ ಬಿತ್ತುತ್ತಲೇ ಬರುತ್ತಿರುವ 'ಶ್ರೀರಾಮಸೇನೆ'ಯು ಭಯೋತ್ಪಾದನೆ ವಿರುದ್ಧ ಹೋರಾಡಲು 'ತ್ರೀಶೂಲ ದೀಕ್ಷೆ' ಎಂದೇಳುತ್ತ 'ಜೈ ಹಿಂದೂ ರಾಷ್ಟ್ರ' ಎಂಬ ಘೋಷಣೆಯೊಂದಿಗೆ ಇದೇ ಮಾರ್ಚ್ 16 ರಂದು ಗದಗದಲ್ಲಿ ತ್ರಿಶೂಲ ಹಂಚುವ ಕಾರ್ಯಕ್ರಮವನ್ನು ನಡೆಸಿತು. 'ಉಗ್ರ ಹಿಂದುತ್ವ' ಅಜೆಂಡಾ ಮುಂದಿಟ್ಟುಕೊಂಡು ಧರ್ಮದ ಹೆಸರಿನಲ್ಲಿ ಜನ ಆಯುಧಗಳನ್ನು ಕೈಗೆತ್ತಿಕೊಳ್ಳಲು ಪ್ರಚೋದಿಸಲು-ಪ್ರೇರೇಪಿಸಲು 'ದೀಕ್ಷೆ' ನೀಡಲಾಯಿತು.



ಮುತಾಲಿಕನಿಗೆ ಎಸ್ಕಾರ್ಟ್ ನೀಡಿದ ಡಿ.ಸಿ. ಶ್ರೀರಾಮನ್

ನೂರಾರು ಮುಗ್ಧ ಯುವಕರು ತ್ರಿಶೂಲ ಪಡೆದುಕೊಂಡರು. ಇಂತಹ ತ್ರಿಶೂಲಗಳೇ ಗುಜರಾತ್‌ನ ಅಮಾಯಕ ಮಹಿಳೆಯರ ಹೊಟ್ಟೆ ಬಗೆದದ್ದು.

ಪ್ರತಿರೋಧ - ಆದರೂ ತಲೆಬಾಗಿದ ಆಡಳಿತ

ಈ ತ್ರಿಶೂಲ ದೀಕ್ಷಾ ಕಾರ್ಯಕ್ರಮದ ಹಿಂದಿರುವ ಅಪಾಯಕಾರಿ ರಾಜಕಾರಣ ಅರಿತುಕೊಂಡು ಇಡೀ ಕಾರ್ಯಕ್ರಮ ನಿಷೇಧಿಸಬೇಕೆಂದು ಸೌಹಾರ್ದ ವೇದಿಕೆ, ಜೆಡಿಎಸ್, ಡಿಎಸ್‌ಎಸ್, ಎಸ್‌ಎಫ್‌ಐ, ಡಿವೈಎಫ್‌ಐ ನ ಮುಖಂಡರು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ನಡೆಸಿದರು. ನಂತರದಲ್ಲಿ ಅಪಾಯ ಅರಿತವರಂತೆ ಜಿಲ್ಲಾಧಿಕಾರಿ ಶ್ರೀರಾಮನ್ ಗದಗ ನಗರ ಪ್ರದೇಶದ ವ್ಯಾಪ್ತಿಯಲ್ಲಿ ತ್ರಿಶೂಲ ದೀಕ್ಷಾ ಸಮಾರಂಭ ನಿಷೇಧಿಸಿ ಆದೇಶ ಹೊರಡಿಸಿದರು. ತಕ್ಷಣದಲ್ಲೇ ಬಣ್ಣ ಬದಲಾಯಿಸಿಕೊಂಡ ಶ್ರೀರಾಮಸೇನೆ 'ತ್ರಿಶೂಲ ದೀಕ್ಷಾ ಸಮಾರಂಭ'ಕ್ಕೆ ಬದಲು 'ಹಿಂದೂ ಜಾಗೃತ ಸಮಾವೇಶ' ನಡೆಸುವ ಅವಕಾಶ ಮಾಡಿಕೊಂಡು ಐದು ನೂರಕ್ಕೂ ಹೆಚ್ಚು ಪೊಲೀಸರು, ಒಬ್ಬ ಡಿವೈಎಸ್‌ಪಿ ಇಬ್ಬರೂ ಸಿಪಿಐಗಳು, ಇಬ್ಬರು ಪಿ.ಎಸ್.ಐ.ಗಳು ಒಳಗೊಂಡ ಪೊಲೀಸ್ ಸರ್ಪಗಾವಲಿನಲ್ಲೇ ಗದಗದ ಜಗದಂಬಾ ಕಲ್ಯಾಣ ಮಂಟಪದಲ್ಲಿ 'ಗೋಡ್ಸೆ ಪ್ರಶಸ್ತಿ ಪುರಸ್ಕೃತ' ಪ್ರಮೋದ್ ಮುತಾಲಿಕ್ ನೇತೃತ್ವದಲ್ಲಿ ತ್ರಿಶೂಲ ಹಂಚಿಕೆ, ಪ್ರದರ್ಶನ, ಮಹಾತ್ಮ ಗಾಂಧೀಜಿ ಗದಗಿನ ತೋಂಟದ ಸಿದ್ದಲಿಂಗ ಶ್ರೀಗಳನ್ನು ಅವಮಾನಗೊಳಿಸುವ ಮಾತುಗಳು, ಹಿಂದೂ ಧರ್ಮ ರಕ್ಷಣೆಗೆ ಜನ ಆಯುಧಗಳನ್ನು ಕೈಗೆತ್ತಿಕೊಳ್ಳಲು ಪ್ರೇರೇಪಿಸುವ ಪ್ರಚೋದನಾಕಾರಿ ಭಾಷಣ ಯಾವುದೇ ಅಡೆತಡೆ ಇಲ್ಲದೆ ನಡೆದವು. ಜಿಲ್ಲಾಧಿಕಾರಿಯ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲದಂತೆ ನಿಷೇಧಾಜ್ಞೆ ಉಲ್ಲಂಘನೆಯೂ ನಡೆದೇ ಹೋಯಿತು.

ಇಷ್ಟೆಲ್ಲಾ ನಡೆಯುತ್ತಿದ್ದಾಗ ಅಲ್ಲಿಯೇ ಇದ್ದ ಉನ್ನತ ಪೊಲೀಸ್ ಅಧಿಕಾರಿಗಳು ಪ್ರಮೋದ್ ಮುತಾಲಿಕ್, ಶ್ರೀರಾಮಸೇನೆ, ಬಿಜೆಪಿ ಮುಖಂಡರು, ಜೇವರ್ಗಿ ಆಂದೋಲ ಸ್ವಾಮಿಯನ್ನು ಬಂಧಿಸುವ ಬದಲಾಗಿ, ಮೊದಲ ಆರೋಪಿ ಮುತಾಲಿಕ್‌ನಿಗೆ ಎಸ್ಕಾರ್ಟ್ ಕೊಟ್ಟು ನಗರವನ್ನು ದಾಟಿಸಿ ಬರುವ ಕಾರ್ಯ ಕೈಗೊಂಡಿದ್ದಾರೆ.

ಇದನ್ನೆಲ್ಲವನ್ನು ಅರಿತ ಸೌಹಾರ್ದ ಬಯಸುವ ಜನ ಜಿಲ್ಲಾಧಿಕಾರಿಯನ್ನು ಪ್ರಶ್ನಿಸಿದ್ದಕ್ಕಾಗಿ ಕಾಟಾಚಾರಕ್ಕೆಂಬಂತೆ ಪ್ರಮೋದ್ ಮುತಾಲಿಕ್ ಸಹಿತ ಸ್ಥಳೀಯ 21 ಜನರ ಮೇಲೆ ನಿಷೇಧಾಜ್ಞೆ ಉಲ್ಲಂಘನೆ, ಪ್ರಚೋದನಾಕಾರಿ ಭಾಷಣದ ಆರೋಪದ ಮೇಲೆ ಎಫ್.ಐ.ಆರ್. ಗೀಚಿದ್ದಾರೆ. ಆಡಳಿತದ ಈ ನಯ ಖಾವೀಕರಣ, ಹಿಂದುತ್ವದ ಅಟ್ಟಹಾಸವನ್ನು ಹೆಚ್ಚಿಸುವುದಲ್ಲದೇ, ಕುಗ್ಗೀಸಿತೆ? ರಾಷ್ಟ್ರಪತಿ ಆಡಳಿತ ಇರುವಾಗಲೇ ಹೀಗೆ, ಮುಂದೆ ಹೇಗೆ?

ವಿಷವಿಲ್ಲದ ಜನ

ಗದಗ ಜಿಲ್ಲೆಯ ಜನ ಹಳ್ಳಿ - ಪಟ್ಟಣಗಳಲ್ಲಿ ಹಿಂದೂ-ಮುಸ್ಲಿಂ-ಕ್ರೈಸ್ತ ಧರ್ಮಗಳ ಬೇಧವಿಲ್ಲದೇ ಅಣ್ಣ-ತಮ್ಮ, ಅಕ್ಕ-ತಂಗಿಯರಂತೆ ಹಬ್ಬ-ಜಾತ್ರೆ, ಉರುಸ್‌ಗಳನ್ನು ಕೂಡಿಯೇ ಸೌಹಾರ್ದದಿಂದ ಆಚರಿಸುತ್ತಾ, ಸಂತೋಷಪಡುತ್ತಾ ಬಂದಿದ್ದಾರೆ. ಬದುಕು ಕಟ್ಟಿಕೊಳ್ಳುತ್ತಾ ಸಾಗಿದ್ದಾರೆ. ಕೆಲವು ದುಷ್ಟರು ಕೋಮು ವಿಚಾರ ಮತ್ತು ಭಯೋತ್ಪಾದಕ ವಿಚಾರಗಳಿಂದ ಧರ್ಮಗಳ ಅರ್ಥ ಕೆಡಿಸುತ್ತಿದ್ದಾರೆ, ದೇಶ ಒಡೆಯುತ್ತಿದ್ದಾರೆ. ಪ್ರಜ್ಞಾವಂತ ಜನ ಇದನ್ನರಿತುಕೊಂಡು ದ್ವೇಷ ಮರೆದು ದೇಶ ಕಟ್ಟಲು ಮುಂದಾಗಬೇಕಿದೆ.

■ ಸೌಹಾರ್ದ

ರಾಷ್ಟ್ರದ್ರೋಹಿ ಮುತಾಲಿಕನೋ, ಗಾಂಧೀಜಿಯೋ?


ಗಾಂಧಿ ಹಂತಕ ನಾಥೂರಾಮ ಗೋಡ್ಸೆ ಹೆಸರಿನ ಗೋಡ್ಸೆ ಪ್ರಶಸ್ತಿ ಪುರಸ್ಕೃತ ಪ್ರಮೋದ ಮುತಾಲಿಕ್ ಗದಗದಲ್ಲಿ ನಡೆದ ತ್ರಿಶೂಲ ದೀಕ್ಷಾ ಸಮಾರಂಭದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಕುರಿತು....

“ಈ ಹಿಂದೂ ರಾಷ್ಟ್ರ ಭಾರತ ಒಡೆಯಲು ಗಾಂಧೀಜಿ ಮುಖ್ಯ ಕಾರಣ. ಗಾಂಧೀ ಹುಟ್ಟದಿದ್ದರೆ ಈ ದೇಶ ಒಡೆಯುತ್ತಿರಲಿಲ್ಲ. ಗಾಂಧಿ ಒಬ್ಬ ರಾಷ್ಟ್ರದ್ರೋಹಿ”

ಯಾವುದು ಕೋಮು ಸೌಹಾರ್ದತೆ

ಕೋಮು ಸೌಹಾರ್ದ ಪ್ರಶಸ್ತಿ ಪುರಸ್ಕೃತ ಗದುಗಿನ ತೋಂಟದಾರ್ಯ ಸಿದ್ಧಲಿಂಗ ಸ್ವಾಮೀಜಿ ಕುರಿತು....

“ಈ ಸ್ವಾಮಿ ಬಸವ ತತ್ವ ಪ್ರಸಾರಕ್ಕೆ ವಿದೇಶಕ್ಕೆ ಹೋಗಿದ್ದಾರಂತೆ(ಸ್ವಾಮಿಗಳು ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದಾರೆ) ಇಲ್ಲೇ ದಿನನಿತ್ಯ ದಲಿತರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಇಲ್ಲಿದ್ದು ಇದನ್ನೆಲ್ಲಾ ತಡೆಯೋ ಬದಲು ಅಲ್ಲೇನು?.....ಇವರ ಕೆಲಸ? ಯಾವುದು ಕೋಮು ಸೌಹಾರ್ದತೆ....” ಎಂದೂ ಹೀಗೆ ವಿಷ ಕಾರಿಕೊಂಡನಂತೆ.



ಈ ನಾಡ ಕಟ್ಟಿದವರು......

"ಇಲ್ಲದ ಕತಿ ನಾವು ಕೇಳಂಗಿಲ್ಲ. ನಾಳಿಗಿ ಮುಂಜಾನಿ ಅನ್ನುದ್ರಾಗ ಜನ ಕೆಲಸದ ಮ್ಯಾಲ ಇರಬೇಕು" ಅಂತ ನಾವು ತಾಕೀತು ಮಾಡಿದ್ದಕ್ಕೆ ಸಿಟ್ಟು ಬಂದ ಜ್ಯೂನಿಯರ್ ಇಂಜಿನಿಯರ್ 'ಸೈಟ್ ಹುಡುಕಬೇಕಾಕ್ಕೈತ್ರಿ.... ನೀವು ಅಂದಂಗ ಆಗೋದಿಲ್ಲ. ಹತ್ತಾರು ಕಿಲೋಮೀಟರ್ ಸುತ್ತಾಡಬೇಕು... " ಸಿಡುಕಿದನು.
"ಅಕ್ಕಾರೆ ಈಕೆಲಸ 200 ದಿನಗಳು ಸಿಗಂಗ ಮಾಡ್ರೀ...." ಮರಿಯಮ್ಮಳ ದನಿಯಲ್ಲಿ ಬದುಕು ಜೈಸಲು ಆಸರೆ ಬೇಕಿತ್ತು..

ಬೆಳಗು ಮುಂಜಾನೆ. ಚುರುಗುಟ್ಟುವ ಕಿರಣಗಳ ಕಿರೀಟಧರಿಸಿಯೇ ಸೂರ್ಯ ಹಣಕಿ ಹಾಕುವ ಹೊತ್ತಲ್ಲಿ ಸರಿಯಾಗಿ ದಿಲ್ಲಿಯಿಂದ ಸುದ್ದಿಯೊಂದು ಪುಟ್ಟ ಮೊಬೈಲ್ ಡಬ್ಬಿಯಲ್ಲಿ ಕಾದು ಕೂತಿತ್ತು. ಇಂಡಿಯನ್ ಸ್ಕೂಲ್ ಆಫ್ ವಿಮೆನ್ ಸ್ಟಡೀಸ್ ಡೆವಲಪ್‌ಮೆಂಟ್(ISWSD) ನಿಂದ. ದಾವಣಗೆರೆ ಜಿಲ್ಲೆಯ ಸಮೀಕ್ಷಾ ವರದಿ ಈ ಕೂಡಲೇ ಕಳಿಸಲು ಆದೇಶವಿತ್ತು.

ಬಿಟ್ಟಿ ಚಾಕರಿ ಒಲ್ಲೆವು

ಕಳೆದ ಒಂದೂವರೆ ತಿಂಗಳಿನಿಂದ ಕನಿಷ್ಟ ಎರಡು ಗ್ರಾಮಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (NREGA) ದಡಿಯಲ್ಲಿ ಕೆಲಸ ಕೊಡಿಸಲು ಹೆಣಗುತ್ತಿದ್ದೆ. ಜನವಾದಿಯ ಸಂಗಾತಿ ಪದ್ಮಾ ಹುಮನಾಬಾದಿನಲ್ಲಿ ವಾರಗಟ್ಟಲೆ ಉಳಿದುಕೊಂಡು ಹಳ್ಳಿ ಜನರ ಸಭೆ ನಡೆಸುವುದು - REGA ಕುರಿತು ಸಮಗ್ರ ಮಾಹಿತಿ ಕೊಡುವುದು. ಗ್ರಾಮ ಪಂ.ಗೆ ಭೇಟಿ ಮಾಡುವುದು, ಅರ್ಜಿ ಹಾಕಿಸುವುದು, ಜಾಬ್ ಕಾರ್ಡ್ ಕೊಟ್ಟು ಅಕೌಂಟ್ ತೆಗೆವವರೆಗೂ ಕಾರ್ಯ ನಿರ್ವಹಿಸಿ, ಆನಂತರ ಫಾರಂ-6 ಅನ್ನು 15 ದಿವಸದೊಳಗಾಗಿ ಕೆಲಸ ಕೊಡಬೇಕೆಂದು ಆಗ್ರಹಿಸಿ ಅರ್ಜಿ ಗುಜರಾಯಿಸಿ, ಆನಂತರ ಕೆಲಸ ಕೊಡದೇ ಇದ್ದಾಗ ಹೋರಾಟಕ್ಕೆ ಸಜ್ಜಾಗಿ, ಪೂರೈಸಿ ಜನತೆಗೆ ಕೆಲಸ ಕೊಡಿಸಿದ ಮೇಲೆ ಮತ್ತೆ ಸಮೀಕ್ಷೆ ಮಾಡುತ ಊರೂರು ಅಡ್ಡಾಡಿದ್ದರು ಪದ್ಮಾ. ಖಂಡಿತ ದಾವಣಗೆರೆ ಜಿಲ್ಲೆಯಲ್ಲಿ REGA ಸಮೀಕ್ಷೆ ಮಾಡಿಯೇ ತೀರುವ ಉಮೇದು ಪದ್ಮಾ, ರೇಣುಕಾ, ಅನಂತ, ಶೆಟ್ಟಿ ನಾಯಕ ಹೀಗೆ ಎಲ್ಲರಿಗೂ ಇತ್ತು. ಆದರೆ ಅಧಿಕಾರಶಾಹಿಯ ಯಂತ್ರಗಳು ಮತ್ತು ಸ್ಥಳೀಯ ಭೂಮಾಲೀಕರು ತುಂಬ ವ್ಯವಸ್ಥಿತವಾಗಿ REGA ಕ್ಕೆ ತಡೆಗೋಡೆಗಳನ್ನು ನಿರ್ಮಿಸಿದ್ದರು. ಕಳೆದ ವರ್ಷದ ಬಾಕಿ ಒಂದೂವರೆ ವರ್ಷವಾದರೂ ಸಂದಾಯ ಮಾಡದೇ ಇರುವುದರಿಂದ 'ಬಿಟ್ಟಿ ಚಾಕರಿ'ಗೆ ಒಲ್ಲೆವೆಂದು ಜನ ನಿರಾಶೆಯತ್ತ ವಾಲಿದ್ದರು. "ಈ ಕಾಯ್ದೆ ದುಡಿವ ಜನತೆಯದ್ದು. ಇದಕ್ಕಾಗಿ ಬರುವ ಹಣವೂ ಜನತೆಗೆ ಸೇರಬೇಕಾದದ್ದು. ಬನ್ರೀ ಬಾಕಿ ಪಾವತಿಗೆ ಒತ್ತಾಯಿಸಿ, ಮತ್ತ ಈ ವರ್ಷ ಕೆಲಸ ಕೇಳಿ ಹೋರಾಟ ಮಾಡಾಣ' ಎಂದು ಜನರನ್ನು ಹುರಿದುಂಬಿಸಿ ಅದೊಂದು ದಿನ ನಂದಿಬೇವೂರು ಗ್ರಾಮ ಪಂಚಾಯ್ತಿಗೆ ಬೀಗ ಜಡಿದು ಪ್ರತಿಭಟನೆ ಮಾಡಲಾಯಿತು. ಹರಪನಹಳ್ಳಿಯ ಐಬಿ ಸುತ್ತಮುತ್ತವೇ ಠಳಾಯಿಸುವ ಅಧಿಕಾರಿ ಮತ್ತು ಸಿಬ್ಬಂದಿಗಳು ಹೋರಾಟದ ಕಾವಿಗೆ ತರಗುಬರಗಾಗಿ ಆರೂವರೆ ಲಕ್ಷದಷ್ಟು ಹಳೆಯ ಬಾಕಿಯ ಚೆಕ್ಕು ಹಿಡಿದು ಕಾರ್ಯದರ್ಶಿ ಧಾವಿಸಬೇಕಾಯ್ತು. ಜನಕ್ಕೆ ಹೋರಾಟ ಮತ್ತು ಸಂಘಟನೆಯಲ್ಲಿ ವಿಶ್ವಾಸ ಅಂಕುರಿಸಿತು. ದಿನಗಳು ಉರುಳಿದವು. ಇಂದು ನಾಳೆ... ಊಹುಂ ಕೆಲಸ ಕೊಡಲೇ ಇಲ್ಲ. ನನ್ನಿಂದ ಹೋಗುವ ಫೋನಿನ ಶಬ್ದಕ್ಕೆ ಸಂಗಾತಿಗಳೂ ಚಿಂತಿತರಾಗುತ್ತಿದ್ದರು. ಆದರೆ ಹೋರಾಟ ಮತ್ತು ಸಂಘರ್ಷದ ಅಸ್ತ್ರಗಳಿಗೆ ನೋಡಿ, ಇವು ಯಾವತ್ತೂ ನಂಬಿದವರ ಕೈ ಬಿಟ್ಟಿಲ್ಲ. ಸರಿ. ಅಂದು ತಾಲ್ಲೂಕು ಕೇಂದ್ರದಲ್ಲಿ ಹೋರಾಟ,



ಹಳ್ಳಿಯಲ್ಲಿ ಕೆಲಸಕ್ಕಾಗಿ ಒತ್ತಡ. ಅಧಿಕಾರಿಗಳು ತಪ್ಪಿಸಿಕೊಳ್ಳಬೇಕಾದ ಮಾರ್ಗಗಳೆಲ್ಲ ಮುಚ್ಚಿದ್ದರಿಂದ ಅನಿವಾರ್ಯವಾಗಿ ಎರಡೂ ಗ್ರಾಮಗಳಲ್ಲಿ ಕೆಲಸಕ್ಕೆ ಆದೇಶ ಕೊಟ್ಟರು. ನಾನು, ಮೀನಾಕ್ಷಿ, ಪದ್ಮಾ, ರೇಣುಕಾ ಮತ್ತು ಪಂಚಾಯತ್ ಸಿಬ್ಬಂದಿಗಳಾದ ಕಾರ್ಯದರ್ಶಿ, ಜೆ.ಇ. ಮತ್ತಿತರರು ವಾಹನ ಹತ್ತಿ ಹೊರಟೆವು. ಯಾವ ಊರು ಸುತ್ತಾಡಿದರು ಒಂದೇ ದೂರು"ಹಿಂದಕ್ಕ ಕೆಲಸ ಮಾಡಿದ ಕೂಲಿ ಇನ್ನಾ ಕೊಟ್ಟಿಲ್ರೀ...."

"ಇಲ್ಲದ ಕತಿ ನಾವು ಕೇಳಂಗಿಲ್ಲ. ನಾಳಿಗಿ ಮುಂಜಾನಿ ಅನ್ನುದ್ರಾಗ ಜನ ಕೆಲಸದ ಮ್ಯಾಲ ಇರಬೇಕು" ಅಂತ ನಾವು ತಾಕೀತು ಮಾಡಿದ್ದಕ್ಕೆ ಸಿಟ್ಟು ಬಂದ ಜ್ಯೂನಿಯರ್ ಇಂಜಿನಿಯರ್ 'ಸೈಟ್ ಹುಡುಕಬೇಕಾಕ್ಕೈತ್ರಿ.... ನೀವು ಅಂದಂಗ ಆಗೋದಿಲ್ಲ. ಹತ್ತಾರು ಕಿಲೋಮೀಟರ್ ಸುತ್ತಾಡಬೇಕು... " ಸಿಡುಕಿದನು. "ನಡೀರಿ.. ಸೈಟ್ ಹುಡುಕದ್ರಾಗ ನಾವು ಬರ್ತೀವಿ...." ನಮ್ಮ ಜಬರದಸ್ತಿಗೆ ಜೆ.ಇ. ಜೀಪಿನಿಂದಿಳಿದು "ಬರ್ರೀ..." ಅಂದು ಬಿರಬಿರ ಬೆಟ್ಟ ಕಣಿವೆ ಹತ್ತತೊಡಗಿದನು. ಕೊಂಗನಹೊಸೂರೆಂಬ ಪುಟ್ಟ ಗ್ರಾಮದ ಮಡಿಲಿಗೆ ಮುಗಿಲೆತ್ತರದ ಬೆಟ್ಟಗಳು ತಲೆ ಎತ್ತಿವೆ. ಈ ನಾಡಿನ ದುಡ್ಡಿದ್ದ ವ್ಯಾಪಾರಸ್ಥರು, ರಾಜಕಾರಣಿಗಳು ಹಣ ಹೂಡಿ ವಿದ್ಯುತ್ ತಯಾರಿಕೆಗಾಗಿ ಫ್ಯಾನುಗಳನ್ನು ನೆಟ್ಟಿದ್ದಾರೆ. ಒಂದು ಸುತ್ತು ಫ್ಯಾನು ತಿರುಗಿದರೆ ನಾಲ್ಕು ರುಪಾಯಿ ಇಪ್ಪತ್ತೆಂಟು ಪೈಸೆಯ ಲಾಭ ಒಬ್ಬೊಬ್ಬರ ಹೆಸರಿಗೆ ಜಮಾ ಆಗುತ್ತದೆ. ನೈಸರ್ಗಿಕವಾಗಿ ಬೀಸುವ ಗಾಳಿಯಿಂದ ವಿದ್ಯುತ್ ತಯಾರಿಸುವ ಸುಜಲಾಂ ಕಂಪನಿಯಲ್ಲಿ ಭಾರಿ ಕುಳಗಳ ಪಾಲುದಾರಿಕೆಯಿದೆ.

ಗೋಕಟ್ಟಾ ನಿರ್ಮಾಣ

ಗ್ರಾಮದ ಜನತೆ ನಿರ್ಮಿಸಿದ ಗೋಕಟ್ಟಾ ನೋಡಿ ಖುಷಿಗೊಂಡೆವು. ಎರಡನೆಯ ಗೋಕಟ್ಟಾ ತುಂಬ ಅಚ್ಚುಕಟ್ಟಾಗಿತ್ತು. ಆಮೇಲೆ ಸಿಕ್ಕ ಸತ್ಯಾದ ಮಾಹಿತಿಯು ನಮ್ಮ ಅನುಮಾನಕ್ಕೆ ಪುಷ್ಟಿ ಒದಗಿಸಿತು. ಒಂದೇ ರಾತ್ರಿಯಲ್ಲಿ ಮೆಷಿನ್ ಮೂಲಕ ನಡೆದ ಕೆಲಸವಾಗಿತ್ತದು. ವಿಡಿಯೋ ಎಂಬ ಪುಟ್ಟ ಯಂತ್ರ ಎಲ್ಲವನ್ನು ಸೆರೆ ಹಿಡಿಯುತ್ತಿತ್ತು. ಬೆಟ್ಟದ ಮೇಲಿಂದ ಧುಮ್ಮಿಕ್ಕುತ್ತ ಹರಿದು ಬರುವ ನೀರು ತಡೆ ಹಿಡಿಯಲು ಇನ್ನೊಂದು ಗೋಕಟ್ಟಾದ ಜರೂರಿ ಇದೆ ಎನಿಸಿತು. ಖಡಿ ಬಿಸಿಲು. ಅಡ್ಡಡ್ಡ-ಒಡ್ಡೊಡ್ಡು.. ಸರಕ್ಕನೆ ಜಾರಿಗೆ ಒಂದಾದರೂ ಮೂಳೆ ಮುರಿದಾತು. ಕಾಲ್ತೊಡಕು ಸೀರೆಯ ನೆರಿಗೆ ಸಿಕ್ಕಿಸಿಕೊಂಡು, ಅಂಗಾಲಿಗೆ ಚಕ್ರ ಮತ್ತು ಮನಸ್ಸಿಗೆಉಲ್ಲಾಸ ಜೋಡಿಸಿಕೊಂಡು ನಾವೆಲ್ಲ ಧಣಿವಿಲ್ಲದೆ ನಡೆದ ಪರಿಗೆ ಹರೆಯದ ಇಂಜಿನಿಯರ್ "ನೀವು ಗಟ್ಟಿ ಮತ್ತ ಜಿದ್ದಿ ಹೆಣ್ ಮಕ್ಕಳು ಅಕ್ಕಾವ್ರೆ" ಅಂದನು. ಒಂದು ಸಣ್ಣ ನಗು ಚೆಲ್ಲಿದೆವಷ್ಟೆ. ಮೂರ್ನಾಲ್ಕು ಕಿ.ಮೀ. ಹಾದಿ ಹಿಂದಿಟ್ಟ ಮೇಲೆ ಬಲಗಡೆಯ ಅಂಚಿನ ಸಮತಟ್ಟು ನೆಲದತ್ತ ಬಂದೆವು. "ಎಸ್. ಇದಾಗಬಹುದು.. ನಾಳಿಗಿ ಇಲ್ಲಿ ಬಂದು ಮಾರ್ಕ್ ಔಟ್ ಮಾಡಿ ಕೊಡ್ತೇನಿ. ನಡಿರಿ. ಊರ ಜನಕ ಮತ್ತೆ ಪಂಚಾಯ್ತಿವ್ರಿಗಿ ಹೇಳಾಣ". ಇಂಜಿನಿಯರ್ ಈಗ ಸರಾಗವಾಗಿ ಮಾತನಾಡುತ್ತಿದ್ದ. ಹೊಲಗಳ ಬದುವಿನಿಂದ ನಡೆದು ಬರುವಾಗ ಕೆಂಪು ಟೊಮ್ಯಾಟೋಗಳು ನೆಲದ ಮರೆಯಲ್ಲಿ ಮಿನುಗುತ್ತಿದ್ದವು. ಒಂದೆರೆಡು ಟೊಮೋಟೋ, ಪಂಪಿನಿಂದ ಸುಗ್ಗುವ ಮುಷ್ಟಿ ನೀರು ನಮ್ಮ ಮಧ್ಯಾಹ್ನದ ಉಪಾಹಾರವಾಗಿತ್ತು. ದಾರಿಯಲ್ಲಿ ಸಿಕ್ಕ ಸಣ್ಣ ರೈತರು - ಕೂಲಿಕಾರರನ್ನು ಕೇಳಿದೆವು. "ಕೆಲಸ ಮಾಡಾಕ ಮನಸ್ಸೈತಿ ಏನಿಲ್ಲಪಾ..." "ಕೊಟ್ರ ಮಾಡೇ ಮಾಡ್ತೀವ್ರೀ". ಅವರ ಕಣ್ಣಲ್ಲಿ ಕನಸಿತ್ತು. ರಾತ್ರಿವರೆಗೂ ಜನರ ಸಭೆ ನಡೆಯಿತು. NREGA ಕುರಿತು ಯಾವುದೇ ಸಮಗ್ರ ಮಾಹಿತಿ ಕೊಡದೆ ಈವರೆಗೂ ಯಾಮಾರಿಸಿದ್ದರು. ರಾತ್ರಿ 10 ಗಂಟೆಯವರೆಗೂ ಬಂಡ್ರಿಥಾಂಡಾದಲ್ಲಿ ಸಭೆ. ಎರಡೂ ಹಳ್ಳಿಯ ಗ್ರಾಮಸ್ಥರು ಕನಿಷ್ಟ 5-7 ತಿಂಗಳು (Sept to March) ವಲಸೆ ಹೋಗುತ್ತಾರೆ. ಕಿತ್ತು ತಿನ್ನುವ ಬಡತನ, ಚಿಕ್ಕಮಗಳೂರಿನ ಕಾಫಿ ಸೀಮೆಗೆ, ಸೊಂಡೂರಿನ ಮೈನ್ಸ್ ಕೆಲಸಕ್ಕೆ ದುಡಿ-ದುಡಿದು ಹೊರಳಿ ಬರುವಾಗ ಕೈಯಲ್ಲಿ ಒಂದೆರೆಡು ಸಾವಿರ ರೂಪಾಯಿ, ಕೆಲವೊಮ್ಮೆ ಸಾಲ, ಅನೇಕ ರೋಗ ರುಜಿನ, ಮೈನ್ಸ್ ಧೂಳಿಗೆ ಟಿ.ಬಿ., ಅಸ್ತಮಾ ಹೀಗೆ ಎಲ್ಲ ಬಳುವಳಿಯೊಂದಿಗೆ ವಾಪಸ್....

ಮರುದಿನ ಕೊಂಗನಹೊಸೂರಿನ ಬೆಟ್ಟದ ಬುಡದ ಬಯಲಂಗಳದಲ್ಲಿ ಅಧಿಕಾರಿಗಳ, ಪಂಚಾಯತ್ ಸಿಬ್ಬಂದಿಗಳ ದಂಡಿತ್ತು. ಜನ ಬುಟ್ಟಿಯಲ್ಲಿ ಸಲಿಕೆ - ಗುದ್ದಲಿಯೊಂದಿಗೆ ರೊಟ್ಟಿ-ಖಾರ- ಪಲ್ಯ ಬುತ್ತಿ ತಂದಿದ್ದರು. ಗಿಡ-ಮರಗಳ ಆಸೆಯಲ್ಲಿ ರೊಟ್ಟಿ ತಿನ್ನುವಾಗ ಮರಿಯಮ್ಮ ತನ್ನ ಒಡಲ ಕಳವಳ ಉಸುರಿದಳು.

ಮರಿಯಮ್ಮಳಿಗೀಗ 40 ವಯಸ್ಸು. ಮದುವೆಯಾದ ಮೂರು ವರ್ಷಕ್ಕೆ ಮಕ್ಕಳಾಗಿಲ್ಲವೆಂದು ಹೊರಹಾಕಿದರು. ಒಂದೆರೆಡು ವರ್ಷದ ನಂತರ ತವರಿನವರೂ ಕೈ ಬಿಟ್ಟರು. ಎಲ್ಲಿಗೆ ಹೋಗಬೇಕು ಮರಿಯಮ್ಮ? ಇದೇ ಹಳ್ಳಿಯಲ್ಲಿ ಕೂಲಿ ಮಾಡುತ ಜಿದ್ದಿನಿಂದ ಬದುಕತೊಡಗಿದಳು. ದಿನವಿಡೀ ದುಡಿದರೂ ರೂ. 20 ಕೂಲಿ. ಕಳೆದ ವರ್ಷ REGA ದಲ್ಲಿ 60 ದಿನಗಳು ಕೆಲಸ ಮಾಡಿದ್ದಾಳೆ. 8 ತಿಂಗಳಿಂದ ಗುಡಿಸಲ ಬಾಡಿಗೆ ಬಾಕಿಯಿತ್ತಂತೆ. REGA ಕೂಲಿಯಿಂದ ಕಟ್ಟಿ ನಿಟ್ಟುಸಿರು ಬಿಟ್ಟಳಂತೆ. "ಅಕ್ಕಾರೆ ಈಕೆಲಸ 200 ದಿನಗಳು ಸಿಗಂಗ ಮಾಡ್ರೀ...." ಮರಿಯಮ್ಮಳ ದನಿಯಲ್ಲಿ ಬದುಕು ಜೈಸಲು ಆಸರೆ ಬೇಕಿತ್ತು. ಇತ್ತ ಎಸ್‌ಎಫ್‌ಐಸಂಗಾತಿ ಅನಂತ ನಾಯಕ ಎತ್ತರದ ದನಿಯಲ್ಲಿ ಕ್ರಾಂತಿಗೀತೆ ಹಾಡುತ್ತಿದ್ದ. ಜನ ದನಿಗೂಡಿಸಿದರು. ಅತ್ತ ಇಂಜಿನಿಯರ್ ನೆಲ ಅಳೆಯುತ್ತಿದ್ದ.

ಸ್ವಾರೆ ಗಂಜೆಗಾಗಿ ಊರೂರು ತಿರುಗೋರು ನಾವಯ್ಯ
ಈ ನಾಡ ಕಟ್ಟಿದವರು ನಾವೆಲ್ಲಿಗ್ಹೋಗಬೇಕು
ಕೂಲಿಯವರು ನಾವು ಕೇಳಯ್ಯ....

ಲ್ಹಾಸಾ ಹಿಂಸಾಚಾರ......


ಪುಟ 9 ರಿಂದ

ಈಗಲೂ ಟಿಬೆಟ್‌ನ ಮಣ್ಣಿನ ಮಕ್ಕಳೇ. ಟಿಬೆಟ್‌ನಲ್ಲಿ ಈಗಲೂ ಚೀನಾದ ಇತರ ಪ್ರಾಂತ್ಯಗಳಿಂದ ಬಂದವರ ಸಂಖ್ಯೆ ಶೆ. 5 ಕ್ಕಿಂತಲೂ ಕಡಿಮೆ (1990 ರ ಜನಗಣತಿ ಪ್ರಕಾರ). ಟಿಬೆಟ್‌ನ ವಿಶಿಷ್ಟ ಭಾಷೆ, ಸಂಸ್ಕೃತಿ, ಚಾರಿತ್ರಿಕ ತಾಣಗಳನ್ನು ರಕ್ಷಿಸಿ ಬೆಳೆಸುವ ವ್ಯಾಪಕ ಕಾರ್ಯಕ್ರಮ ಜಾರಿಯಲ್ಲಿದೆ. ಆದರೆ ಈ ನಿಟ್ಟಿನಲ್ಲಿ ಎಲ್ಲವೂ ಸರಿಯಾಗಿದೆ ಎನ್ನುವಂತಿಲ್ಲ. ಟಿಬೆಟ್‌ನ ವಿಶಿಷ್ಟ ಚಾರಿತ್ರಿಕ ಸನ್ನಿವೇಶ ಮರೆತು ಅದನ್ನು 'ಚೀನೀ ಮುಖ್ಯಧಾರೆ'ಗೆ ವೇಗವಾಗಿ ಸೇರಿಸುವ ಹಲವು ತಪ್ಪುಗಳು ಆಗಿವೆ. ಅದೂ ಪ್ರಮುಖವಾಗಿ 1966-76 ರ ಕುಖ್ಯಾತ 'ಸಾಂಸ್ಕೃತಿಕ ಕ್ರಾಂತಿ'ಯ ಅವಧಿಯಲ್ಲಿ. ಇವೂ ದೇಶದ ಒಟ್ಟು ಬೆಳವಣಿಗೆಯ ಭಾಗವಾಗಿ ಆದದ್ದು. 'ವಸಾಹತುಶಾಹಿ' ಎಂದು ಹೇಳಲು ಯಾವ ಆಧಾರಗಳೂ ಇಲ್ಲ.

ಇನ್ನೊಂದು ಕೊಸಾವೋ ಮಾಡುವ ಯತ್ನ

ಟಿಬೆಟ್ ಮಧ್ಯ ಯುಗದ ಕ್ರೂರ ಪಾಳೆಯಗಾರಿಯಿಂದ ಸಮಾಜವಾದಿ ಆಧುನಿಕರಣದತ್ತ ಹೆಜ್ಜೆಯಿಟ್ಟ ಪ್ರಕ್ರಿಯೆಯ ಭಾಗವಾಗಿ ಕಳೆದ ಐದು ದಶಕಗಳ ತೀವ್ರವಾದ ಸಾಮಾಜಿಕ-ಆರ್ಥಿಕ- ರಾಜಕೀಯ - ಸಾಂಸ್ಕೃತಿಕ ಬದಲಾವಣೆಗಳು ಅಹಿಂಸಾತ್ಮಕವಾಗಿ ಆಗಲಿಲ್ಲ. ಟಿಬೆಟ್ ವಿವಾದವನ್ನು ಚೀನಾವನ್ನು ಹೊಸಕಿ ಹಾಕಲು ಬಳಸಲು ಯತ್ನಿಸಿದ ಸಾಮ್ರಾಜ್ಯಶಾಹಿಗಳು ಅದನ್ನು ಶಾಂತಿಯುತವಾಗಿ ಆಗಗೊಡಲಿಲ್ಲ. ಆದರೆ ಅದನ್ನು 'ವಸಾಹತುಶಾಹಿ ದಮನ' 'ಮಾನವ ಹಕ್ಕುಗಳ ಹರಣ' ಎನ್ನುವಂತಹುದಕ್ಕೆ ಯಾವುದೇ ಪುರಾವೆ ಇಲ್ಲ. ಭಾರೀ ಪ್ರಗತಿ ಕಂಡಿರುವ ಟಿಬೆಟ್‌ನ ಜನತೆ ದಲೈ ಲಾಮಾ-ಬುಶ್ ನಾಯಕತ್ವದಲ್ಲಿ ಮಧ್ಯ ಯುಗದ ಪಾಳೆಯಗಾರಿ ವ್ಯವಸ್ಥೆಗೆ ಹೋಗಲು ಬಯಸುವುದಿಲ್ಲ ಎಂಬುದು ಹಗಲಿನಷ್ಟು ಸ್ಪಷ್ಟ. ಟಿಬೆಟ್‌ನ್ನು 'ಇನ್ನೊಂದು ಕೊಸೊವೊ' ಮಾಡುವ ಪ್ರಯತ್ನ ಫಲಿಸುವುದಿಲ್ಲ.

ಮಲೆನಾಡಿನಲ್ಲಿ ಮಾಫಿಯಾದ ರಕ್ತದೋಕುಳಿ



ಕಣ್ಮನ ಸೆಳೆಯುವ ಮಲೆನಾಡಿನ ಹಸಿರು ರಾಶಿಯ ಮೇಲೆ ಮಾಫಿಯಾ ರಕ್ತದೋಕುಳಿ ಆಡಿದೆ. ಪೂರ್ಣಚಂದ್ರ ತೇಜಸ್ವಿಯವರ 'ಜುಗಾರಿ ಕ್ರಾಸ್'ನಲ್ಲಿ ಕಾಣಸಿರುವ ಘಟನೆಗಳು ಇಲ್ಲಿ ಮಾಮೂಲಿ. ನಾಗರೀಕ ಪ್ರಪಂಚದಿಂದ ನಿಗೂಢವಾಗಿರುವ ಅರಣ್ಯದೊಳಗೆ ಏನೇನೂ ನಡೆಯುತ್ತವೆಂಬುದು ಒಳಗಿನವರಿಗೆ ಮಾಮೂಲಾದರೆ ಹೊರಗಿನವರಿಗೆ ಕುತೂಹಲ ಮಿಶ್ರಿತ ಭಯ.

ಇದುವರೆಗೆ ಚಾರಣಕ್ಕೆ ಹೋದ ಹಲವರು 'ದಾರಿತಪ್ಪಿ' ಕಾಣೆಯಾಗಿ ಅಸ್ತಿಪಂಜರವಾಗಿಯೇ ಸಿಕ್ಕುತ್ತಿದ್ದರು. ಇವರು ಕಾಡು 'ಮೃಗ'ಗಳಿಗೋ ಅಥವಾ ನೀರಿನ ಸೆಳವಿಗೋ ಸಿಕ್ಕಿ ಸತ್ತಿದ್ದಾರೆ ಎಂದೇ ಸಾಬೀತಾಗುತ್ತಿತ್ತು. ಈಗೀಗ ಯಾಕೋ ಅನುಮಾನ ಕಾಡುತ್ತಿದೆ. ಅದು ನಿಜವಾ ಅಂತ.

ಏನೇ ಆಗಲಿ ಮನೆನಾಡಲ್ಲಿ ಮಾಫಿಯಾ ರಕ್ತದ ತಿಲಕವನ್ನು ಹಸಿರೆಲೆಯ ಮೇಲೆ ದಾಖಲಿಸುತ್ತಿದೆ. ಹಾಗೆಯೇ ಅದು 'ದನಿ ಕಳೆದುಕೊಳ್ಳುವ ತೊರೆ'ಯೊಳಗೆ ಸೇರಿ ಹೋಗುತ್ತದೆ.

ಪಶ್ಚಿಮ ಘಟ್ಟದ ದಟ್ಟ ಅರಣ್ಯದಲ್ಲಿ ಬಂದೂಕು ಸದ್ದು ಮಾಡುತ್ತಿರುತ್ತದೆ. ರಕ್ತದ ತಿಲಕ ಹಸಿರೆಲೆ ಮೇಲೆ ಕುಳಿತು ಸಾಕ್ಷಿ ಹೇಳಲು ತಯಾರಾಗುತುವದರೊಳಗೆ ತೊಳೆದುಹೋಗುತ್ತದೆ. ಮಲೆನಾಡಿನ ಸಂಪದ್ಭರಿತ ಪ್ರದೇಶದಲ್ಲಿ ಕಳ್ಳಸಾಗಣೆಯ ಮಾಫಿಯಾ ಕೊಬ್ಬಿದೆ. ಅರಣ್ಯ ರಕ್ಷಕರು, ಕೂಂಬಿಂಗ್ ಮಾಡುವ ಪಡೆ ಇದೆಲ್ಲಾ 'ಭದ್ರತೆ' ಇದ್ದರೂ ಕಳ್ಳಸಾಗಣೆ 'ಮುಕ್ತ'ವಾಗಿ ನಡೆಯುತ್ತಿದೆ. ಎಲ್ಲಾ ಕಡೆ ಕತ್ತಲಾದರೆ ಇಲ್ಲಿ ಮಾಫಿಯಾಕೆ ಹಗಲಾಗುತ್ತದೆ. ಮಾಫಿಯಾ ಲೋಕ ತೆರೆದುಕೊಳ್ಳುತ್ತದೆ.

ಮಾಫಿಯಾದ ಟಾರ್ಗೆಟ್ ಮರ, ಸಾಂಬಾರ ಪದಾರ್ಥ, ಬೆತ್ತ, ಪ್ರಾಣಿಗಳ ಅಂಗಾಂಗಗಳು, ಗಾಂಜಾ ಹಾಗೂ ಕೆಂಪು ಹರಳುಗಳು. ಈ ಮಾಫಿಯಾ ಎಷ್ಟು ಬೆಳೆದಿದೆ ಎಂದರೆ ಇಲಾಖೆಯ ನಿರ್ಧಾರವನ್ನು ತೀರ್ಮಾನಿಸುವ ಹಿಂಬದಿಯ ನಿಣಾಯಕರಾಗಿದ್ದಾರೆ.

ಇಲ್ಲಿ ಆಗಾಗ ಮಾಫಿಯಾವು ರಕ್ತದೋಕುಳಿ ಆಡುತ್ತಿತ್ತು. ಆಗಾಗ ಮಾಫಿಯಾಗಳಿಗೆ ಸಣ್ಣಪುಟ್ಟ ಅನಿಸುತ್ತಿದ್ದ ಘಟನೆಗಳು ಬಂದೂಕಿನ ಸದ್ದಿನಲ್ಲಿ ತೀವ್ರ ಗಾಯಗಳೊಂದಿಗೆ ಮುಂದುವರೆಯುತ್ತಿತ್ತು. ಮಾಫೀಯಾ ಇಲಾಖೆಯ ನಿರ್ಧಾರಗಳಲ್ಲಿ ಹಾಗೂ ಭಯ ಹುಟ್ಟಿಸುವಲ್ಲಿ ಸಕ್ರಿಯವಾಗಿದ್ದುದು, ಈಗ ಹತ್ಯೆಗೆ ಇಳಿದಿದೆ. ಬಂದೂಕು ಗುಂಡನ್ನು ನೇರ ಎದೆಗೆ ಸಿಡಿಸಲು ಪ್ರಾರಂಭಿಸಿದೆ.

ಹತ್ಯೆಗೆ ಇಳಿದ ಟಿಂಬರ್ ಮಾಫಿಯಾ

ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಕಾಡುಮನೆ ಎಸ್ಟೇಟ್‌ಗೆ ಸುಮಾರು 6 ಸಾವಿರ ಹೆಕ್ಟೇರ್‌ಗಿಂತಲೂ ಹೆಚ್ಚು ವಿಸ್ತಾರವಾಗಿರುವ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿದೆ. ಜನವರಿಯಲ್ಲಿ ಹರಾಜಾಗಿದ್ದ ನಾಟಾವನ್ನು ಕಡಿಯಲು ಬಂದಿದ್ದ 15 ಜನ ಕಾರ್ಮಿಕರ ಮೇಲೆ ಜಿನುಗುಮಳೆಯ ಸರಿ ರಾತ್ರಿ 12.00 ಗಂಟೆಯ ಹೊತ್ತಿನಲ್ಲಿ ಗುಂಡಿನ ದಾಳಿ ನಡೆದಿದೆ. ಒಬ್ಬ ಕಾರ್ಮಿಕ ಬಲಿಯಾದರೆ ನಾಲ್ಕೈದು ಮಂದಿ ಗಾಯಗೊಂಡಿದ್ದಾರೆ. ಕಾಡುಮನೆ ಎಸ್ಟೇಟ್‌ನ ಮಂಚನಹಳ್ಳಿ ಭಾಗಕ್ಕೆ ಹೊಂದಿಕೊಂಡಿರುವ ಭಾಗದ ಅರಣ್ಯ ಪ್ರದೇಶಕ್ಕೆ ಹರಾಜಾಗಿದ್ದ ಮರ ಕಡಿಯಲು ಬಂದು ಟಿಂಬರ್ ಕೂಪ್ ಬಿಡಾರದಲ್ಲಿ ಮಲಗಿದ್ದ 15 ಜನರ ಕಾರ್ಮಿಕರ ತಂಡದ ಮೇಲೆ ಬೆಟ್ಟದ ಒಂದು ಬದಿಯಿಂದ ಗುಂಡಿನ ದಾಳಿ ನಡೆಸಲಾಗಿದೆ.

ಜಿನುಗು ಮಳೆಯ ನಡುರಾತ್ರಿಯಲ್ಲಿ ಗುಂಡು ಹಾರಿದ್ದು ಹೇಗೆ? ಏಕೆ?

ಪೋಲಿಸಿನವರ ಪ್ರಕಾರ ಬೇಟೆಯಾಡಲು ಬಂದವರು ಹಾರಿಸಿದ ಗುಂಡಿನಿಂದ ಈ ಘಟನೆ ನಡೆದಿದೆ. ಪ್ರಾಣಿಗೆ ಇಟ್ಟ ಗುರಿ ತಪ್ಪಿ ಕಾರ್ಮಿಕರಿಗೆ ತಗುಲಿದೆ. ಇಲ್ಲವೇ ನೀಲಿ ಪ್ಲಾಸ್ಟಿಕ್‌ನ್ನು ಹೊದಿಸಿದ ಗುಡಾರದೊಳಗೆ ಹಚ್ಚಿಟ್ಟಿದ್ದ ಲಾಟೀನಿನ ಬೆಳಕು ಪ್ರಾಣಿಯ ಕಣ್ಣಿನಂತೆ ಬೇಟೆಗಾರರಿಗೆ ಕಾಣಿಸಿದ್ದು, ಆ ಪ್ರಾಣಿಯ ಮೇಲೆ ಗುರಿ ಮಾಡಿ ಶೂಟ್ ಮಾಡಲಾಗಿದೆ. ಹಾಗಾಗಿ ಇದು ಆಕಸ್ಮಿಕವಾದುದು ಎನ್ನುತ್ತಾರೆ. ಈ ಕತೆ ಕೇಳಿ ಸ್ಥಳೀಯರು ನಗುತ್ತಾರೆ. ಯಾಕ್ರಿ ನಗುತ್ತೀರಿ ಅಂದರೆ 'ನೋಡಿ ಸಾರ್ ಇಲ್ಲಿ ಸೋಮವಾರ ಸಂಜೆಯಿಂದಲೇ ಸ್ವಾತಿ ಮಳೆ ಹುಯ್ಯಲು ಶುರುವಾಗಿತ್ತು. ಈ ಕಾಡಲ್ಲಿ ಬೇಟೆ ಮಾಡಲು ಕತ್ತಲಲ್ಲೇ ಹೋದರೂ ಸ್ವಾತಿ ಮಳೇಲಿ ಹೋಗಲು ಗುರಿಕಾರ್ರು ಬೆಪ್ಪುಗಳಲ್ಲ. ಅಷ್ಟಕ್ಕೂ ಟೆಂಟ್‌ನಲ್ಲಿ ಲಾಟೀನ್ ಬೆಳಕ ಬೇಟೆಯ ಕಣ್ಣೆಂದು ಗುರಿಯಿಡಲು ಅವ್ರಿಗೇನೂ ಐಬುಗಳಲ್ಲ. ಎಂತೆಂತ ಬ್ಯಾಟಿ ಆಡಿರುವವರಿಗೆಲ್ಲಾ ಸ್ವಾತಿ ಮಳೇಲಿ ಬ್ಯಾಟಿ ಆಡೋದು ಸಲೀಸಲ್ಲ. ತೊಡೆ ನಡುಗುತ್ತವೆ ಸ್ವಾಮಿ ಗೊತ್ತಾ, ಬ್ಯಾಟಿ ಆಡೋದಂದ್ರೆ ತಮಾಷೆ ಅಲ್ಲ...." ಅಂತಾರೆ ಇದು ನಿಜ.

ಈ 6 ಸಾವಿರ ಹೆಕ್ಟೇರ್‌ಗಿಂತಲೂ ಹೆಚ್ಚು ವಿಸ್ತಾರವಾಗಿರುವ ಈ ಅರಣ್ಯದಲ್ಲಿ ಈ ಜಿನುಗುವ ಮಳೆಯ ಕಾರ್ಗತ್ತಲನ್ನು ಯಾರೂ ಆರಿಸಿಕೊಳ್ಳಲಾರರು. ಪ್ರಾಣಿಗಳೆಲ್ಲಾ ತಮ್ಮ 'ಮನೆ' ಸೇರಿಕೊಂಡಿರುತ್ತವೆ. ಅಲ್ಲದೆ ಬೇಟೆಗಾರರು ನುರಿತವರು. ಬಿಡಾರದೊಳಗೆ ಹಚ್ಚಿರುವ ಲಾಟೀನಿನ ಬೆಳಕು ನೀಲಿ ಬಣ್ಣದ ಟಾರ್ಪಲ್ ಅನ್ನು ದಾಟಿ ಪ್ರಾಣಿ ಕಣ್ಣಿನ ರೀತಿ ಕಾಣಿಸಿದೆ ಎಂದರೆ ಅದು ಇನ್ನೆಂತಹ 'ಸತ್ಯ'ವಿರಬಹುದು.

ಇದು ಆಕಸ್ಮಿಕವಲ್ಲ ! ಟಿಂಬರ್ ಮಾಫಿಯಾದ ಲೀಲೆ....

ಸಾಮಾನ್ಯವಾಗಿ ಮಾಫಿಯಾದೊಳಗಿನ ವ್ಯವಹಾರಗಳು ಬಹುತೇಕ ಅವರೊಳಗೆ ಪ್ರಾಮಾಣಿಕವಾಗಿಯೇ ನಡೆಯುತ್ತವೆ. 'ವ್ಯವಹಾರ'ದಲ್ಲಿ ವ್ಯತ್ಯಾಸವಾದರೆ ಅಥವಾ ಹೊಂದಾಣಿಕೆಯಾಗದಿದ್ದರೆ ಬಂದೂಕಿನ ಮೂಲಕ ಮಾತನಾಡಿ ಉಳಿದವರಿಗೆ ಎಚ್ಚರಿಸುತ್ತಾರೆ.

ಹಾಗಾದರೆ ಕಾಡುಮನೆ ಎಸ್ಟೇಟಿನಲ್ಲಿ ನಡೆದ ಕಾರ್ಮಿಕನ ಹತ್ಯೆ ಟಿಂಬರ್ ಮಾಫಿಯಾದ ನಡುವಿನ ವ್ಯವಹಾರದ ಹೊಂದಾಣಿಕೆಯ ಕೊರತೆಯ ಫಲವೇ? ಹೌದೆನ್ನುತ್ತಾರೆ ಸ್ಥಳೀಯರು.

ಈ ಅರಣ್ಯ ಪ್ರದೇಶ ಅಪರೂಪದ ಬೆಲೆಬಾಳುವ ಚಿನ್ನದ ಬೆಲೆಯಿರುವ ಮರಗಳಿರುವ ದುರ್ಗಮ ಪ್ರದೇಶ. ಇಲ್ಲಿ ಮರ ಕಡಿಯಲು 3 ವರ್ಷಗಳ ಹಿಂದೆಯೇ ಅನುಮತಿ ಕೇಳಲಾಗಿತ್ತು. ಟೆಂಡರ್ ಕರೆಯುವಂತೆ ಮಾಡಲಾಗಿತ್ತು. ಆದರೆ ಜನ ಪ್ರತಿಭಟಿಸಿದರು. ಕಳೆದ ಸಾಲಿನಲ್ಲಿ ಕಾಡುಮನೆ ಎಸ್ಟೇಟಿನ ಮಂಚನಹಳ್ಳಿ ವಿಭಾಗಕ್ಕೆ ಸೇರಿರುವ ವಿಭಾಗಕ್ಕೆ ಬರಡು ಸಾವಿರ ಹೆಕ್ಟೇರ್ ವ್ಯಾಪ್ತಿಯಲ್ಲಿ ಸುಮಾರು 4 ಸಾವಿರ ಮರಗಳನ್ನು ಕಡಿಯಲು ಅನುಮತಿ ನೀಡಲಾಗಿತ್ತು.

ಈ ಮರದ ವಹಿವಾಟು ಮೇಲ್ನೋಟಕ್ಕೆ ರಿಸ್ಕಿಯಾಗಿದೆ ಹಾಗೂ ದುಬಾರಿಯಾಗಿದೆ ಅನ್ನುತ್ತಾರೆ. ಆದರೆ 25 ಕೋಟಿ ವ್ಯವಹಾರ ನಡೆಸಿದರೆ 10 ಕೋಟಿ ಲಾಭಕ್ಕೆ ಮೋಸ ಇಲ್ಲ. ಇಂತಹ ವ್ಯವಹಾರದಲ್ಲಿ ಮಾಫಿಯಾದ ಕೈ ಬಹಳ ವಿಶಾಲ ಹಾಗೂ ಉದ್ದ ಮತ್ತು ಭದ್ರವಾಗಿಯೇ ಇರುತ್ತದೆ. ಕಾಡುಮನೆ ಎಸ್ಟೇಟಿನಲ್ಲಿ ನಾಟಾ ಹರಾಜಿಗೂ ಅಂತಹುದೇ ಪೈಪೋಟಿ ಇತ್ತು. ಆದರೆ ಅನುಮತಿ ಸಿಕ್ಕಿದ್ದು ಕಡೂರಿನ ಸೆಬಾಸ್ಟಿನ್ ಎನ್ನುವವರಿಗೆ.

ಮಾಫಿಯಾವು ತಾವು ಸೋತೆವು ಎಂದು ಭಾವಿಸಿದ್ದೆ ಗುಂಡು ರಕ್ತದ ರುಚಿ ನೋಡಲು ಕಾರಣ. ಲಾಭಿಯ ಜಿದ್ದಿಗೆ ಬಲಿಯಾದ ಶಿವರಾಂ ಒಬ್ಬ ಮರ ಕಡಿಯುವ ಕಾರ್ಮಿಕ. ಈ ಘಟನೆ ನೋಡಿದರೆ ಇದು ಆಕಸ್ಮಿಕವಲ್ಲ. ಆದರೆ ಈ ಪ್ರಕರಣದ ಗಂಭೀರತೆಯನ್ನು ತಿರುಚಲು ಬೇಟೆಗೆ ಬಂದವರು ಹಾರಿಸಿದ ಗುಂಡು ಗುರಿ ತಪ್ಪಿದೆ ಎಂದು ಪೊಲೀಸರು ಹಾಗೂ 'ಕೆಲ' ವ್ಯಾಪಾರಿಗಳು ಹೇಳುತ್ತಾರೆ. ಆದರೆ ಒಳಗೊಳಗೆ ಟಿಂಬರ್ ಮಾಫಿಯಾದ ಜಿದ್ದಿನ ಫಲವೇ ಇದು ಎಂದು ಹೇಳುತ್ತಾರೆ. ಟಿಂಬರ್ ಶೂಟ್ ಬಿಡಾರದ ಮೇಲಿನ ದಾಳಿ ಮೊದಲ ಹಂತ.

ಕಾಡುಮನೆ ಎಸ್ಟೇಟಿನಲ್ಲಿ ಮಾಫಿಯಾದ ದಾಳಿಗೆ ಅರಣ್ಯ ಇಲಾಖೆಯ ಸಿಬ್ಬಂದಿಯ ಮೇಲೂ ದಾಳಿ ಈ ಹಿಂದೆ ನಡೆದಿದೆ. ಸಮಸ್ಯೆ ಬಗೆಹರಿಯದಿದ್ದಲ್ಲಿ ಬಂದೂಕಿನ ಮೂಲಕವೇ ಪರಿಹಾರ ಕಂಡುಕೊಳ್ಳುವ ಪ್ರಕರಣಗಳೇ ಹೆಚ್ಚು. ಕಾರ್ಮಿಕರ ನಂತರ ಮೂಲ ವ್ಯಕ್ತಿಯ ಮೇಲೆ ಟಾರ್ಗೆಟ್ ಆಗುವುದೇ ಮುಂದಿನ ಹಂತವಾಗಿರಬಹುದು. ಇನ್ನಷ್ಟು ರಕ್ತ ಹರಿದರೂ ಅಚ್ಚರಿ ಏನೂ ಇಲ್ಲ.

ಈ ಪ್ರಕರಣವನ್ನು ಗುರಿತಪ್ಪಿದ ಗುಂಡಿನಿಂದಾದ ಹತ್ಯೆಯೆಂದು ಪ್ರಕರಣ ಮುಚ್ಚಲಾಗಿದೆ. ಪ್ರಬಲ ಮಾಫಿಯಾಕ್ಕೆ ಇದೇನು ಕಷ್ಟವೂ, ಹೊಸದೂ ಅಲ್ಲ.

ಮೂರು ವರ್ಷಗಳ ಹಿಂದೆ ಮಾಫಿಯಾದ ಸುಳಿವನ್ನು ಬಿಟ್ಟುಕೊಟ್ಟಿದ್ದರೆಂದು ವ್ಯಕ್ತಿಗೆ ಎಚ್ಚರಿಕೆ ನೀಡಲು ಆ ವ್ಯಕ್ತಿಯ ಕೈಕಾಲು ತೆಗೆದಿದ್ದರು. ಸಂಬಂಧಿಸಿದಂತೆ ಯಸಳೂರು ಪೊಲೀಸರು ಠಾಣೆಯಲ್ಲಿ ದೂರು ದಾಖಲಾಗಿತ್ತು. ಕೈಕಾಲು ತೆಗೆದ ವ್ಯಕ್ತಿಯು ಠಾಣೆಗೆ ನುಗ್ಗಿ ದಾಂಧಲೆ ನಡೆಸಿ ದೂರು ದಾಖಲಿಸಬಾರದೆಂದು ಒತ್ತಾಯ ಮಾಡಿ ಸಹಕರಿಸಬೇಕೆಂದು, ಅಡ್ಡಿಪಡಿಸಬಾರದೆಂದು ಧಮಕಿ ಹಾಕಿದ್ದ. ಮಾಫಿಯಾಕ್ಕೆ ಜೀವ ಬಲಿಯಾಗಿ ರಕ್ತ ಹರಿದು ಕೆಂಪು ಹೊಳೆ ಇನ್ನಷ್ಟು ಕೆಂಪಾಯಿತು. ಮಾಫಿಯಾ ಬಿರುಕುಬಿಟ್ಟಿದೆ. ರಹಸ್ಯ ಹೊರಬರುತ್ತಿದೆ. ರಕ್ತ ಇನ್ನಷ್ಟು ಕೆಂಪು ಹೊಳೆಯನ್ನು ಕೆಂಪಾಗಿಸಿದರೂ ಆಶ್ಚರ್ಯ ಇಲ್ಲ.

ಗಾಂಜಾ, ಚಿತ್ತ ಪ್ರಕರಣ..

ಕಬ್ಬಿನಾಲೆ ಅರಣ್ಯದಲ್ಲಿ ಚಿತ್ತ ಕಡಿಯುತ್ತಿದ್ದ ಗ್ಯಾಂಗ್ ಒಂದು ಕಾರ್ಯಾಚರಣೆಗೆ ಹೋಗಿದ್ದ ಅರಣ್ಯ ಇಲಾಖೆ ಮೇಲೆ ದಾಳಿ ಮಾಡಿ ಗುಂಡು ಹಾರಿಸಿತ್ತು. ಹಲವಾರು ಬಾರಿ ಗಾಂಜಾ ಹಾಗೂ ಅಫೀಮು ಬೆಳೆದಿದ್ದ ಪ್ರದೇಶಕ್ಕೆ ದಾಳಿ ಮಾಡಿದಾಗಲೂ ಕೂಡ ಆ ಕಡೆಯಿಂದ ಬಂದೂಕಿನ ಸ್ವಾಗತವೇ ಸಿಕ್ಕಿತ್ತು.

ಗಾಂಜಾ, ಅಫೀಮು ಬೆಳೆಯಲು ಒಳ್ಳೆ ದುರ್ಗಮ ಪ್ರದೇಶವೇ ಆಗಬೇಕಾಗಿರುವುದರಿಂದ ಹಾಗೂ ಮಾನವ ಪ್ರವೇಶ ಕಷ್ಟಸಾಧ್ಯವಾಗುವ ಹಾಗೂ ವಾಸನೆ ಬಹುದೂರದವರೆಗೆ ಹೋಗದ ಪ್ರದೇಶವೇ ಆಗಬೇಕು. ಅಂತಹ ಪ್ರದೇಶ ಪಶ್ಚಿಮ ಘಟ್ಟದಲ್ಲಿ ಸಾಕಷ್ಟಿವೆ.

ಮಲೆನಾಡಿನಲ್ಲಿ ಮಾಫಿಯಾ ಬಂದೂಕಿನ ಮೂಲಕ ಪರಿಹಾರ ಕಂಡುಕೊಳ್ಳುವ ಹಾಗೂ ವ್ಯವಹಾರವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಪ್ರಾರಂಭಿಸಿದ್ದಾರೆ. ಇದು ಅಪಾಯಕರ. ಪಶ್ಚಿಮ ಘಟ್ಟದ ಸಂಪದ್ಭರಿತ ಪ್ರದೇಶ ಮಾಫಿಯಾ ವಶವಾಗುವ ಮುಂಚೆ ಸಂಬಂಧಪಟ್ಟವರು ಎಚ್ಚರಗೊಳ್ಳಬೇಕಿದೆ. ಮಾಫಿಯಾದೊಳಕ್ಕೆ ಮಾಹಿತಿ ನೀಡುವ ಹಾಗೂ ಸಹಕರಿಸುವ ಕುರಿತು ತನಿಖೆ ಆಗಬೇಕಿದೆ. ಮನೋಹರವಾದ ದೃಶ್ಯಗಳು ಹಸಿರು ವನರಾಶಿಯ ಮೇಲೆ ರಕ್ತದ ಕಲೆ ಬೀಳದಂತೆ ನೋಡಿಕೊಳ್ಳಬೇಕಿದೆ. ಮಾಫಿಯಾವನ್ನು ಮಟ್ಟ ಹಾಕಬೇಕಿದೆ.

● ಬಾ.ಸ.ಲಿಂ., ಹಾಸನ

ಕೆಂಪು ಹರಳು ಮತ್ತು ವಿದೇಶ ಯಾತ್ರೆ ಯೋಗ

ಪಶ್ಚಿಮ ಘಟ್ಟದಲ್ಲಿ ಟಿಂಬರ್ ಮಾಫಿಯಾ ಒಂದೇ ಅಲ್ಲ, ಕೆಂಪು ಹರಳು, ಗಾಂಜಾ ಮಾಫಿಯಾವೂ ಕೂಡ ಅಷ್ಟೇ ಪ್ರಬಲ. ಟಿ.ವಿ.9ನ 'ಹೀಗೂ ಉಂಟೆ' ಕಾರ್ಯಕ್ರಮದಲ್ಲಿ ಪಶ್ಚಿಮ ಘಟ್ಟದಲ್ಲಿ ಬಂದರೆ ವಿದೇಶಿ ಪ್ರವಾಸದ ಯೋಗ ಬರುತ್ತದೆ. ಈಗಾಗಲೇ ಕೆಲವರಿಗೆ ಈ ಯೋಗ ಬಂದಿದೆ ಎಂದು ತೋರಿಸಿದ್ದರು. ಇದು ಕೆಂಪು ಹರಳನ್ನು ಲೂಟಿ ಮಾಡುವುದನ್ನು ತೋರಿಸಿದುದಾಗಿತ್ತು. ಈ ಕೆಂಪು ಹರಳುಗಳು 1 ಗ್ರಾಂ.ಗೆ 800 ರೂ.ಗಳಿಗೂ ಹೆಚ್ಚು ಇದೆ. ಈ ಕೆಂಪು ಹರಳುಗಳು ಕೆ.ಜಿ ಲೆಕ್ಕದಲ್ಲಿ ಸಿಗುವುದು. ಕೆಂಪು ಹರಳನ್ನು ಲೂಟಿ ಮಾಡಲು ಒಂದು ದಿನ ಹೋಗಿಬಂದರೆ 8 ಸಾವಿರದಿಂದ 10,000ದವರೆಗೂ ಸಿಗುತ್ತದೆ. ಹಾಗಾಗಿಯೇ ವಿದೇಶ ಪ್ರವಾಸದ ಯೋಗ ಬರುವುದು. ಒಂದೂವರೆ ವರ್ಷದ ಹಿಂದೆ ಈ ಕೆಂಪು ಹರಳುಗಳನ್ನು ಲೂಟಿ ಮಾಡಲು ಬಂದ ಗ್ಯಾಂಗ್ ಮೇಲೆ ಲೂಟಿಗಾ[illegible] ಬಂದ ಇನ್ನೊಂದು ಗ್ಯಾಂಗ್ ದಾಳಿ ಮಾಡಿ [illegible]ಬ್ಬನ ಹತ್ಯೆಯಾಗಿತ್ತು. ಈಗ ಟಿಂಬರ್ ಮಾಫಿಯಾಗೆ ಬಲಿ.

ಕನ್ನಡಿ



ಕೆ.ಎಸ್.ವಿಮಲ

ಏನಮ್ಮ ಗಂಡ ಹೊಡೆದ ಎಂದ ಮಾತ್ರಕ್ಕೇ ದೂರು ಕೊಡಲು ಬರುವುದಾ? ನಿನ್ನ ಗಂಡ ತಾನೇ ನಿನಗೆ ಹೊಡೆದಿದ್ದು, ಎಲ್ಲೋ ಕೋಪದಲ್ಲಿ ನಾಲ್ಕೇಟು ಹೊಡೆದ ಮಾತ್ರಕ್ಕೆ ಅದನ್ನೇ ದೊಡ್ಡದು ಮಾಡುವುದೇ? ಎಂಬ ಪ್ರಶ್ನೆಗಳು ನೋವಿನ ಮೇಲೆ ಎಳೆದ ಬರೆಗಳಾಗಿ ಬಿದ್ದಿರುತ್ತವೆ.

'ಬಾರೇ' ಅಂದರೂ ದೌರ್ಜನ್ಯವಂತೆ ಹೌದೆ ?

"ಅಯ್ಯೋ ನಿಮಗೆ ಗೊತ್ತ ಇನ್ನು ಮೇಲೆ ಗಂಡ ಜೋರಾಗಿ 'ಬಾರೇ' ಎಂದು ಹೆಂಡತಿಯನ್ನು ಕರೆದರೂ ಅದು ದೌರ್ಜನ್ಯ ಅಂತ ಹೇಳಿ ಬಿಡಬಹುದಾದಂತಹ ಕಾಯ್ದೆ ಬಂದು ಬಿಟ್ಟಿದೆ. ಹುಶಾರಾಗಿಬೇಕಪ್ಪ" ಕೌಟುಂಬಿಕ ದೌರ್ಜನ್ಯ ತಡೆ ಮಸೂದೆ-2005 ಅಂಗೀಕಾರಗೊಂಡ ದಿನ ಕರ್ನಾಟಕದ ಉಚ್ಚ ನ್ಯಾಯಾಲಯದ ಒಳಾಂಗಣದಲ್ಲಿ ಒಬ್ಬ ಹಿರಿಯ ಮಹಿಳಾ ವಕೀಲರಿಂದ ಬಂದ ಉದ್ಗಾರವಿದು. ಕೌಟುಂಬಿ ಹಿಂಸೆಯ ಪ್ರಕರಣವೊಂದರ ಕುರಿತು ಚರ್ಚಿಸಲು ಕರಿಕೋಟಿನ ಗೆಳತಿಯ ಭೇಟಿಗೆ ನಾನು ಹೊರಟಿದ್ದೆ. ಸಂವೇದನೆಗಳಿಗೆ ಹೊರತಾಗಿ ನಿಂತು ಬಿಡುವ ಈ ವ್ಯವಸ್ಥೆಯ ಪ್ರತಿಬಿಂಬವಾಗಿ ಅವರು ನನ್ನ ಕಣ್ಣಿಗೆ ಕಾಣಿಸಿದರು. ಆ ಕ್ಷಣಕ್ಕೆ ನಾನು ಜಾರಿದ್ದು ಹುಟ್ಟುವಾಗಲೇ ಇಂತಹ ಅಪವಾದ ಹೊತ್ತುಕೊಂಡೇ ಹುಟ್ಟಿದ ಈ ಮಸೂದೆಯ ಭ್ರೂಣಾವಸ್ಥೆಗೆ.

'ಗಂಡ ಅಲ್ಲದೆ ಇನ್ಯಾರು ಹೊಡೆಯಬೇಕು'!?

ಕೇಂದ್ರದಲ್ಲಿ ಎನ್.ಡಿ.ಎ. ಸರ್ಕಾರವಿದ್ದ ವರ್ಷವದು. ಬೆಂಗಳೂರಿನಲ್ಲಿ ಮಹಿಳಾ ಆಯೋಗದಿಂದ ಆಯೋಜಿಸಲ್ಪಟ್ಟ ಒಂದು ಕಾರ್ಯಾಗಾರ. ಚರ್ಚೆಯ ವಸ್ತು ಕೌಟುಂಬಿಕ ದೌರ್ಜನ್ಯ ತಡೆ ಕಾನೂನು ಜಾರಿ ಮಾಡಲು ತಯಾರಿಸಿದ ಕರಡು ಮಸೂದೆ, ವರ್ಷವಿಡೀ ದುರ್ಜನರಿಂದ ಪೀಡಿತರಾದವರ ನೋವಿನ ಕಥೆಗಳ ಪುಟ ತಿರುವುವ ನನ್ನಂತಹ ಅನೇಕರಿಗೆ ಕರಡು ಮಸೂದೆಯ ಪುಟ ತಿರುವಿದಾಗ ಬರಿ ಮೈ ಮೇಲೆ ಆ್ಯಸಿಡ್ ಸುರಿದಂತಹ ಅನುಭವ. ಕಾರಣ ಹಿಂಸೆಯ ವ್ಯಾಖ್ಯಾನ ಪ್ರಾರಂಭವಾಗಿದ್ದೇ "ಹೆಬಿಚ್ಯುಯಲ್ ಅಸಾಲ್ಟ್" ಎಂದರೆ ಹಿಂಸೆಗೊಳದಾಗ ಮಹಿಳೆ ಎಷ್ಟು ಫ್ರಿಕ್ವೇಂಟ್ ಆಗಿ ಹೊಡೆತ ಬಡಿತಗಳಿಗೆ ಒಳಗಾಗುತ್ತಾಳೆ ಎಂಬ ವಾಕ್ಯದಿಂದ. ಸಾಮಾನ್ಯವಾಗಿ ನಮ್ಮ ಬಳಿ ಬರುವ ಪ್ರಕರಣಗಳ ಮಹಿಳೆಯರು ಪೋಲೀಸರೊಂದಿಗಿನ ತಮ್ಮ ಅನುಭವ ಹಂಚಿಕೊಳ್ಳುವಾಗೆಲ್ಲ ಹೇಳುತ್ತಿರುತ್ತಾರೆ. ಗಂಡನಿಂದ ಆಗುವ ಹಿಂಸೆಯ ವಿರುದ್ಧ ರಕ್ಷಣೆ ಕೇಳುವ ಹೋದರೆ ಏನಮ್ಮ ಗಂಡ ಹೊಡೆದ ಎಂದ ಮಾತ್ರಕ್ಕೇ ದೂರು ಕೊಡಲು ಬರುವುದಾ? ನಿನ್ನ ಗಂಡ ತಾನೇ ನಿನಗೆ ಹೊಡೆದಿದ್ದು, ಎಲ್ಲೋ ಕೋಪದಲ್ಲಿ ನಾಲ್ಕೇಟು ಹೊಡೆದ ಮಾತ್ರಕ್ಕೆ ಅದನ್ನೇ ದೊಡ್ಡದು ಮಾಡುವುದೇ? ಎಂಬ ಪ್ರಶ್ನೆಗಳು ನೋವಿನ ಮೇಲೆ ಎಳೆದ ಬರೆಗಳಾಗಿ ಬಿದ್ದಿರುತ್ತವೆ. ಇದರ ಮುಂದುವರೆದ ಭಾಗವಾಗಿ ನಾವು ಆ ಕರಡು ಮಸೂದೆಯನ್ನು ಕಂಡೆವು.

ಕುರೂಪಕ್ಕೊಂದು ನಾಗರೀಕ ರೂಪ

ಸುಂದರ ಸಂಸಾರದ ಹಣೆಪಟ್ಟಿಯೊಂದಿಗೆ ನಾಲ್ಕು ಗೋಡೆಯ ಒಳಗೆ ಕಂಡೂ ಕಾಣದಂತಿರುವ ಕುರೂಪಕ್ಕೊಂದು ನಾಗರೀಕ ರೂಪ ಕೊಡಲು ಸಾಧ್ಯವಾಗುವ ಕಾನೂನನ್ನು ತರಲು ನಡೆಸಿದ ಹಲವಾರು ವರ್ಷಗಳ ಪ್ರಯತ್ನ ಹೂ ಬಿಟ್ಟ ಸಂದರ್ಭವದು. ಆದರೆ ಹೂ ಸಿಗುವ ಬದಲು ಕೈ ಚಾಚಿದರೆ ಸಿಗುವುದು ಬರೀ ಮುಳ್ಳೆ ಆದರೆ ಹೂವಿನಾಸೆ ಯಾರಿಗೆ ಬಂದೀತು. ನ್ಯಾಯಾಂಗದ ಭಾಗವಾಗಿ ಹಲವು ಕಾನೂನು ತಜ್ಞರು, ಸಂಘಟನೆಗಳ ಅನುಭವ ಈ ಹಿಂದೆಯೇ ಇದ್ದ ಕ್ರಿಮಿನಲ್ ಪ್ರೊಸಿಜರ್ ಕೋಡ್‌ಗಳಿಗಿಂತ ಸುಲಭವಾಗಿ ಈ ತೆರನ ಪ್ರಕರಣಗಳನ್ನು ಮುಟ್ಟಲು ಒಂದು ನಾಗರೀಕ ಕಾನೂನು(ಸಿವಿಲ್ ಲಾ) ಬೇಕೆಂಬುದು. ಆದರೆ ಅನಾಗರೀಕತೆಯೇ ಮೈವೆತ್ತಂತಿರುವ ಈ ಕರಡಿಗೆ ನಾಗರೀಕ ಕಾನೂನು ಎಂದು ಕರೆಯುವುದು ಹೇಗೆ. ಬೆಂಗಳೂರಿನ ಕಾರ್ಯಾಗಾರದಲ್ಲಿ ಈ ಕರಡು ಮಸೂದೆಯ ಕುರಿತ ಕಾರ್ಯಾಗಾರದಲ್ಲಿ ಈ ಕರಡು ಮಸೂದೆ ಬೇಡವೇ ಬೇಡವೆಂಬ ಗೊತ್ತುವಳಿ ಅಂಗೀಕರಿಸಲು ಸಫಲರಾಗಿದ್ದೇ ಒಂದು ದೊಡ್ಡ ಸಾಹಸ. ನಡೆಯಿತು ನಂತರ ದೇಶಾದ್ಯಂತ ಚರ್ಚೆ, ಮರುಚರ್ಚೆ, ಪ್ರಸ್ತಾವ ನಂತರ 2005ರಲ್ಲಿ ಜನ್ಮ ತಾಳಿದ್ದು-"ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ 2005".

ದೇಶದಲ್ಲಿ ಈಗಾಗಲೇ ಹಲವು ಕಾನೂನುಗಳಿರುವಾಗ ಇನ್ನೊಂದು ಹೊಸ ಕಾನೂನು ಏಕೆ ಬೇಕೆಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಖಂಡಿತವಾಗಿಯೂ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಗಮನಿಸುವಂತಹ ಹಲವಾರು ಕಾನೂನುಗಳಿವೆ. ಆದರೆ ಅವುಗಳು ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಡಿಯಲ್ಲಿ ಬರುವ ಕಾರಣದಿಂದಾಗಿಯೇ ಒಂದು ನಾಗರಿಕ ನೆಲೆಯ ಕಾನೂನು ಬೇಕೆಂಬ ಅಗತ್ಯ ಕಾಣಿಸಿತು. ಅಷ್ಟೇ ಅಲ್ಲದೆ ಈಗಿರುವ ಕಾನೂನುಗಳ ಅಡಿಯಲ್ಲಿ ಇರುವ ಹಿಂಸೆಯ ವ್ಯಾಖ್ಯಾನದ ವ್ಯಾಪ್ತಿಯಿಂದ ಹೊರಗುಳಿಯುವ ಆದರೆ ಪ್ರಕಟಿತ ದೌರ್ಜನ್ಯಕ್ಕಿಂತಲೂ ಎಷ್ಟೋ ಪಟ್ಟು ಹೆಚ್ಚು ಹಿಂಸೆ ಕೊಡುವ ಮಾನಸಿಕ ಕಿರಿಕಿರಿಗಳು, ಮೂದಲಿಕೆಗಳು ಹಿಂಸೆಯ ವ್ಯಾಖ್ಯಾನಕ್ಕೆ ಒಳಪಡುವಂತಹ ಕಾನೂನಿನ ಅಗತ್ಯವಿತ್ತು. ಅದಕ್ಕೆ ಕೂಡ ಬಲವಾದ ಸಾಮಾಜಿಕ ಕಾರಣವಿದೆ.

ಸಾಮಾನ್ಯವಾಗಿ ಮನೆಯ ಗೌರವ ಕಾಪಾಡುವುದು ಹೆಣ್ಣಿನದೇ ಜವಾಬ್ದಾರಿ ಎಂಬುದು ಅಘೋಷಿತ ನಿಯಮ. ಗಂಡನ ಮನೆಯಲ್ಲಿ ಸಾವಿರ ರೀತಿಯ ಹಿಂಸೆಗೆ ಒಳಪಟ್ಟರೂ ಮೇಲ್ಗಡೆ ನಗುತ್ತಿರುವ ಕುಡಿದ/ಕುಡಿಯದ ಗಂಡನಿಂದ ತಿಂದ ಬಡಿತದಿಂದ ಕೆನ್ನೆ ಊದಿದ್ದರೆ ಹಲ್ಲು ನೋವೆಂದು ಹೇಳಿಕೊಂಡು ತಿರುಗುವ ಸ್ಥಿತಿ ಹೆಣ್ಣಿನದು. ಆದರೆ ಅದೇ ಸಂದರ್ಭದಲ್ಲಿ ತನಗೆ ಬೇಕಾದ ಹಾಗೆ ಹೆಂಡತಿ ಕೇಳಲಿಲ್ಲವೆಂಬ ಕಾರಣಕ್ಕೆ ಅವಳನ್ನು ಸಾರ್ವಜನಿಕವಾಗಿ ನಿಲ್ಲಿಸಿ ಹಿಂಸಿಸಿ, ಅಲ್ಲಿ ಮರ್ಯಾದೆಗಂಜಿ ಆಕೆ ಅವನು ಬಯಸುತ್ತಿದ್ದ ಕೆಲಸ ಮಾಡುವಂತೆ ಒತ್ತಡ ನಿರ್ಮಿಸುವ ಪ್ರವೃತ್ತಿಗಳು ಸಾಕಷ್ಟು ಜನರಲ್ಲಿವೆ. ಶಿಕ್ಷಣ, ಉದ್ಯೋಗ, ವರಮಾನ, ಅರ್ಹತೆ ಹೀಗೆ ಎಲ್ಲ ಕ್ಷೇತ್ರದಲ್ಲಿಯೂ ಸಮಸಮನಾಗಿದ್ದಾಗಲೂ ಹೆಂಡತಿಯೆಂಬ ಕಾರಣಕ್ಕಾಗಿಯೇ ತಗ್ಗಿ ಬಗ್ಗಿ ನಡೆಯಬೇಕೆನ್ನುವ ಒತ್ತಡಗಳು ಆಕೆಯನ್ನು ಹಿಂಸಿಸುತ್ತವೆ.

ಅಸಂಘಟಿತ ಕಾರ್ಮಿಕರಿಗೆ ಶಾಸನಕ್ಕಾಗಿ ಬಲಿಷ್ಟ ಆಂದೋಲನ ಅಗತ್ಯ

ಅಸಂಘಟಿತ ವಲಯ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ 60ಶೇ. ನೀಡುತ್ತದೆ. ಆದರೆ ಇಲ್ಲಿ ಕೋಟ್ಯಂತರ ಕಾರ್ಮಿಕರು ಯಾವುದೇ ರಕ್ಷಣೆ ಇಲ್ಲದೆ ದುಡಿಯಬೇಕಾಗಿದೆ. ಯುಪಿಎ ಸರಕಾರ ಅಧಿಕಾರಕ್ಕೆ ಬಂದಾಗ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಅಸಂಘಟಿತ ಕಾರ್ಮಿಕರಿಗೆ ಒಂದು ಸಮಗ್ರ ಮಸೂದೆಯ ಭರವಸೆ ನೀಡಿತು. ಆದರೆ ಅದು ರಾಷ್ಟ್ರೀಯ ಆಯೋಗದ ಮತ್ತು ಸಂಸತ್ತಿನ ಸ್ಥಾಯೀ ಸಮಿತಿಯ ಶಿಫಾರಸುಗಳಿದ್ದರೂ ಅಷ್ಟೊಂದು ಸುಲಭವಾಗಿ ಈ ದಿಸೆಯಲ್ಲಿ ಮುಂದುವರಿಯುವುದಿಲ್ಲ. ಅಸಂಘಟಿತ ಕಾರ್ಮಿಕರ ಆಂದೋಲನ ಈ ಬಗ್ಗೆ ದೇಶವ್ಯಾಪಿ ಪ್ರಚಾರಾಂದೋಲನ ನಡೆಸಬೇಕು, ಅದಕ್ಕೆ ಸಂಘಟಿತ ವಲಯದ ಕಾರ್ಮಿಕರು ಬೆಂಬಲ ನೀಡಬೇಕು ಎನ್ನುತ್ತಾರೆ ಸಿಐಟಿಯು ಅಧ್ಯಕ್ಷ ಕಾ.ಎಂ.ಕೆ. ಫಂದೆ.



ರಾಷ್ಟ್ರೀಯ ಸ್ಯಾಂಪಲ್ ಸರ್ವೆ 2004-05 ರಲ್ಲಿ ನಡೆಸಿದ 61ನೇ ಸುತ್ತಿನ ಸಮೀಕ್ಷೆ ಪ್ರಕಾರ ಭಾರತದ ಆರ್ಥಿಕದಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆ 42.26ಕೋಟಿ. ಇದರಲ್ಲಿ 39.35ಕೋಟಿ ಕಾರ್ಮಿಕರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ ಹಾಗೂ 2.92ಕೋಟಿ ಮಂದಿ ಸಂಘಟಿತ ವಲಯದಲ್ಲಿ ಯಾವುದೇ ರಕ್ಷಣೆ ಇಲ್ಲದೆ ದುಡಿಯುತ್ತಿದ್ದಾರೆ. ಕಾರ್ಮಿಕ ವರ್ಗದ ಇಷ್ಟೊಂದು ದೊಡ್ಡ ವಿಭಾಗ ಸಂಪೂರ್ಣ ಅರಕ್ಷಿತರಾಗಿರುವಾಗ ಅವರ ರಕ್ಷಣೆಗೆ ಒಂದು ಮಸೂದೆಯನ್ನು ತರುವುದು ಅತ್ಯಾವಶ್ಯಕ ಎಂಬುದು ಕಾರ್ಮಿಕ ಆಂದೋಲನದ ಬಹುಕಾಲದ ಒತ್ತಾಯ. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವಾಗಲೀ, ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರವಾಗಲೀ ಈ ರಕ್ಷಣೆಯನ್ನು ಒದಗಿಸಲು ನಿರಾಕರಿಸಿವೆ.

ಎನ್‌ಡಿಎ ಸರಕಾರ ಒಂದು ಮಸೂದೆ ತಯಾರಿಸಿತ್ತು. ಆದರೆ ಅದು ಮಸೂದೆ ಎಂಬುದಕ್ಕಿಂತ ಹೆಚ್ಚಾಗಿ ಒಂದು ಅಪಹಾಸ್ಯವೆ ಆಗಿತ್ತು. ಸಾಮಾಜಿಕ ಭದ್ರತೆ ಒದಗಿಸುವ ಮಾತು ಅದರಲ್ಲಿತ್ತು. ಆದರೆ ಅದಕ್ಕೆ ಈ ಬಡ ಕಾರ್ಮಿಕರೂ ವಂತಿಗೆ ನೀಡಬೇಕೆಂದಿತ್ತು. ಅವರು ಎಲ್ಲಿಂದ ಕೊಡಲು ಸಾಧ್ಯ ಎಂಬ ಚಿಂತೆ ಸರಕಾರಕ್ಕೆ ಇದ್ದಂತಿರಲಿಲ್ಲ. ಸಹಜವಾಗಿಯೇ ಅದು ಅಲ್ಲಿಗೇ ನಿಂತಿತು. ಚುನಾವಣೆಗೆ ಹೋಗುವ ಮೊದಲು ಎನ್‌ಡಿಎ ಸರಕಾರ ಒಂದು ಸಾಮಾಜಿಕ ಭದ್ರತಾ ಯೋಜನೆಯನ್ನು ಪ್ರಕಟಿಸಿತು. ಆದರೆ ಅದಕ್ಕೆ ಕಾನೂನಿನ ಭರವಸೆ ಏನೂ ಇರಲಿಲ್ಲ. ಕಾರ್ಮಿಕರಿಗೆ ಹಲವು ಸೌಲಭ್ಯಗಳ ಆಶ್ವಾಸನೆಗಳು ಇದ್ದವು. ಸ್ವತಃ ಪ್ರಧಾನ ಮಂತ್ರಿ ವಾಜಪೇಯಿಯವರು ಸಾವಿರಾರು ಕಾರ್ಮಿಕರಿಗೆ ಕಾರ್ಡುಗಳನ್ನೂ ಹಂಚಿದರು. ಆದರೆ ಯಾರಿಗೂ ಏನೂ ಸಿಗಲಿಲ್ಲ. ಅದು ಇನ್ನೊಂದು ಅಪಹಾಸ್ಯವಾಗಿಯೇ ಉಳಿಯಿತು.

ಯುಪಿಎ ಸರಕಾರ ಅಧಿಕಾರಕ್ಕೆ ಬಂದಾಗ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಅದು ಅಸಂಘಟಿತ ಕಾರ್ಮಿಕರಿಗೆ ಒಂದು ಸಮಗ್ರ ಮಸೂದೆಯ ಭರವಸೆ ನೀಡಿತು. ಆದರೆ ನಂತರ ಅದು ಕಾರ್ಮಿಕ ಸಂಘಗಳಿಗೆ ಕೊಟ್ಟ ಪ್ರಸ್ತಾವ ಹಿಂದಿನ ಎನ್‌ಡಿಎ ಸರಕಾರದ್ದೇ-ತುಸು ಬದಲಾವಣೆಗಳೊಂದಿಗೆ. ಸಮಸ್ತ ಕಾರ್ಮಿಕ ಆಂದೋಲನ ಅದನ್ನು ತಿರಸ್ಕರಿಸಿ ಒಂದು ಸಮಗ್ರ ಮಸೂದೆ ತರಬೇಕೆಂದು ಆಗ್ರಹಿಸಿತು.

ಆಯೋಗದ ಶಿಫಾರಸು

ಭಾರತ ಸರಕಾರ ಸಣ್ಣ ಪ್ರಮಾಣದ ವಲಯಕ್ಕೆ ಒಂದು ಪ್ರತ್ಯೇಕ ಆಯೋಗವನ್ನು ಪ್ರಕಟಿಸಿತು. ಡಾ.ಅರ್ಜುನ್ ಸೇನ್‌ಗುಪ್ತ ಇದರ ಅಧ್ಯಕ್ಷರು. ಆದರೆ ಇದರಲ್ಲಿ ಕಾರ್ಮಿಕ ಪ್ರತಿನಿಧಿಗಳು ಯಾರೂ ಇರಲಿಲ್ಲ. ಈ ಆಯೋಗದ ಪ್ರಾಥಮಿಕ ಪ್ರಸ್ತಾವಗಳನ್ನು ಕಾರ್ಮಿಕ ಸಂಘಗಳು ಒಪ್ಪಲಿಲ್ಲ. ನಂತರ ಒಂದು ವಿವರವಾದ ಚರ್ಚೆ ನಡೆಸಿ ಅದು ಅಸಂಘಟಿತ ಕಾರ್ಮಿಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಎರಡು ಪ್ರತ್ಯೇಕ ಮಸೂದೆಗಳನ್ನು ರೂಪಿಸಿತು.

ಕೇಂದ್ರ ಕಾರ್ಮಿಕ ಮಂತ್ರಾಲಯದ ನಿರ್ದೇಶನದ ಮೇರೆಗೆ ವಿ.ವಿ.ಗಿರಿ ರಾಷ್ಟ್ರೀಯ ಶ್ರಮ ಸಂಸ್ಥೆ (ನ್ಯಾಶನಲ್ ಲೇಬರ್ ಇನ್‌ಸ್ಟಿಟ್ಯೂಟ್) 2006ರಲ್ಲಿ ಒಂದು ವಿಶೇಷ ವಿಚಾರ ಸಂಕಿರಣ ನಡೆಸಿತು. ಅದು ಅಸಂಘಟಿತ ಶ್ರಮಿಕರಿಗೆ ಒಂದು ಸಮಗ್ರ ಮಸೂದೆ ಕುರಿತಂತೆ ಸರ್ವಸಮ್ಮತಿಯ ಶಿಫಾರಸುಗಳನ್ನು ಮಾಡಿತು. ಆದರೆ ಇದೂ ಅಷ್ಟಕ್ಕೆ ನಿಂತಿತು.

ಸಂಸತ್ತಿನ ಕಳೆದ ಮಳೆಗಾಲದ ಅಧಿವೇಶನದ ವೇಳೆ ಸಿಐಟಿಯುನ ಒಂದು ನಿಯೋಗ ಕೆಲವು ಪ್ರಮುಖ ಸಂಸತ್ ಸದಸ್ಯರೊಂದಿಗೆ ಕೇಂದ್ರ ಕಾರ್ಮಿಕ ಮಂತ್ರಿ ಆಸ್ಕರ್ ಫರ್ನಾಂಡೀಸ್‌ರವರನ್ನು ಭೇಟಿ ಮಾಡಿ ಅರ್ಜುನ್ ಸೇನ್‌ಗುಪ್ತ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಬೇಕು ಎಂದು ಆಗ್ರಹಿಸಿತು. ಒಂದು ಮಸೂದೆಯನ್ನೇನೋ ಕೇಂದ್ರ ಮಂತ್ರಿಮಂಡಲ ಮಂಜೂರು ಮಾಡಿತು. ಆದರೆ ಅದರಲ್ಲಿ ಇದ್ದದ್ದು ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಸಲಹಾಮಂಡಳಿಗಳನ್ನು ರಚಿಸುವ ಅವಕಾಶ ಮಾತ್ರ. ಎಲ್ಲಾ ಕಾರ್ಮಿಕ ಸಂಘಗಳು ಇದನ್ನು ತಿರಸ್ಕರಿಸಿ ಯುಪಿಎ ಸರಕಾರ ವಚನ ನೀಡಿದಂತೆ ಒಂದು ಸಮಗ್ರ ಮಸೂದೆಯನ್ನು ತರಬೇಕೆಂದು ಒತ್ತಾಯಿಸಿದವು.

ಮಳೆಗಾಲದ ಅಧಿವೇಶನದ ಕೊನೆಯ ದಿನ ತರಾತುರಿಯಲ್ಲಿ ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿ ಅದನ್ನು ಕಾರ್ಮಿಕ ಸ್ಥಾಯೀ ಸಮಿತಿಗೆ ಒಪ್ಪಿಸಲಾಯಿತು. ಇದೂ ಸಮಗ್ರ ಮಸೂದೆಯಾಗಿರಲಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಎಡಪಕ್ಷಗಳ ಸದಸ್ಯರು ಈ ಮಸೂದೆಯ ಮಂಡನೆಯನ್ನೆ ವಿರೋಧಿಸಿದರು. ಕಾರ್ಮಿಕ ಸಂಘಗಳು ಕೂಡಾ ಈ ರೀತಿ ಗುಟ್ಟಿನಲ್ಲಿ ಮಸೂದೆ ಮಂಡಿಸಿದ ರೀತಿಯನ್ನು ಖಂಡಿಸಿದವು.

ಸಂಸತ್ತಿನ ಸ್ಥಾಯೀ ಸಮಿತಿಯ ಪರಿಶೀಲನೆ

ಸಿಪಿಐ ಸಂಸತ್ ಸದಸ್ಯ ಎಸ್.ಸುಧಾಕರ ರೆಡ್ಡಿ ಅಧ್ಯಕ್ಷತೆಯ ಸಂಸತ್ತಿನ ಕಾರ್ಮಿಕ ಸ್ಥಾಯೀ ಸಮಿತಿ ಈ ಮಸೂದೆಯ ಆಮೂಲಾಗ್ರ ಪರಿಶೀಲನೆ ನಡೆಸಿತು. ಕಾರ್ಮಿಕ ಸಂಘಗಳ ಪ್ರಸ್ತಾವಗಳನ್ನು ಸಹಾನುಭೂತಿಯಿಂದ ಆಲಿಸಿತು ಹಾಗೂ ತನ್ನ ವರದಿಯಲ್ಲಿ ಈ ಬಗ್ಗೆ ಸಕಾರಾತ್ಮಕ ನಿಲುವು ತೋರಿದೆ. ಇದರಲ್ಲಿ ಅಸಂಘಟಿತ ಕಾರ್ಮಿಕರ ದುರ್ಭರ ಸ್ಥಿತಿಗತಿಗಳನ್ನು ಕೂಡಾ ಸಹಾನುಭೂತಿಯಿಂದ ಪರಿಶೀಲಿಸಲಾಗಿದೆ. ಈ ಮಸೂದೆ ಕೋಟ್ಯಂತರ ಅಸಂಘಟಿತ ಕಾರ್ಮಿಕರ ಆಶೋತ್ತರಗಳನ್ನು ಈಡೇರಿಸಲಾರದು, ಸರಕಾರ ಈ ಬಗ್ಗೆ ಸಾಕಷ್ಟು ಚಿಂತನೆ ನಡೆಸದೆ ಈ ಮಸೂದೆಯನ್ನು ತಯಾರಿಸಿದೆ ಎಂದು ಸಮಿತಿಯೂ ಅಭಿಪ್ರಾಯ ಪಟ್ಟಿತು. ಅಸಂಘಟಿತ ಕಾರ್ಮಿಕರು ಎನ್ನುವಾಗ ಅಸಂಘಟಿತ ವಲಯದಲ್ಲಿ ದುಡಿಯುವವರು ಮಾತ್ರವಲ್ಲ, ಸಂಘಟಿತ ವಲಯದ ಕ್ಯಾಶುವಲ್/ ಕಾಂಟ್ರಾಕ್ಟ್ ಕಾರ್ಮಿಕರು ಮತ್ತು ಅಸಂಘಟಿತ ಅಥವಾ ಸಂಘಟಿತ ವಲಯ ಇವೆರಡಕ್ಕೂ ಬಾರದ ಅಂಗನವಾಡಿ ಮತ್ತಿತರ ನೌಕರರನ್ನೂ ಈ ಮಸೂದೆ ಒಳಗೊಂಡಿರಬೇಕು ಎಂದು ಸಮಿತಿ ಹೇಳಿದೆ. ಅಸಂಘಟಿತ ವಲಯ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ 60ಶೇ. ನೀಡುತ್ತದೆ. ಆದ್ದರಿಂದ ಈ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸಂಪನ್ಮೂಲಗಳ ಸಂಗ್ರಹಕ್ಕೆ ಒಂದು ಪಾರದರ್ಶಕ ವಿಧಾನವನ್ನು ರೂಪಿಸಬೇಕು ಎಂದೂ ಸಮಿತಿ ಬಲವಾಗಿ ಶಿಫಾರಸು ಮಾಡಿದೆ. ಅದೇ ರೀತಿ ಸಲಹಾ ಮಂಡಳಿಗೆ ಸಾಮಾಜಿಕ ಭದ್ರತಾ ಸ್ಕೀಮುಗಳ ಜ್ಯಾರಿಯ ಮತ್ತು ಉಸ್ತುವಾರಿಯ ಹಕ್ಕು ಇರಬೇಕು ಎಂಬ ಶಿಫಾರಸ್ಸು ಮಾಡಿದೆ.

ಯಾವುದೇ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕ್ರಮ ಅವರ ಉದ್ಯೋಗ ಮತ್ತು ಸೇವಾ ಪರಿಸ್ಥಿತಿಗಳ ನಿಯಂತ್ರಣವಿಲ್ಲದೆ ಅಪೂರ್ಣವಾಗುತ್ತದೆ ಎಂದು ಹೇಳಿರುವ ಸ್ಥಾಯಿ ಸಮಿತಿ ಈ ವಿಷಯದಲ್ಲಿ ಕಾರ್ಮಿಕ ಸಂಘಗಳ ಅಭಿಪ್ರಾಯವನ್ನು ಒಪ್ಪಿದೆ. ಅದು ಸರಕಾರ ಕೃಷಿ ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಎರಡು ಪ್ರತ್ಯೇಕ ಶಾಸನಗಳಿರಬೇಕೆಂಬ ರಾಷ್ಟ್ರೀಯ ಅಸಂಘಟಿತ ವಲಯದ ಉದ್ದಿಮೆಗಳ ಆಯೋಗದ ಶಿಫಾರಸನ್ನು ಗಮನಕ್ಕೆ ತಗೊಳ್ಳದ ಬಗ್ಗೆ ಅಸಂತೋಷವನ್ನು ವ್ಯಕ್ತಪಡಿಸಿದೆ.

ರಾಷ್ಟ್ರೀಯ ಆಯೋಗದ ಮತ್ತು ಸಂಸತ್ತಿನ ಸ್ಥಾಯೀ ಸಮಿತಿಯ ಶಿಫಾರಸುಗಳಿದ್ದರೂ ಯುಪಿಎ ಸರಕಾರ ಅಷ್ಟೊಂದು ಸುಲಭವಾಗಿ ಈ ದಿಸೆಯಲ್ಲಿ ಮುಂದುವರಿಯುವುದಿಲ್ಲ. ಸಾಮಾಜಿಕ ಭದ್ರತೆಯ ಮತ್ತು ಕಲ್ಯಾಣ ಕ್ರಮಗಳ ಭಾರವನ್ನು ಮಾಲಕರೂ ಒಪ್ಪಿದರೆ ಮಾತ್ರವೇ ಅವುಗಳ ಜ್ಯಾರಿ ಸಾಧ್ಯ. ಆದರೆ ಮಾಲಕರ ಸಂಘಟನೆಗಳೂ ಇದನ್ನು ವಿರೋಧಿಸುತ್ತವೆ. ಆದ್ದರಿಂದ ಅಸಂಘಟಿತ ಕಾರ್ಮಿಕರ ಚಳುವಳಿ ಈ ಬಗ್ಗೆ ದೇಶವ್ಯಾಪಿ ಪ್ರಚಾರಾಂದೋಲನ ನಡೆಸಬೇಕು, ಅದಕ್ಕೆ ಸಂಘಟಿತ ವಲಯದ ಕಾರ್ಮಿಕರು ಬೆಂಬಲ ನೀಡಬೇಕು ಎಂದು ಸಿಐಟಿಯು ಅಧ್ಯಕ್ಷ ಕಾ.ಎಂ.ಕೆ. ಫಂದೆ ಹೇಳುತ್ತಾರೆ. ದೇಶಾದ್ಯಂತ ಒಂದು ಬಲಿಷ್ಟ ಆಂದೋಲನದಿಂದ ಮಾತ್ರವೇ ನಮ್ಮ ಅಸಂಘಟಿತ ವಲಯದ ಈ ಉಪೇಕ್ಷಿತ ವಿಭಾಗಕ್ಕೆ ನ್ಯಾಯ ಸಿಗಲು ಸಾಧ್ಯ..

ಕಳಚಿದ ಸ್ವಾತಂತ್ರ್ಯದ ಸಂಗ್ರಾಮದ ಪ್ರಮುಖ ಕೊಂಡಿ

ಪುಟ 5 ರಿಂದ

ಕೇಂದ್ರದ ಹುಲಿಕಲ್ ನಟರಾಜ್, ಪತ್ರಕರ್ತ ಎ.ಓ ಆವಲ ಮೂರ್ತಿ ಬಸವತತ್ವದ ಜಯಶಂಕರ್, ಕನ್ನಡ ಸಾಹಿತ್ಯ ಪರಿಷತ್ತಿನ ನಾಗಪ್ರಿಯ, ಕರ್ನಾಟಕ ರಕ್ಷಣಾ ವೇದಿಕೆಯ ಚಂದ್ರು, ಪುಟ್ಟರುದ್ರಪ್ಪ, ಅವರ ಸಂಬಂಧಿಕರಾದ ವೀರಭದ್ರಯ್ಯ ಮುಂತಾದವರು ಭಾಗವಹಿಸಿ ಅವರ ಆದರ್ಶಗಳನ್ನು ಮುಂದುವರೆಸುವ ಅಗತ್ಯ ಇಂದಿನ ಪೀಳಿಗೆಗೆ ಅವಶ್ಯವಾಗಿದೆ ಎಂದು ಮಾತನಾಡಿದರು.

ಸಿಪಿಐ(ಎಂ) ತಾ.ಕಾರ್ಯದರ್ಶಿ ಚಂದ್ರತೇಜಸ್ವಿ ಕಾರ್ಯಕ್ರಮ ನಿರ್ವಹಿಸಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಪಂಚಾಯತ್ ನೌಕರರ ಮುಖಂಡ ಗೋಪಾಲಕೃಷ್ಣ, ಖ್ಯಾತ ವಕೀಲರಾದ ವೆಂಕಟೇಶ್‌ಗೌಡ, ಕರ್ನಾಟಕ ಪ್ರಾಂತ ರೈತ ಸಂಘದ ವೆಂಕಟಾಚಲಯ್ಯ, ಡಿವೈಎಫ್‌ಐ ಮುಖಂಡ ವೆಂಕಟೇಶ್ ವಕೀಲ ರುದ್ರಾರಾಧ್ಯ ಮತ್ತಿತರರು ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ.....

ಸಿಪಿಐ(ಎಂ) ರಾಜ್ಯ ಮುಖಂಡ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಕಾಂಗ್ರೆಸ್ ಮಾಜಿ ಶಾಸಕರಾದ ಜಿ.ಆರ್.ವೆಂಕಟಾಚಲಯ್ಯ, ನರಸಿಂಹರೆಡ್ಡಿ, ನಗರ ಸಭಾ ಅಧ್ಯಕ್ಷ ರಾಮಕೃಷ್ಣಪ್ಪ, ನಗರಸಭಾ ಉಪಾಧ್ಯಕ್ಷ ಸೋಮರುದ್ರಶರ್ಮ, ತಾಲ್ಲೂಕು ಪಂಚಾಯತಿ ಅಧ್ಯಕ್ಷರಾದ ಕೃಷ್ಣಮೂರ್ತಿ, ಬಿಜೆಪಿ ಮುಖಂಡರಾದ ನಾರಾಯಣಗೌಡ, ಹನುಮಂತರಾಯಪ್ಪ, ಅರಳುಮಲ್ಲಿಗೆ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ನಿವೇದಿತಾ ವೆಂಕಟೇಶ್ ಬಾಬು, ಹಿರಿಯ ರೈತ ಮುಖಂಡರಾದ ಪಿ.ಜಗನ್ನಾಥ್, ಹೊಸಕೋಟೆಯ ಸು.ರಂ.ರಾಮಯ್ಯ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕೆ.ಎನ್.ಉಮೇಶ್, ರಾಜ್ಯ ಕಾರ್ಮಿಕ ಮುಖಂಡರಾದ ವರಲಕ್ಷ್ಮಿ, ಮೀನಾಕ್ಷಿ ಸುಂದರಂ ಮತ್ತಿತರ ಪ್ರಮುಖರು ಪಾಲ್ಗೊಂಡು ಅಂತಿಮ ದರ್ಶನ ಪಡೆದರು. ಇದಲ್ಲದೆ ಡಿ.ಎಸ್.ಸ್, ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್, ಕಾರ್ಯನಿರತ ಪತ್ರಕರ್ತರ ಸಂಘ, ಕ.ರ.ವೇ ಹಲವು ಸಂಘಟನೆಗಳ ಮುಖಂಡರು ಅಂತಿಮ ನಮನ ಸಲ್ಲಿಸಿದರು.

ಅಭಿಪ್ರಾಯಗಳು

ಬಸವರಾಜಪ್ಪ, ಮುಗುವಾಳಪ್ಪನವರ ಒಡನಾಡಿ

"1967ರಲ್ಲಿ ಮುಗುವಾಳಪ್ಪನವರು ಚುನಾವಣೆಗೆ ನಿಂತಾಗ ನನಗೆ 20 ವರ್ಷ. ಸದ್ಯ 65 ವರ್ಷವಾಗಿದೆ. ಕೆಂಪು ಬನಿಯನ್ ಹಾಕಿ, ಕೆಂಬಾವುಟ ಹಿಡಿದು ಪ್ರಚಾರಕ್ಕೆ ಹೋಗುತ್ತಿದ್ದ ದೃಶ್ಯ ಈಗಲೂ ಕಣ್ಮುಂದಿದೆ. ಹಗಲಿರುಳು ಪ್ರಚಾರ ನಡೆಸಿ, ಕಾಲ್ನಡಿಗೆ ಮೂಲಕವೇ ಹೆಚ್ಚು ಪ್ರಚಾರ ನಡೆಸುತ್ತಿದ್ದೆವು. ಕೇವಲ 58 ರೂಪಾಯಿ ಖರ್ಚು ಮಾಡಿ ಚುನಾವಣೆ ಗೆದ್ದೆವು. ಇಂದು ಸಿಪಿಐ(ಎಂ) ಪಕ್ಷದ ಸ್ವಚ್ಛತೆಯನ್ನು ಎತ್ತಿಹಿಡಿಯುತ್ತದೆ. ಈಗಲೂ ಸಹ ನಾವು ಇದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಮುಗುವಾಳಪ್ಪನವರಿಗೆ ಸುಳ್ಳೆಂಬುದೇ ಗೊತ್ತಿರಲಿಲ್ಲ. ಕಾರ್ಯಕರ್ತರನ್ನು ಅತೀವವಾಗಿ ಪ್ರೀತಿಸುತ್ತಿದ್ದರು.

ಎಸ್. ತಿರುಪಾಳಯ್ಯ

ಪುಟ 14ಕ್ಕೆ

ಜಗದಗಲ

ಶರತ್‌ಚಂದ್ರ

ದಕ್ಷಿಣ ಏಶ್ಯಾದಲ್ಲಿ ಸಾಮ್ರಾಜ್ಯಶಾಹಿ ಮೂಗು ತೂರಿಸುವಿಕೆ

ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಏಶ್ಯಾದಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಪ್ರಜಾಪ್ರಭುತ್ವಕ್ಕಾಗಿ ಹೋರಾಟ ತೀವ್ರಗೊಳ್ಳುತ್ತಿರುವುದು ಒಂದು ಕಡೆ. ಭಯೋತ್ಪಾದಕ ಶಕ್ತಿಗಳ ಬೆಳವಣಿಗೆ ಮತ್ತು ಪ್ರಜಾಪ್ರಭುತ್ವ ಹತ್ತಿಕ್ಕಲು ಅಮೆರಿಕನ್ ಸಾಮ್ರಾಜ್ಯಶಾಹಿ ಹಸ್ತಕ್ಷೇಪ ಇನ್ನೊಂದು ಕಡೆ. ಅದು ಭಾರತ, ಪಾಕಿಸ್ತಾನ, ಶ್ರೀಲಂಕ ಮತ್ತು ಬಾಂಗ್ಲಾದೇಶದೊಂದಿಗೆ ಮಿಲಿಟರಿ ಸಹಕಾರದ ಒಪ್ಪಂದಗಳನ್ನು ಪಡೆದಿದೆ. ಸಾಮ್ರಾಜ್ಯಶಾಹೀ ಹಸ್ತಕ್ಷೇಪದ ವಿರುದ್ಧ ಸಮರಗಳು, ಪ್ರಜಾಪ್ರಭುತ್ವಕ್ಕಾಗಿ ಮತ್ತು ನವ ಉದಾರವಾದಿ ಧೋರಣೆಗಳ ವಿರುದ್ಧ ಹೋರಾಟ ಎಲ್ಲಾ ದಕ್ಷಿಣ ಏಶ್ಯಾದ ದೇಶಗಳ ಜನಗಳನ್ನು ಒಟ್ಟು ಸೇರಿಸುವ ಒಂದು ಸರ್ವಸಾಮಾನ್ಯ ಅಂಶ. ಮತೀಯ ಸಂಕುಚಿತವಾದ ಮತ್ತು ಮೂಲಭೂತವಾದದ ಶಕ್ತಿಗಳು ತಮ್ಮ ಗುರಿ ಸಾಧನೆಗೆ ಭಯೋತ್ಪಾದಕ ಹಿಂಸಾಚಾರಕ್ಕೆ ಇಳಿದು ಜನತೆಯ ಐಕ್ಯತೆಯನ್ನು ಛಿದ್ರಗೊಳಿಸುತ್ತವೆ ಮತ್ತು ಈ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿ ಒಳತೂರುವಿಕೆಗೆ ನೆರವಾಗುತ್ತವೆ. ಪಾಕಿಸ್ತಾನ ಮತ್ತು ನೇಪಾಳಗಳಲ್ಲಿ ಸಾಮ್ರಾಜ್ಯಶಾಹಿ ಮೂಗು ತೂರಿಸುವಿಕೆ ಮತ್ತು ಭಯೋತ್ಪಾದನೆಯ ಸವಾಲು ಇದ್ದಾಗ್ಯೂ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಮಹತ್ವದ ವಿಜಯ ಸಾಧಿಸಿದೆ. ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಬರ್ಮಾಗಳಲ್ಲಿ ಸರ್ವಾಧಿಕಾರಿ ಪ್ರಭುತ್ವ ಬಲಗೊಂಡು ಪ್ರಜಾಪ್ರಭುತ್ವಕ್ಕೆ ಹಿನ್ನಡೆಯಾಗಿದೆ.

ಪಾಕ್‌ನಲ್ಲಿ ಅಮೇರಿಕನ್ ಆಟ

ಪಾಕಿಸ್ತಾನದಲ್ಲಿ ಇತ್ತೀಚಿನ ಅವಧಿಯಲ್ಲಿ ಹೆಚ್ಚೆಚ್ಚು ರಾಜಕೀಯ ಅಲ್ಲೋಲ-ಕಲ್ಲೋಲ, ಕಲಹ ಮತ್ತು ಮತೀಯ ಉಗ್ರಗಾಮಿಗಳಿಂದ ಬೆದರಿಕೆಗಳನ್ನು ಕಾಣುತ್ತಿದೆ. ಮುಷರ್ರಫ್ ಆಳ್ವಿಕೆ ಜುಲೈ 2007ರಲ್ಲಿ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ವಜಾ ಮಾಡಿದ್ದು ವ್ಯಾಪಕ ಪ್ರತಿಭಟನೆಗಳನ್ನೆಬ್ಬಿಸಿ ಅದನ್ನು ಏಕಾಂಗಿಯಾಗಿಸಿತು ಮತ್ತು ಅದರ ಕಾನೂನುಬದ್ಧತೆಯನ್ನು ಹ್ರಾಸಗೊಳಿಸಿತು. ಮುಷರ್ರಫ್ ಸರ್ವಾಧಿಕಾರಶಾಹಿ ಕ್ರಮಗಳಿಗಿಳಿದು ಅಂತಿಮವಾಗಿ ತುರ್ತು ಪರಿಸ್ಥಿತಿ ಹೇರಲಾಯಿತು. ಮುಷರ್ರಫ್ ಆಳ್ವಿಕೆಗೆ ಊರುಗೋಲಾಗಿರುವ ಅಮೆರಿಕಾ ಮಧ್ಯಪ್ರವೇಶಿಸಿತು. ಅದು ಮುಷರ್ರಫ್ ನಾಗರಿಕ ಅಧ್ಯಕ್ಷರಾಗಿ ಮುಂದುವರೆಯುವ ಮತ್ತು ಬೆನಜಿರ್ ಭುಟ್ಟೊ ಪ್ರಧಾನಮಂತ್ರಿಯಾಗುವ ಒಂದು ವ್ಯವಸ್ಥೆಗೆ ಪ್ರಯತ್ನಿಸಿತು. ಮುಷರ್ರಫ್ ಸುಪ್ರಿಂ ಕೋರ್ಟ್ ನ್ಯಾಯಾಧೀಶರನ್ನು ಬದಲಿಸಿ ಒಂದು ಅನುಕೂಲಕರ ತೀರ್ಪನ್ನು ಪಡೆದ ನಂತರ ಸೇನಾ ಮುಖ್ಯಸ್ಥನ ಸ್ಥಾನದಿಂದ ಕೆಳಗಿಳಿದರು. ಅವರು ತುರ್ತು ಪರಿಸ್ಥಿತಿಯನ್ನು ತೆಗೆಯುವ ಮತ್ತು ಜನವರಿ 8, 2008ರಂದು ಪಾರ್ಲಿಮೆಂಟ್ ಚುನಾವಣೆಗಳನ್ನು ನಡೆಸುವ ಪ್ರಕಟಣೆ ಮಾಡಿದರು. ಚುನಾವಣಾ ಪ್ರಚಾರದ ವೇಳೆಯಲ್ಲಿ ಬೆನಜಿರ್ ಭುಟ್ಟೊರವರ ಘಾತಕ ಹತ್ಯೆ ಪ್ರಜಾಪ್ರಭುತ್ವದ ಮರುಸ್ಥಾಪನೆಯನ್ನು ಛಿದ್ರಗೊಳಿಸುವ ಗುರಿ ಹೊಂದಿತ್ತು. ಗಡಿ ಪ್ರಾಂತ್ಯಗಳಲ್ಲಿ ತಾಲಿಬಾನ್ ಮತ್ತು ಅದರ ಮೂಲಭೂತವಾದಿ ಮಿತ್ರರ ಚಟುವಟಿಕೆಗಳಿಂದ ಒಂದು ಗಂಭೀರ ಬೆದರಿಕೆ ಉಂಟಾಗಿರುವಾಗ ಸೇನಾ ಬೆಂಬಲಿತ ವ್ಯವಸ್ಥೆಯ ವಿಶ್ವಾಸಾರ್ಹತೆ ಕುಂದಿದೆ. ಪಾಕಿಸ್ತಾನದ ಜನತೆ ಒಂದು ಅಮೆರಿಕನ್ ಬೆಂಬಲಿತ ಸರ್ವಾಧಿಕಾರಶಾಹಿ ಆಳ್ವಿಕೆ ಮತ್ತು ಮತೀಯ ಉಗ್ರಗಾಮಿತ್ವದ ಹಿಡುಗಿನ ನಡುವೆ ಸಿಲುಕಿಕೊಂಡಿದೆ. ಚುನಾವಣೆಯಲ್ಲಿ ಪಿ.ಪಿ.ಪಿ ಮತ್ತು ನವಾಝ್ ನಾಯಕತ್ವದ ಮುಸ್ಲಿಂ ಲೀಗ್ ಜಯ ಪ್ರಜಾಪ್ರಭುತ್ವದ ಮರು ಸ್ಥಾಪನೆಯ ಭರವಸೆ ಹುಟ್ಟಿಸಿದೆ.


ಬಾಂಗ್ಲಾದಲ್ಲಿ...

ಪ್ರಜಾಪ್ರಭುತ್ವ ಪ್ರಕ್ರಿಯೆ ಬುಡಮೇಲು ಆಗಿರುವ ಬಾಂಗ್ಲಾದೇಶದಲ್ಲಿ ಒಂದು ಗಂಭೀರ ಸನ್ನಿವೇಶ ಉಂಟಾಗಿದೆ. ಪ್ರಮುಖ ರಾಜಕೀಯ ಪಕ್ಷಗಳ ವ್ಯಾಪಕ ಭ್ರಷ್ಟಾಚಾರ ಮತ್ತು ಚುನಾವಣೆಗಳನ್ನು ನಡೆಸುವ ಬಗ್ಗೆ ಸಮಾಧಾನಗೊಳ್ಳುವಲ್ಲಿ ವಿಫಲತೆಗಳಲ್ಲಿ ಕಾಣಬಂದ ಆಂತರಿಕ ರಾಜಕೀಯ ಪ್ರಕ್ರಿಯೆಯ ದೌರ್ಬಲ್ಯದಿಂದಾಗಿ ಮಿಲಿಟರಿ ಬೆಂಬಲದ ಉಸ್ತುವಾರಿ ಸರಕಾರ ಅಧಿಕಾರ ವಹಿಸಿಕೊಳ್ಳುವಂತಾಗಿದೆ. ಇದು ಚುನಾವಣೆಗಳನ್ನು ತಿರುಚುವ ಹಿಂದಿನ ಖಾಲಿದಾ ಝಿಯಾ ಸರಕಾರದ ನಗ್ನ ಪ್ರಯತ್ನಗಳು ಮತ್ತು ವಿರೋಧ ಪಕ್ಷಗಳ ಪ್ರತಿರೋಧದಿಂದಾಗಿ ಆಯಿತು. ಆಕೆಯ ಆಳ್ವಿಕೆಯಲ್ಲಿ ಇಸ್ಲಾಮಿ ಮೂಲಭೂತವಾದಿ ಶಕ್ತಿಗಳು ಒಂದು ಹಿಡುಗಾಗಿ ಬೆಳೆದವು. ಉಸ್ತುವಾರಿ ಸರಕಾರ ರಾಜಕೀಯ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳ ಚಟುವಟಿಕೆಗಳ ಮೇಲೆ ಒಂದು ಪ್ರಮುಖ ತಡೆ ಹಾಕಿವೆ. ಚುನಾವಣೆಗಳನ್ನು ನಡೆಸುವ ಬಗ್ಗೆ ಅನಿಶ್ಚಿತತೆ ಇದ್ದು ಬಡವರು ಮತ್ತು ದುಡಿಯುವ ಜನರ ಜೀವನ ಮತ್ತು ಜೀವನೋಪಾಯ ಆವಶ್ಯಕ ಸರಕುಗಳ ಬೆಲೆ ಏರಿಕೆಯಿಂದಾಗಿ ದುರ್ಭರಗೊಂಡಿದೆ. ಉಸ್ತುವಾರಿ ಸರಕಾರಕ್ಕೆ ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟದ ಬೆಂಬಲ ಇದೆ. ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಲಿಕ್ಕಾಗಿ ಮತ್ತು ಪಾಶ್ಚಿಮಾತ್ಯ ನಿರ್ದೇಶಿತ ಆರ್ಥಿಕ ನೀತಿಗಳ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಹೋರಾಟ ನಡೆಸಿವೆ.

ಶ್ರೀಲಂಕಾ : 'ಪೂರ್ಣಯುದ್ಧ'ದ ಭಯ

ಶ್ರೀಲಂಕಾದಲ್ಲಿ ಶಾಂತಿ ಪ್ರಕ್ರಿಯೆಯ ಮೂಲಕ ಒಂದು ರಾಜಕೀಯ ಇತ್ಯರ್ಥದ ನಿರೀಕ್ಷೆಗಳಿಗೆ 2006ರಲ್ಲಿ ಹಿನ್ನಡೆಯಾಯಿತು. ಶ್ರೀಲಂಕಾ ಸಶಸ್ತ್ರ ಪಡೆಗಳು ಮತ್ತು ಎಲ್‌ಟಿಟಿಇ ನಡುವೆ ವೈಷಮ್ಯಗಳು ಮತ್ತೆ ಆರಂಭವಾದವು. ಎಲ್‌ಟಿಟಿಇಯನ್ನು ಪೂರ್ವದ ಪ್ರದೇಶದಿಂದ ಸಂಪೂರ್ಣ ಕದಲಿಸುವಲ್ಲಿ ಶ್ರೀಲಂಕಾದ ಸಶಸ್ತ್ರ ಪಡೆಗಳ ಯಶಸ್ಸು ಮಿಲಿಟರಿ ಪರಿಹಾರವನ್ನು ಪ್ರತಿಪಾದಿಸುವ ಶಕ್ತಿಗಳ ಧೈರ್ಯ ಹೆಚ್ಚಿಸಿದೆ. ಎಲ್‌ಟಿಟಿಇ ಯ ಹಠಮಾರಿ ನಿಲುವು ಮತ್ತು ಸಶಸ್ತ್ರ ಹೋರಾಟದ ಅವಲಂಬನೆ ಸನ್ನಿವೇಶವನ್ನು ಇನ್ನಷ್ಟು ಹದಗೆಡಿಸಿದೆಯಷ್ಟೇ. ಈ ವೈಷಮ್ಯಗಳಿಂದ ಮುಖ್ಯವಾಗಿ ನರಳಬೇಕಾಗಿ ಬಂದಿರುವವರು ತಮಿಳು ಜನತೆ. ಇವರಲ್ಲಿ ಬಹಳಷ್ಟು ಮಂದಿ ತಮ್ಮ ಮನೆಮಾರು ಕಳಕೊಂಡಿದ್ದಾರೆ. ಸರಕಾರ ಯುದ್ಧವಿರಾಮ ಒಪ್ಪಂದವನ್ನು ಹಿಂತೆಗೆದುಕೊಂಡಿರುವುದು ಒಂದು ಪೂರ್ಣಪ್ರಮಾಣದ ಯುದ್ಧದ ಭಯವನ್ನು ಎಬ್ಬಿಸಿದೆ. ತಮಿಳು ಪ್ರಶ್ನೆಗೆ ಮಿಲಿಟರಿ ಪರಿಹಾರ ಸಾಧ್ಯವಿಲ್ಲ. ಅಧ್ಯಕ್ಷ ರಾಜಪಕ್ಸೆಯ ಅಡಿಯಲ್ಲಿ ಆಳುವ ಪಕ್ಷ ಸ್ವಾಯತ್ತತೆ ಮತ್ತು ಅಧಿಕಾರಗಳ ವಿಕೇಂದ್ರೀಕರಣದ ಆಧಾರದಲ್ಲಿ ಒಂದು ರಾಜಕೀಯ ಇತ್ಯರ್ಥಕ್ಕೆ ಯಾವುದೇ ಸಕಾರಾತ್ಮಕ ಕ್ರಮ ಕೈಗೊಂಡಿಲ್ಲ. ತಮಿಳುಭಾಷಿಕ ಪ್ರದೇಶಗಳಿಗೆ ಸ್ವಾಯತ್ತತೆ ನೀಡುವ ಮೂಲಕ ಮಾತ್ರವೇ ಶ್ರೀಲಂಕಾದ ಐಕ್ಯತೆಯನ್ನು ಕಾಪಾಡಿಕೊಳ್ಳಬಹುದು ಮತ್ತು ಶಾಂತಿಯನ್ನು ಮತ್ತೆ ಸ್ಥಾಪಿಸಬಹುದು ಎಂಬ ತಿಳುವಳಿಕೆಗೆ ಪ್ರಮುಖ ಸಿಂಹಳ ಪಕ್ಷಗಳು ಬರಲೇಬೇಕಾಗಿದೆ.

ಬರ್ಮಾ : ಗೃಹಬಂಧನದಲ್ಲಿ 'ಪ್ರಜಾಪ್ರಭುತ್ವ'



ಬರ್ಮಾದಲ್ಲಿ ಮಿಲಿಟರಿ ಆಳ್ವಿಕೆಯ ದೀರ್ಘ ಅವಧಿಯಿಂದಾಗಿ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ನಿರ್ಮೂಲಗೊಂಡಿವೆ ಮತ್ತು ಅವರ ಜೀವನ ಪರಿಸ್ಥಿತಿಗಳು ಹದಗೆಟ್ಟಿವೆ. 1988ರ ಪ್ರಜಾಸತ್ತಾತ್ಮಕ ತೀರ್ಪನ್ನು ದಮನ ಮಾಡಿದಂದಿನಿಂದ ಮಿಲಿಟರಿ ಆಳ್ವಿಕೆ ಪ್ರಜಾಸತ್ತಾತ್ಮಕ ಪರಿವರ್ತನೆಯ ಯಾವುದೇ ಅರ್ಥಪೂರ್ಣ ಪ್ರಸ್ತಾವವನ್ನು ಸ್ವೀಕರಿಸಲು ನಿರಾಕರಿಸಿದೆ. ಆಗಸ್ಟ್ 2007ರಲ್ಲಿ ಬೌದ್ಧಭಿಕ್ಷುಗಳ ನೇತೃತ್ವದ ಸಾಮೂಹಿಕ ಪ್ರತಿಭಟನೆಗಳನ್ನು ನಿರ್ದಯವಾಗಿ ಹತ್ತಿಕ್ಕಲಾಯಿತು. ಆಂಗ್ ಸಾನ್ ಸೂ ಕುಯಿ ಇನ್ನೂ ಗೃಹ ಬಂಧನದಲ್ಲಿಯೇ ಇದ್ದಾರೆ.

ನೇಪಾಳದಲ್ಲಿ ಪ್ರಜಾಪ್ರಭುತ್ವದ ಮುನ್ನಡೆ

ನೇಪಾಳದಲ್ಲಿ ಜನಗಳ ಆಂದೋಲನ ರಾಜಪ್ರಭುತ್ವದ ವಿರುದ್ಧ ಮಹತ್ವದ ಯಶಸ್ಸು ಸಾಧಿಸಿದೆ. ನವಂಬರ್ 2006ರಲ್ಲಿ ಏಳು ಪಕ್ಷಗಳ ಮೈತ್ರಿಕೂಟ ಮತ್ತು ಮಾವೋವಾದಿಗಳ ನಡುವಿನ ಒಪ್ಪಂದ ಒಂದು ಪ್ರಜಾಸತ್ತಾತ್ಮಕ ಪರಿವರ್ತನೆಗೆ ಹಾದಿ ಮಾಡಿಕೊಟ್ಟಿತು. ಒಂದು ಮಧ್ಯಂತರ ಸಂವಿಧಾನ, ಒಂದು ಮಧ್ಯಂತರ ಸಂಸತ್ತು ಮತ್ತು ಒಂದು ಮಧ್ಯಂತರ ಸರಕಾರ ಏರ್ಪಟ್ಟಿದೆ. ಮೊದಲೇ ನಿರ್ಧರಿಸಿದಂತೆ ಸಂವಿಧಾನ ಸಭೆಗೆ ಚುನಾವಣೆಗಳನ್ನು ನಡೆಸುವಲ್ಲಿ ವಿಫಲತೆ, ಎರಡು ಬಾರಿ, ಕ್ಲಿಷ್ಟತೆಗಳನ್ನು ಉಂಟು ಮಾಡಿ ರಾಜಕೀಯ ಪ್ರಕ್ರಿಯೆಯನ್ನು ತಟ್ಟಿದೆ. ಈ ನಡುವೆ ತೆರಾಯಿ ಪ್ರದೇಶದಲ್ಲಿ ಒಂದು ಸಮರಶೀಲ 'ಮಾದೇಶಿ' ಆಂದೋಲನ ಬೆಳೆದು ಭವಿಷ್ಯದ ಎಲ್ಲಾ ಅಧಿಕೃತ ಪ್ರಜಾಸತ್ತಾತ್ಮಕ ರಚನೆಗಳಲ್ಲಿ ಅನುಪಾತಿಕ ಪ್ರಾತಿನಿಧ್ಯವನ್ನು ಆಗ್ರಹಿಸಿತು. ಪ್ರತಿಗಾಮಿ ಶಕ್ತಿಗಳು ಇದನ್ನು ಒಂದು ಜನಾಂಗೀಯ ವಿಭಜನೆ ಎಂದು ಹಿಗ್ಗಿಸಿ ಪ್ರಜಾಸತ್ತಾತ್ಮಕ ಸ್ಥಿತ್ಯಂತರದ ಪ್ರಕ್ರಿಯೆಯನ್ನು ಹಳಿ ತಪ್ಪಿಸಲು ಪ್ರಯತ್ನಿಸಿದವು. ಅಮೆರಿಕಾ ಆರಂಭದಿಂದಲೂ ಜನಪ್ರಿಯ ಆಂದೋಲನದಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಮತ್ತು ಮಾವೋವಾದಿಗಳನ್ನು ದೂರ ತಳ್ಳಲು ಪ್ರಯತ್ನಿಸುತ್ತಿದೆ. ರಾಜಪ್ರಭುತ್ವದ ನಿರ್ಮೂಲನೆಯ ಸಮಯ ಮತ್ತು ಸಂವಿಧಾನ ಸಭೆಗೆ ಚುನಾವಣೆಗಳಿಗೆ ಚುನಾವಣಾ ವ್ಯವಸ್ಥೆಯ ಸ್ವರೂಪದ ಬಗ್ಗೆ ಇದ್ದ ಭಿನ್ನಾಭಿಪ್ರಾಯಗಳನ್ನು ಡಿಸೆಂಬರ್ 2007ರಲ್ಲಿ ಬಗೆಹರಿಸಲಾಯಿತು. ಮಾವೋವಾದಿಗಳು ಮಧ್ಯಂತರ ಸರಕಾರವನ್ನು ಮತ್ತೆ ಸೇರಿದ್ದಾರೆ ಮತ್ತು ಸಂವಿಧಾನ ಸಭೆಗೆ ಚುನಾವಣೆಗಳು ಏಪ್ರಿಲ್‌ನಲ್ಲಿ ನಡೆಯಲಿವೆ. ರಾಜಕೀಯ ಪಕ್ಷಗಳು ಚುನಾವಣೆಗಳು ಸುಲಲಿತವಾಗಿ ನಡೆಯುವಂತೆ ಮಾಡಬೇಕಾಗಿದ್ದು ಇದು ನೇಪಾಳದಲ್ಲಿ ಒಂದು ಐತಿಹಾಸಿಕ ಬದಲಾವಣೆ ತರಲು ಮತ್ತು ಒಂದು ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಸ್ಥಾಪಿಸಲು ಹಾದಿ ಮಾಡಿಕೊಡುತ್ತದೆ.

ಕಳಚಿದ ಕೊಂಡಿ...

ಪುಟ 13 ರಿಂದ

"62ರಲ್ಲಿ ತಾ.ಬೋರ್ಡ್ ಚುನಾವಣೆಗೆ ಪಕ್ಷದಿಂದ ಸ್ಪರ್ಧಿಸಿದ್ದರು. ಕಾಂಗ್ರೆಸ್‌ನವರ ಕುತಂತ್ರದಿಂದಾಗಿ 3000 ಮತ ಪಡೆದು ಸೋತರು. ಆದರೆ ಬಡಜನಪರ ಹೋರಾಟಗಳು ನಿರಂತರವಾಗಿದ್ದರು. ಭೂಸುಧಾರಣೆಗಾಗಿ, ಕಾರ್ಮಿಕರ ಹಕ್ಕುಗಳಿಗಾಗಿ ಸಮರಧೀರ ಹೋರಾಟ ಸಂಘಟಿಸುತ್ತಿದ್ದರು. ಚಿನ್ನದ ವ್ಯಾಪಾರ ಮಾಡುವ ಶ್ರೀಮಂತ ಮನೆತನದಲ್ಲಿ ಹುಟ್ಟಿದ್ದರೂ ಕೂಡ ಅತ್ಯಂತ ಸಂಕಷ್ಟ ಜೀವನ ನಡೆಸುತ್ತಿದ್ದರು. ರೈತಸಂಘ ಹಾಗೂ ಪವರ್‌ಲೂಂ ಕಾರ್ಮಿಕರ ಸಂಘಗಳನ್ನು ಪ್ರಬಲವಾಗಿ ಕಟ್ಟಿ ನಡೆಸಿದ ಹೋರಾಟಗಳು ಇಂದಿಗೂ ಜೀವಂತ.

ರೀ...................

ಹತ್ತನ್ನೆರಡು ವರ್ಷದ ಬಾಲಕರಿಂದ ಹಿಡಿದು ಎಂತಹ ದೊಡ್ಡವರಿರಲಿ ಅವರು ರೀ...... ಎಂದು ಕರೆಯುತ್ತಿದ್ದರು. ಎಲ್ಲರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು.

ಎಸ್.ವೈ.ಗುರುಶಾಂತ್ ('ಜನಶಕ್ತಿ' ವಾರಪತ್ರಿಕೆ ಸಂಪಾದಕರು)

ದೇಶದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಕೊಂಡಿ ಕಾಂ.ಮುಗುವಾಳಪ್ಪನವರು. ಸಮಾಜಕ್ಕೆ, ದುಡಿಯುವ ವರ್ಗಕ್ಕೆ ಅವರ ಬದ್ಧತೆ, ಪ್ರೀತಿ ಅವಿಸ್ಮರಣೀಯ ಅನುಕರಣೀಯ.

ಹಿಂದೆ ಐಕ್ಯರಂಗ, ಈಗಿನ ಜನಶಕ್ತಿ ಪತ್ರಿಕೆಯನ್ನು ಅಪಾರ ಶ್ರದ್ಧೆಯಿಂದ ಓದುವುದಲ್ಲದೆ, ಹತ್ತಾರು ಜನರಿಗೆ ಆ ಪ್ರತಿಗಳನ್ನು ಕೊನೆ ಉಸಿರಿರುವವರೆಗೂ ಹಂಚಿಕೆ ಮಾಡಿದರು. ಪತ್ರಿಕೆ ಪ್ರಸಾರ, ಪರಿಸರ ಕಾಳಜಿಯನ್ನು ಎಂದಿಗೂ ನೆನಪಿಸಿಕೊಳ್ಳುವ ಹಲವರು ಅವರ ಸರಳತೆ, ಪ್ರಾಮಾಣಿಕತೆಯನ್ನು ಸ್ಮರಿಸುವರು.

ಲಾಲ್‌ಸಲಾಂ ಕಾಮ್ರೇಡ್ ಮುಗುವಾಳಪ್ಪನವರಿಗೆ.

ನೋಟ



ಡಾ. ಜಿ. ಭಾಸ್ಕರ ಮಯ್ಯ

ಮುಖ್ಯಧಾರೆಯ ಜನವಿರೋಧಿ ಮಾಧ್ಯಮ

ಪ್ರತಿರೋಧದ ವಿಚಾರಗಳು ಸಾಮಾನ್ಯವಾಗಿ ಮಾಧ್ಯಮಗಳಲ್ಲಿ ಪ್ರಕಟವಾಗುವುದೇ ಇಲ್ಲ. ಏಕೆಂದರೆ, ಮಾಧ್ಯಮಗಳು ಮೂಲಭೂತವಾಗಿ ಪ್ರಭುತ್ವದ ರಕ್ಷಣೆಗಾಗಿ ಇರುವ ಅತಿಸೂಕ್ಷ್ಮವಾದ ಮತ್ತು ಅತಿ ಅಪಾಯಕಾರಿಯಾದ ಶಸ್ತ್ರ. ಮಾಧ್ಯಮವೆಂದರೆ ದೊಡ್ಡ ಬಂಡವಾಳಕ್ಕಾಗಿ, ದೊಡ್ಡ ಬಂಡವಾಳಗಾರರ ಮತ್ತು ದೊಡ್ಡ ಬಂಡವಾಳಗಾರರಿಂದ ನಡೆಸಲ್ಪಡುವ ಉದ್ಯಮ. ಟೈಮ್ಸ್ ಆಫ್ ಇಂಡಿಯಾದಂತಹ ಪತ್ರಿಕಾ ಸಮೂಹಗಳ ವಾರ್ಷಿಕ ವಹಿವಾಟು ಕೆಲವು ಸಣ್ಣ ರಾಜ್ಯಗಳ ವಾರ್ಷಿಕ ಬಜೆಟ್‌ಗಿಂತಲೂ ಜಾಸ್ತಿ. ಇವುಗಳು ಸರ್ಕಾರವನ್ನು ನಡೆಸಲು, ಉಳಿಸಲು ಮತ್ತು ಉರುಳಿಸಲು ಸಮರ್ಥವಾಗಿವೆ. ಒಂದರ್ಥದಲ್ಲಿ ಇದೊಂದು ಸಮಾಂತರ ಸರ್ಕಾರ. ಭಾರಿ ಬಂಡವಾಳಿಗರು ಮಾಧ್ಯಮಗಳಲ್ಲಿ ಹಣ ಹೂಡಿರುತ್ತಾರೆ. ಇವರ ಸಂಬಂಧವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಆರ್ಥಿಕ ಶಕ್ತಿಗಳೊಂದಿಗೆ, ಸಟ್ಟಾ ಮಾರುಕಟ್ಟೆಯೊಂದಿಗೆ ಸೇರಿಕೊಂಡಿದೆ.

ಮುಖ್ಯಧಾರೆಯ ಈ ಮಾಧ್ಯಮಗಳೇ ಜನರ ಸಾಮಾಜಿಕ ಅಸ್ತಿತ್ವವನ್ನು ನಿರ್ಣಯಿಸುತ್ತವೆ. 'the ruling ideas of the society are always the ideas of the ruling class' ಎಂಬ ಮಾರ್ಕ್ಸ್‌ರವರ ಮಾತನ್ನು ಮಾಧ್ಯಮಗಳ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಉಚಿತ. ವಸ್ತುಸ್ಥಿತಿಯೆಂದರೆ, ಸಾಮಾನ್ಯವಾಗಿ ಎಲ್ಲರೂ ಸಮಾಚಾರಗಳಿಗೆ ಮುಖ್ಯಧಾರೆಯ ಮಾಧ್ಯಮವನ್ನೇ ಆಶ್ರಯಿಸುತ್ತಾರೆ. ಇಂಗ್ಲೀಷ್ ಸಾಪ್ತಾಹಿಕ 'ತೆಹಲ್ಕಾ' ಹಿಂದಿಯ ದೈನಿಕ 'ಜನಸತ್ತಾ' ಇದಕ್ಕೆ ಅಪವಾದಗಳು. ಈ ಅಪವಾದಗಳನ್ನು ಬಿಟ್ಟರೆ, ಈ ಮುಖ್ಯಧಾರೆಯ ಮಾಧ್ಯಮಗಳಿಗೆ ಪರ್ಯಾಯ (alternative) ಎಂಬುದು ಇಲ್ಲವೇ ಇಲ್ಲ. ಜನರ ಪತ್ರಿಕೆಗಳು ಜನರನ್ನು ತಲುಪುವ ಸ್ಥಿತಿಯಲ್ಲಿ ಇಲ್ಲ.

> **ಸಮಾಚಾರ - ಮಾಧ್ಯಮಗಳು ಪ್ರಭುತ್ವ ಮತ್ತು ರಾಜಕೀಯ ಶಕ್ತಿಗಳ ಅಭಿನ್ನ ಅಂಗ. ರಾಜಕೀಯ ಸಮೀಕರಣವನ್ನು ವ್ಯವಸ್ಥೆಗೊಳಿಸುತ್ತಾ ಸಾಮ್ರಾಜ್ಯಶಾಹಿ ಚಾಕರಿ ಮಾಡುವುದೇ ಅದರ ಪ್ರಮುಖ ಕಾರ್ಯ. ಇದುವೇ ಸಂವಿಧಾನದ ಗೆದ್ದಲು ಹಿಡಿದ ನಾಲ್ಕನೆಯ ಸ್ಥಂಭ!**

ಒಂದೊಂದು ಟಿ.ವಿ. ಚಾನಲ್ ತೆಗೆಯಲು ಕೋಟ್ಯಾಂತರ ರೂಪಾಯಿಗಳು ಬೇಕು. ಇಂತಹ ಮಾಧ್ಯಮಗಳಿಂದ 'ಪ್ರತಿರೋಧ'ದ ವಾರ್ತೆಯನ್ನು ನಿರೀಕ್ಷಿಸುವುದು ಸಾಧ್ಯವೇ? ಜನವರಿ ಎರಡನೆಯ ವಾರ ರತನ್ ಟಾಟಾರ ನ್ಯಾನೋ ಕಾರಿಗೆ ಭಯಂಕರ ಪ್ರಚಾರ ನೀಡಲಾಯಿತು. ಏಕೆ? ಟಾಟಾ ಮಾಧ್ಯಮಗಳಲ್ಲಿ ಭಾರಿ ಬಂಡವಾಳ ಹೂಡಿದ್ದಾರೆ. ಕರ್ನಾಟಕದಲ್ಲಿ ಇತ್ತೀಚೆಗೆ 'ಭಯೋತ್ಪಾದನೆ' ಬಗ್ಗೆ ರಾಶಿರಾಶಿ ಸುಳ್ಳಿನ ಕಂತೆಗಳು ಪ್ರಕಟವಾಗುತ್ತಿವೆ. ಏಕೆ? ಫ್ಯಾಸಿಸ್ಟ್ ಶಕ್ತಿಗಳು ಸುನಿಯೋಜಿತವಾಗಿ ಮಾಧ್ಯಮಗಳನ್ನು ಆಕ್ರಮಿಸಿಕೊಂಡಿವೆ. ನಾಳೆ ಎಂತಹ ಸರ್ಕಾರ ಬೇಕು ಎಂಬ ಬಗೆಗೆ ಅವು ನೀಲಿನಕಾಶೆ ತಯಾರಿಸುತ್ತಿವೆ.

ಮುಖ್ಯಧಾರೆಯ ಮಾಧ್ಯಮಗಳಿಗೆ ಯಾವುದೇ ಅಂಕುಶವಿಲ್ಲ. ಅವು ಕ್ರೂರ, ಹೃದಯಹೀನ. ಲೆಕ್ಕವಿಲ್ಲದಷ್ಟು ಮುನಾಫೆಯನ್ನು ಬಾಚಿಕೊಳ್ಳುತ್ತಾ, ಬಂಡವಾಳಶಾಹಿ ಸಾಂಸ್ಕೃತಿಕ ಆಕ್ರಮಣವನ್ನು ಅಡೆತಡೆಯಿಲ್ಲದಂತೆ ನಡೆಸುವುದೊಂದೇ ಅವುಗಳ ಗುರಿ.

ದಿಲ್ಲಿಯಲ್ಲಿ ಜನವರಿ 17 ರಂದು 'ಕ್ಯಾಂಪೇನ್ ಟು ಸ್ಟಾಪ್ ಫಂಡಿಂಗ್ ಹೇಟ್' (ದ್ವೇಷ ಹರಡಲು ಧನ ಸಹಾಯ ನಿಲ್ಲಿಸಲು ಅಭಿಯಾನ) ಎಂಬ ಸಂಘಟನೆ ಬಹಳ ದೊಡ್ಡ ಪತ್ರಿಕಾಗೋಷ್ಠಿ ಕರೆಯಿತು. ಅದು ಹೇಳುವ ಪ್ರಕಾರ "ಅಮೆರಿಕಾದಲ್ಲಿರುವ ಅನಿವಾಸಿ ಭಾರತೀಯರು ಆರ್‌ಎಸ್‌ಎಸ್, ಭಾಜಪಾ, ವಿಶ್ವಹಿಂದೂ ಪರಿಷತ್ ನಂತಹ ಫ್ಯಾಸಿಸ್ಟ್ ಗುಂಪುಗಳ ಜತೆ ನಿರಂತರ ಸಂಪರ್ಕದಲ್ಲಿದ್ದಾರೆ. ಅವರು ಈ ಸಂಘಟನೆಗಳಿಗೆ ಹೇರಳ ಧನ ಸಹಾಯ ಮಾಡುತ್ತಿದ್ದಾರೆ". ಆದರೆ ಈ ಸುದ್ದಿ ಉರ್ದು ಈ ಟಿ.ವಿ. ಚಾನಲ್ ಒಂದನ್ನು ಬಿಟ್ಟರೆ ಮತ್ತಾವುದರಲ್ಲೂ ಪ್ರಕಟಗೊಳ್ಳಲಿಲ್ಲ.

ಕಳೆದ ವರ್ಷ ನವೆಂಬರ್ ಅಂತ್ಯದಲ್ಲಿ ಪತ್ರಿಕಾಮಾಧ್ಯಮದ ನೌಕರರು, ಪತ್ರಕರ್ತರು - ಹೆಚ್ಚಿನ ವೇತನ ಮತ್ತು ಕೆಲಸದ ಉತ್ತಮ ಪರಿಸ್ಥಿತಿಗಳಿಗಾಗಿ - ಕಾರ್ಮಿಕ ಹಕ್ಕುಗಳಿಗಾಗಿ - ಶ್ರಮ ಭವನದ ಎದಿರು ಬಹುದೊಡ್ಡ ರೀತಿಯಲ್ಲಿ ಧರಣಿ ನಡೆಸಿದರು. ಆದರೆ, ಮಾಧ್ಯಮಗಳು ಈ ಬಗ್ಗೆ ಗಮನವನ್ನೇ ಕೊಡಲಿಲ್ಲ.

ಕಳೆದ ವರ್ಷ ಛತ್ತೀಸ್ ಗಡದ ಸುಪ್ರಸಿದ್ಧ ಡಾಕ್ಟರ್, ಸಮಾಜ ಸೇವಕ ಹಾಗೂ ಮಾನವಹಕ್ಕುಗಳ ಕಾರ್ಯಕರ್ತ 'ವಿನಾಯಕ್ ಸೇನ್' ಅವರನ್ನು ಸುರಕ್ಷಾ ಕಾನೂನಿನನ್ವಯ ಪೊಲೀಸರು ಬಂಧಿಸಿದರು. ಇವತ್ತಿನ ತನಕ ಅವರಿಗೆ ಜಾಮೀನು ಸಿಗಲಿಲ್ಲ. ಸುಪ್ರೀಂಕೋರ್ಟ್ ತನಕ ಅವರಿಗೆ ಜಾಮೀನು ಸಿಗಲಿಲ್ಲ. ಸುಪ್ರೀಂಕೋರ್ಟ್ ಕೂಡಾ ಜಾಮೀನು ನಿರಾಕರಿಸಿದೆ. ಇಂತಹ ಗಂಭೀರ ವಿಚಾರಗಳಲ್ಲಿ ಮಾಧ್ಯಮಗಳು ತಟಸ್ಥ ನಿಲುವನ್ನು ತಾಳುತ್ತವೆ.

ಯುಪಿಎ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಒಂದು ಘಟನೆ ನಡೆಯಿತು. 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯ ಸಮೂಹದ ಯಜಮಾನಿ 'ಶೋಭನಾ ಭರತಿಯ' ಏಕಕಾಲಕ್ಕೆ 400 ಜನ ನೌಕರರನ್ನು ಕೆಲಸದಿಂದ ತೆಗೆದು ಹಾಕಿದಳು. ಇಷ್ಟೊಂದು ದೊಡ್ಡಪ್ರಮಾಣದಲ್ಲಿ ಪತ್ರಿಕೆಯ ನೌಕರರನ್ನು ಕೆಲಸದಿಂದ ವಜಾಗೊಳಿಸಿದ್ದು ಮಾಧ್ಯಮಗಳಿಗೆ ಯಾವ ಮುಖ್ಯ ಘಟನೆಯೂ ಅಲ್ಲ. ಇದು ಪ್ರಾಯಶಃ ಮಾಧ್ಯಮ ಉದ್ಯಮಗಳಲ್ಲೇ ಮೊತ್ತಮೊದಲು. ಇಷ್ಟೊಂದು ಕ್ರೂರ, ಅಮಾನವೀಯ ಘಟನೆ ಪತ್ರಿಕಾ ಮಾಧ್ಯಮದಲ್ಲೇ ನಡೆಯುತ್ತದೆಂದರೆ ಈ ಮಾಧ್ಯಮಗಳು ಯಾವ ಪ್ರತಿರೋಧಕ್ಕೆ ತಾನೆ ದನಿಯಾದಾವು?

ಆಶ್ಚರ್ಯವೆಂದರೆ ಈ ಸದ್ರಿ 'ಶೋಭನಾ ಭರತಿಯಾ' ಗೆ ಆಕೆಯ ಈ ಉತ್ಕೃಷ್ಟ ಸಮಾಜಸೇವೆಗೆ ಪ್ರಸನ್ನರಾದ ರಾಷ್ಟ್ರಪತಿಗಳು ಆಕೆಯನ್ನು ರಾಜ್ಯಸಭೆಗೆ ಸದಸ್ಯರಾಗಿ ನಾಮಕರಣ ಮಾಡಿದರು.

ಹೀಗೆ, ಈ ಸೂಚಿ ಬಹಳ ಉದ್ದವಿದೆ. ಸಮಾಚಾರ - ಮಾಧ್ಯಮಗಳು ಪ್ರಭುತ್ವ ಮತ್ತು ರಾಜಕೀಯ ಶಕ್ತಿಗಳ ಅಭಿನ್ನ ಅಂಗ. ರಾಜಕೀಯ ಸಮೀಕರಣವನ್ನು ವ್ಯವಸ್ಥೆಗೊಳಿಸುತ್ತಾ ಸಾಮ್ರಾಜ್ಯಶಾಹಿ ಚಾಕರಿ ಮಾಡುವುದೇ ಅದರ ಪ್ರಮುಖ ಕಾರ್ಯ. ಇದುವೇ ಸಂವಿಧಾನದ ಗೆದ್ದಲು ಹಿಡಿದ ನಾಲ್ಕನೆಯ ಸ್ಥಂಭ! ○

ಹೋಲಿಕೆ

ಬುಶ್ ಮೋದಿ ಇಬ್ಬರಿಗೆ ಹೋಲಿಕೆಗೆ ನೋಡಿ
ಸೋತೆನ್ನೆ ಜಗವೆಲ್ಲ ಹುಡುಕಾಟ ಮಾಡಿ
ಬೆಚ್ಚದಿರಿ ಈ ಇವರು ಕಾಣದೇ ಬೆವರು
ಈ ಜಗದ ಸಜ್ಜನರ ನಡುಗಿಸಿದ ನರರು

– ವಿಡಂಬಾರಿ

ಕವನ

ಯಾರದೀ ಮಗು?



ಮಗು,
ನೀನು
ಹುಟ್ಟುವ ಮೊದಲು
ನಾನಿನ್ನು ಹಾಲುಗಲ್ಲದ
ಹುಡುಗಿ!

ಆಡುತ್ತ
ಸಂಜೆಯ ನೆರಳಾಗಿ ಬೆಳೆದೆ
ದುಂಡಗೆ!
ಮೂಡುವ ಮುಳುಗುವ
ಸೂರ್ಯ
ನಿಂತು
ನೋಡಿ ಬೆರಗಾದ
ನಾಚಿ
ಕೆಂಪಾದ!

ಒಂದು ದಿನ
'ದೊಡ್ಡವಳಾದೆ'
ದೇವರ ಹೆಸರಿನಲ್ಲಿ
'ದಾಸಿಯಾದೆ'!

ಕತ್ತಲಿಗೆ ಸಿಂಗಾರಗೊಂಡು
ಪ್ರತಿದಿನವೂ ಮುತ್ತೈದೆಯಾದೆ
ಮಗು
ನೀನು ಹುಟ್ಟಿದಾಗ
ನಾನು ತಾಯಿಯಾದೆ!

ನೀನೊಮ್ಮೆ
ಶಾಲೆಗೆ ಸೇರುವಾಗ...
ಮಂದಿ ಮಾತನಾಡುವಾಗ...
ತಂದೆಯ ಹೆಸರು..................?
ಎಂಬ ಪ್ರಶ್ನೆಗೆ ಉತ್ತರ

ನನಗೆ ಗೊತ್ತು
'ಅಮ್ಮ'
ಎಂಬ ಎರಡಕ್ಷರ
'ಅಪ್ಪ'ನ ಖಾಲಿ ಜಾಗ
ತುಂಬುವುದಿಲ್ಲ!

ಮಗು,
ನೀನುಂಡು ಬೆಳೆದ
ನನ್ನದೆಯ ಮೇಲೆ
ಅದೆಷ್ಟು ಕೈಗಳು!
ಲೆಕ್ಕ ಹೇಳಲೆ?

ಲೋಕ ಹೇಳುವ ಮಾತು
'ತಂದೆ ಯಾರೆಂಬುದು ತಾಯಿಗಷ್ಟೇ ಗೊತ್ತು'
ಹೌದಾದರೆ,
ನಿನ್ನ ತಂದೆ
ಯಾರೆಂಬುದು ನನಗಿನ್ನೂ ತಿಳಿಯದ ಸತ್ಯ!

ಕ್ಷಮಿಸು ಮಗು!

– ವಿ.ಹರಿನಾಥಬಾಬು,
ಸದಾಶಿವ ನಗರ
ಸಿರುಗುಪ್ಪ

JANASHAKTHI KANNADA VARA PATRIKE MARCH 30, 2008 Price : Rs. 5/- No. KARKAN /2006/17926 Postal Reg...



ಅತಿರಂಜಿತ 'ಗೂಳಿ'

ಕನ್ನಡ ಚಿತ್ರರಂಗದ ಬಿಸಿ ಮತ್ತೆ ಏರುತ್ತಿದೆ. 'ಜಲಪಾತ v/s ರಕ್ತಪಾತ'ದ ಜಟಾಪಟಿಯಲ್ಲಿ ಜನ ಮೋಹಕ ಜಲಪಾತಕ್ಕೆ ಸೈ ಎಂದಿದ್ದರು. ಈಗ ಕಾಲ ಬದಲಾಗಿದೆ. ವಾತಾವರಣದ ಬಿಸಿಯೊಂದಿಗೆ ಈ ಬಿಸಿಯನ್ನೂ ಸಹಿಸಿಕೊಳ್ಳಬೇಕಾಗಿದೆ. 'ಮಳೆ'ಯ ಅರ್ಭಟಕ್ಕೆ ಸೋತು, ಕೋಣೆ ಸೇರಿದ್ದ ಲಾಂಗು - ಮಚ್ಚುಗಳು ಮತ್ತೆ ಬೀದಿಗಿಳಿದಿವೆ. ಅದೂ ಹೊಸ ಅಕಾರ-ವಿಕಾರಗಳೊಂದಿಗೆ! 'ವಾರಸ್ದಾರ', 'ನಂದಾ ಲವ್ಸ್ ನಂದಿತ' ಆಯ್ತು ಈಗ 'ಗೂಳಿ'!

ಈ 'ಗೂಳಿ'ಯನ್ನು ಎದರಿಸೋಕೆ "ತಲೇಲಿ ಮೂಳೆ, ಎದೆಯಲ್ಲಿ ಖನಿಜ, ಜೊತೆಗೆ ಎರಡು ಗುಂಡಿಗೆ ಇರಬೇಕು". ಸಾಕಲ್ಲ ಸ್ಯಾಂಪಲ್!. ಇದರ ಅರ್ಥ ಮಾತ್ರ ಕೇಳ್ಬೇಡಿ. ಇಂತಹ 'ಗೂಳಿ'ಯ ದಾಳಿಗೆ ಯಾರೂ ಉಳಿಯೋಲ್ಲ. ಹಿಂಸೆಯ ವಿರಾಟ್ ರೂಪ ಈ 'ಗೂಳಿ'.

'ರೌಡಿಸಂ'ನ ಮೋಹ ನಮ್ಮ ಕನ್ನಡ ಚಿತ್ರರಂಗದ ಮಂದಿಗೆ ಬಿಟ್ಟೂ ಬಿಡದ ವ್ಯಾಮೋಹ. ಲಾಂಗು-ಮಚ್ಚುಗಳ ಹೊಳಪು ಹೆಚ್ಚಾಗಿರುತ್ತದೆಯೇ ವಿನಹ ಕಥೆ ಮಾತ್ರ ಅದೇ ಕಾಗಕ್ಕ - ಗುಬ್ಬಕ್ಕ ಕಥೆಯೇ.

'ಗೂಳಿ' - ಈತನಿಗೆ ಬೇರೆ ಹೆಸರಿಲ್ಲ. ಅಪ್ಪ-ಅಮ್ಮ ಯಾರೂ ಇಲ್ಲ. ಬುದ್ದಿ ಹೇಳೋರು ಮೊದಲೇ ಇಲ್ಲ. ಆದ್ದರಿಂದ ಕೈಗೆ ಲಾಂಗು ಮಚ್ಚು - ಇದು ನಿರ್ದೇಶಕರು ಕೊಡೋ ಸಮಜಾಯಿಷಿ. ಮುಂದಿನ ಕಥೆಯನ್ನು ನೀವೂ ಊಹಿಸಬಹುದು. ಸುಂದರ ಲಲನೆಯೊಬ್ಬಳಿಗೆ ಈ 'ಹಿಂಸಾರೂಪಿ'ಯ ಮೇಲೇ ಒಲವು. ಅವನು ನಿರಾಕರಿಸಿದಷ್ಟು ಆಕೆ ಆತನಿಗೆ ಹತ್ತಿರ. ಕಡೆಗೂ ಸೋತ ಮನಸ್ಸು - ಲಾಂಗು ಮಚ್ಚು ಕೆಳಗಿಟ್ಟು ಹುಡುಗಿಯ ಕೈ ಹಿಡಿಯುವ ಕನಸು. ಇದು ಬಿಟ್ಟು ಬೇರೆ ಕಥೆಯಿರುವ 'ರೌಡಿಸಂ' ಚಿತ್ರ ಯಾವುದಿದೆ ನೀವೇ ಹೇಳಿ?

ತೀರಾ ಸವಕಲಾದ ಈ ಕಥೆಯನ್ನೇ ನಿರ್ದೇಶಕ ಪಿ.ಸತ್ಯಾ ಅತಿರಂಜಿತಗೊಳಿಸಿದ್ದಾರೆ. ಹಿಂದೆಂದೂ ಕಾಣದಷ್ಟು ಹಿಂಸೆಯ ವೈಭವ, ರೌಡಿಸಂನ ವೈಭವೀಕರಣ. ಅಬ್ಬಬ್ಬಾ! ಮಚ್ಚು,ಲಾಂಗುಗಳೂ ಬೇಕಿಲ್ಲ, ಒಂದೇ ಒಂದು ಬ್ಲೇಡ್ ಸಾಕು ಹೆಣಗಳ ರಾಶಿ ಉರುಳಿಸೋಕ್ಕೆ ಈ 'ಗೂಳಿ'ಗೆ. ನಮ್ಮ ಹೀರೋಗಳಿಗೂ ಇಂತಹ ಪಾತ್ರಗಳ ನಿರ್ವಹಣೆ ಲೀಲಾಜಾಲ. ಇವರ ವಿಚಿತ್ರ ಮ್ಯಾನರಿಸಂ ನೋಡಿ ನಿಜ ರೌಡಿಗಳು ನಾಚಬೇಕು! ಸುದೀಪ್ ಅಭಿನಯ ಚಿತ್ರಕ್ಕೆ ಪೂರಕವಾದರೂ ಸಹೃದಯ ಪ್ರೇಕ್ಷಕರ ಎದೆಗೆ ಕೊಳ್ಳಿಯಿಟ್ಟಂತಾಗುತ್ತದೆ!

ಚಿತ್ರ ಮುಗಿಸೋಕೆ ಒಂದು ಸೆಂಟಿಮೆಂಟ್ ಟಚ್ ಬೇಕಲ್ಲ. ಲಾಂಗು ಮಚ್ಚು ಕೆಳಗಿಟ್ಟ 'ಗೂಳಿ' ಮೆಚ್ಚಿದ ನಲ್ಲೆಯೊಂದಿಗೆ ಹಸೆಮಣೆ ಏರುವಾಗಲೇ ಮತ್ತೆ ಧಾಳಿಗೀಡಾಗಿ ಆತ ಜೈಲು ಪಾಲಾದರೆ,



ಗಾಯಗೊಂಡ ನಾಯಕಿ ಮಾನಸಿಕ ಅಸ್ವಸ್ಥಳಾಗುತ್ತಾಳೆ.

ಅಂತಿಮವಾಗಿ ಜೈಲಿನಿಂದ ಹೊರಬಂದು ಮಾನಸಿಕ ರೋಗಿಯೊಂದಿಗೆ ಬಾಳುವ ಆಸೆಗೂ ರೌಡಿಗಳು ಅಡ್ಡಬರುತ್ತಾರೆ. ಆದರೆ ಆತನ ಕರುಣಾಜನಕ ಸ್ಥಿತಿ ನೋಡಿ ಅವರ ಕಣ್ಣಲ್ಲೂ ನೀರು! 'ಗೂಳಿ' ಬಾಳು ಹಸನಾಗಲೆಂದು ಹರಸಿ ಆನಂದಬಾಷ್ಪದೊಂದಿಗೆ ಬೀಳ್ಕೊಡುತ್ತಾರೆ. ಇಲ್ಲಿಗೆ ಸಿನಿಮಾ ಮುಕ್ತಾಯ.

ನಮ್ಮ ಸಿನಿಮಾ ಮಂದಿಗೆ ರೌಡಿಗಳು ಯಾವತ್ತೂ ಒಳ್ಳೆಯವರೇ! 'ಪಾಪ, ಸನ್ನಿವೇಶ ಅವರನ್ನು ಈ ರೀತಿ ಮಾಡಿರುತ್ತದೆ' ಎಂಬುದು ಅವರ ವಾದ. ಹೆಣ್ಣು ಎಂದರೆ ಇವರಿಗೆ ಅಪಾರ ಗೌರವ- 'ಕತ್ತಲಾಗೋ ಮುಂಚೆ ಮನೆ ಸೇರಿಕೋ' ಎಂದು ಯುವತಿಗೆ ಬುದ್ದಿ ಹೇಳೋದಲ್ಲದೇ ಹಾಕಿಕೊಳ್ಳೋ ಬಟ್ಟೆ ಬಗ್ಗೆಯೂ ಕಾಮೆಂಟ್ ಇದೆ ಈ 'ಗೂಳಿ'ಯಿಂದ. ತಾನು ಕೆಟ್ಟು ಕೆರ ಹಿಡಿದಿದ್ದರೂ ಉಳಿದೋರನ್ನು ನೆಟ್ಟಗೆ ಮಾಡೋ ಉಸಾಬರಿ ಬೇರೆ!

ರೌಡಿಗಳ ಗುಣಗಾನ ಮಾಡೋ ಇಂತಹ ಐಡಿಯಾ ಹೊಳೆಯುವ ನಮ್ಮ ನಿರ್ದೇಶಕರಿಗೆ ಶಹಬ್ಬಾಸ್ ಹೇಳಲೇಬೇಕು. ಆದಿಯಿಂದ ಅಂತ್ಯದವರೆಗೂ ಅವರನ್ನು ಹಾಡಿ, ಹೊಗಳಿ, ಮೆರೆಸಿ ಕೊನೆಗೆ ಜನರಿಗೆ ಸಮಾಧಾನಿಸಲು 'ರೌಡಿಸಂನಿಂದ ಉಳಿಗಾಲವಿಲ್ಲ' ಎಂಬ 'ಅದ್ಭುತ ಸಂದೇಶ' ನೀಡಿಯೇ ಬಿಡುತ್ತಾರೆ.

ಸೆನ್ಸಾರ್ ಮಂಡಳಿಯವರು ಈ ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ನೀಡಿದ್ದಾರೆ. ಇದರಿಂದ ನಿಮಗೆ ಬೇಜಾರಾಗಿಲ್ವೆ ಎಂದು ನಿರ್ದೇಶಕರನ್ನು ಕೇಳಿದರೆ 'ಒಳ್ಳೆದೇ ಆಯ್ತಲ್ಲ ಸಾರ್. ಪಡ್ಡೆ ಹುಡುಗರು ಏನೋ ಇದೆ ಅಂತ ಬರ್ತಾರೆ. ನಮ್ಮ ಕಲೆಕ್ಷನ್ ಜಾಸ್ತಿಯಾಗುತ್ತಲ್ಲ' ಎಂದು ಯಾವುದೇ ನಾಚಿಕೆಯಿಲ್ಲದೇ ಹಲ್ಲು ಕಿರಿಯುತ್ತಾರೆ ಈ ಚಿತ್ರದ ನಿರ್ದೇಶಕ ಪಿ.ಸತ್ಯಾ.

○



ಸೂರ್ಯ ಶಕ್ತಿ ಮತ್ತು ಬೆಳಕಿನ ಕೌತುಕಗಳು

ನಿಸರ್ಗದಲ್ಲಿ ನಮ್ಮ ಸುತ್ತಲೂ ಜರುಗುವ ಹಲವಾರು ಸಾಮಾನ್ಯ ಘಟನೆಗಳಲ್ಲಿ ಆಶ್ಚರ್ಯಕರ ಸಂಗತಿಗಳು ಅಡಗಿಕೊಂಡಿವೆ. ಮೊಬೈಲ್ ಫೋನ್, ಟೆಲಿಫೋನ್ ಅಥವಾ ಅಂಚೆ ಬರುವ ಮೊದಲು ಮನೆಯಲ್ಲಿ ಪಳಗಿಸಿದ ಪಾರಿವಾಳಗಳನ್ನು ಸಂದೇಶ ರವಾನೆಗಾಗಿ ಬಳಸಲಾಗುತ್ತಿತ್ತು. ಅವುಗಳಿಗೆ ದಿಕ್ಕಿನ ಪ್ರಜ್ಞೆ, ಸೂರ್ಯನ ಸ್ಥಾನಪಲ್ಲಟ ಮತ್ತು ತಮ್ಮದೇ ದೇಹದ ಜೈವಿಕ ಗಡಿಯಾರಗಳು ಗುರಿ ಮುಟ್ಟಲು ಆಧಾರವಾಗಿದ್ದವು. ಒಂದು ದಿನದಲ್ಲಿ ಜೀವಿಗಳ ದೇಹದಲ್ಲಿ ಜರುಗುವ ಒಟ್ಟಾರೆ ಕ್ರಿಯೆಗಳು ಜೈವಿಕ ಗಡಿಯಾರಕ್ಕೆ ಕೊಂಡಿಯಾಗಿವೆ. ಜೀವಿಗಳ ಜೈವಿಕ ಗಡಿಯಾರದಲ್ಲಿ ಬೆಳಕು ಮಹತ್ತರ ಪಾತ್ರವಹಿಸುತ್ತದೆ.



ಸೂರ್ಯನ ನಿಧಾನ ಗತಿಯ ಚಲನೆಯನ್ನು ಮನುಷ್ಯನು ನೇರವಾಗಿ ಗ್ರಹಿಸಲು ಸಾಧ್ಯವಿಲ್ಲವಾದರೂ ಪಕ್ಷಿಗಳು ಅದನ್ನು ಗ್ರಹಿಸುವ ಸಾಮರ್ಥ್ಯ ಹೊಂದಿವೆ. ಸೂರ್ಯನ ಸ್ಥಾನ ಬದಲಾದಂತೆ ತನ್ನ ದಿಕ್ಕನ್ನು ಹೊಂದಾಣಿಕೆ ಮಾಡಿಕೊಳ್ಳಲು ಅವುಗಳ ಆಂತರಿಕ ಗಡಿಯಾರ ಸಹಾಯ ಮಾಡುತ್ತದೆ. ಸೂರ್ಯನಲ್ಲದೆ ನಕ್ಷತ್ರಗಳನ್ನೂ ಸಹ ಪಕ್ಷಿಗಳು ಆಧಾರವಾಗಿಸಿಕೊಂಡಿವೆ.

ಎಲ್ಲ ಜೀವಿಯಾಧಾರ ಸೂರ್ಯಶಕ್ತಿ

ಎಲ್ಲ ಜೀವಿಗಳು ತಮ್ಮ ಬೆಳವಣಿಗೆ, ಚಲನೆ, ಪುನರುತ್ಪಾದನೆ ಮತ್ತು ಆಹಾರಕ್ಕೆ ಅವಶ್ಯವಾದ ಶಕ್ತಿಯನ್ನು ಸೂರ್ಯನ ಬೆಳಕು ಮತ್ತು ಶಾಖದಿಂದ ಪಡೆಯುತ್ತವೆ. ಸೂರ್ಯನಿಲ್ಲದೆ ಭೂಮಿಯ ಮೇಲೆ ಯಾವೊಂದು ಜೀವಿಯಿಲ್ಲ. ಪ್ರತಿಯೊಂದು ಜೀವಿಯು ತಾನು ಬದುಕುಳಿಯಲು ಅವಶ್ಯವಾದ ಆಹಾರಕ್ಕಾಗಿ ಒಂದಲ್ಲ ಒಂದು ವಿಧದಲ್ಲಿ ಸೂರ್ಯನ ಮೇಲೆ ಅವಲಂಬಿತವಾಗಿವೆ. ಸಸ್ಯಗಳು ದ್ಯುತಿ ಸಂಶ್ಲೇಷಣೆ ಕ್ರಿಯೆಯ ಮೂಲಕ ನೇರವಾಗಿ ಸೂರ್ಯ ಶಕ್ತಿಯನ್ನು ಉಪಯೋಗಿಸಿಕೊಂಡು ತಮ್ಮ ಆಹಾರ ತಯಾರಿಸಿಕೊಳ್ಳುತ್ತವೆ. ಸೂರ್ಯ ಶಕ್ತಿಯನ್ನು ರಾಸಾಯನಿಕ ಶಕ್ತಿಯನ್ನಾಗಿ ಸಸ್ಯಗಳು ಪರಿವರ್ತಿಸುವ ಕ್ರಿಯೆಗೆ ದ್ಯುತಿ ಸಂಶ್ಲೇಷಣೆ ಎಂದು ಹೆಸರು. ಇಡೀ ಭೂಮಂಡಲದ ಜೀವಿಗಳ ಅಸ್ತಿತ್ವದ ಕೊಂಡಿಯ ಆಧಾರ ಇಲ್ಲಿಂದಲೇ ಆರಂಭ. ಹೀಗೆ ನೇರವಾಗಿ ಸೂರ್ಯ ಶಕ್ತಿಯಿಂದ ಆಹಾರ ತಯಾರಿಸಲಾಗದ ಜೀವಿಗಳು ಸಸ್ಯಗಳ ಮೇಲೆ ಅವಲಂಬಿತವಾಗಿವೆ.

ನಿಸರ್ಗದಲ್ಲಿ ಬೆಳಕಿನ ಕೌತುಕಗಳು

ಚಿಟ್ಟೆಗಳು, ಪಕ್ಷಿಗಳು ಮತ್ತು ಪ್ರಾಣಿಗಳ ಬಣ್ಣ ಸೂರ್ಯನ ಬೆಳಕಿನ ಬಣ್ಣದ ಮೇಲೆ ನಿಂತಿದೆ. ಪ್ರಾಣಿಗಳು ತಮ್ಮ ದೇಹದಲ್ಲಿ ಹೆಚ್ಚಿನ ಕ್ಯಾಲ್ಸಿಯಂ ಸಂಗ್ರಹಿಸಲು ಸೂರ್ಯನ ಬೆಳಕೇ ಬೇಕು. ಉದಾಹರಣೆಗೆ: ಬೆಳಕಿನಲ್ಲಿ ಬೆಳೆದ ಪಕ್ಷಿಗಳು ಹೆಚ್ಚು ಕಠಿಣ ಮತ್ತು ಗಟ್ಟಿ ದೇಹವನ್ನು ಕವಚಗಳಂತೆ ಹೊಂದಿವೆ..

ಪಕ್ಷಿಗಳ ವಾರ್ಷಿಕ ವಲಸೆ, ಗೂಡು ಸೇರುವುದು, ಆಹಾರೋತ್ಪಾದನೆ, ಲೈಂಗಿಕ ಕಾಲ ಇವೆಲ್ಲ ಬೆಳಕಿನಿಂದ ಶುರುವಾಗುತ್ತವೆ. ಪಕ್ಷಿಗಳು ಆಹಾರ ಮತ್ತು ಸಂಸ್ಕರಣೆಯಿಂದ ವಿಟಮಿನ್ ಡಿ3 ಎಂಬುದನ್ನು ತಮ್ಮ ಚರ್ಮದ ಮೂಲಕ ಪಡೆಯುತ್ತವೆ. ವಿಟಮಿನ್ ಡಿ3 ತಯಾರಿಕೆಗೆ ಸೂರ್ಯನ ಬೆಳಕಿನಲ್ಲಿರುವ ಅಲ್ಟ್ರಾ ವಯಲೆಟ್ ಬೆಳಕು ಅತ್ಯವಶ್ಯ. ಹಾಗೆಯೇ ಗಂಡು ಪಕ್ಷಿಗಳು ಹಾಡತೊಡಗುವುದು ಬೆಳಕು ಅವುಗಳ ಮೇಲೆ ಬಿದ್ದ ಮೇಲೆಯೆ.



ಹಿಮದ ಮೊಲಗಳು ಬೇಸಿಗೆಯಲ್ಲಿ ಕಂದು ಬಣ್ಣದ ಕೂದಲುಗಳನ್ನು ಹೊಂದಿದ್ದರೆ, ಶರದ್ಕಾಲದಲ್ಲಿ ಬಿಳಿ ಕೂದಲು ಮೂಡಲಾರಂಭಿಸಿ, ಚಳಿಗಾಲದ ಕೋಟ್ ಧರಿಸಿದಂತೆ ಅವು ಕಂಡುಬರುತ್ತವೆ ಅಥವಾ ಹಿಮದ ಬೆಳಕಿನಲ್ಲಿ ತಕ್ಷಣವೇ ಕಾಣಸಿಗುವುದಿಲ್ಲ. ಹಲ್ಲಿಯೊಂದರ ದೈನಂದಿನ ಚಟುವಟಿಕೆಯನ್ನು ಬೆಳಕು ಹೇಗೆ ನಿರ್ಧರಿಸಿದೆಯೆಂದು ತಿಳಿಯುವುದಾದರೆ: ರಾತ್ರಿ 1.00 ಘಂಟೆಗೆ ಚಳಿಯಿರುವುದರಿಂದ ಹಲ್ಲಿ ತನ್ನ ಬಿಲದಲ್ಲಿ ಮುದುಡಿ ನಿದ್ರಿಸುತ್ತದೆ, ಬೆಳಿಗ್ಗೆ 8ಘಂಟೆಗೆ ಅದು ಬಿಲದಿಂದ ಹೊರಬಂದು ಕಲ್ಲಿನ ಮೇಲೆ ಅಂಗಾತ ಬಿದ್ದು ಬಿಸಿಲು ಕಾಯುತ್ತದೆ, 10ಘಂಟೆ ಸುಮಾರಿಗೆ ಆಹಾರಕ್ಕಾಗಿ ಬೇಟೆಯಾಡಲು ಹೊರಡುತ್ತದೆ, 12ರ ಮಧ್ಯಾಹ್ನಕ್ಕೆ ಬಿಸಿಲೇರಿದಂತೆ ಓಡಿಹೋಗಿ ನೆರಳಿಗಾಗಿ ತನ್ನ ಬಿಲ ಸೇರುತ್ತದೆ, 5ಘಂಟೆ ಹೊತ್ತಿಗೆ ಬಿಸಿಲ ರವ ಇಳಿದಂತೆ ಮತ್ತೆ ಬೇಟೆಯಾರಂಭಿಸುತ್ತದೆ, ರಾತ್ರಿ 9ಕ್ಕೆಲ್ಲ ಚಳಿಯಿಂದ ಥರಗುಟ್ಟಿ ಬಿಲಕ್ಕೆ ವಾಪಸಾಗಿ ನಿದ್ರೆಗೆ ಜಾರುತ್ತದೆ.

ಸೂರ್ಯನೇ ದಿಕ್ಕು ದಿಸೆ

ಸಾವಿರಾರು ಮೈಲು ದೂರದೇಶಗಳಿಗೆ ಹಾರಾಡಿ ಬರುವ ಪಕ್ಷಿಗಳಿಗೆ ಸೂರ್ಯನೇ ದಿಕ್ಕು. ಸೂರ್ಯನ ಸ್ಥಾನ, ಪಥ, ಬೆಳಕು ಇವೆಲ್ಲವೂ ಅವುಗಳಿಗೆ ಜೀವನಾಧಾರ. ಪೂರ್ವೋತ್ತರ ಅಮೇರಿಕಾದಲ್ಲಿ 'ಮೊನಾರ್ಕ್' ಎಂಬ ಚಿಟ್ಟೆಗಳು ಶರದ್ಕಾಲದಲ್ಲಿ ಕೆನಡಾದವರೆಗೂ ಮತ್ತೂ ಮುಂದುವರಿದು ಮಧ್ಯ ಮೆಕ್ಸಿಕೋ ದೇಶದವರೆಗೂ ಹಾರಾಡಿ ಸುಮಾರು 3500ಕಿ.ಮೀ ದೂರ ತಲುಪಿ ಮತ್ತೆ ವಾಪಾಸು ತಮ್ಮೂರಿಗೆ ಹಿಂದಿರುಗುತ್ತವೆ. ಹಾಗೆಯೇ ಆರ್ಕ್ಟಿಕ್ ಪಕ್ಷಿಗಳು ಬಹಳ ದೂರ ಹಾರುವುದರಲ್ಲಿ ತುಂಬಾ ದಾಖಲೆ ಹೊಂದಿವೆ. ಅವು ಶರದ್ಕಾಲದಲ್ಲಿ ಆರ್ಕ್ಟಿಕ್ ಪ್ರದೇಶದಿಂದ ಹಾರಿ ಅಂಟಾರ್ಕ್ಟಿಕ್ ಖಂಡವನ್ನು ತಲುಪಿ ವರ್ಷವೊಂದರಲ್ಲಿ ಸುಮಾರು 35000 ಕಿ.ಮೀ ದೂರ ಕ್ರಮಿಸಿ ಮತ್ತೆ ವಾಪಸಾಗುತ್ತವೆ.

ಹೀಗೆ ಸಕಲ ಚರಾಚರ ಜೀವಿಗಳಿಗೆಲ್ಲ ಸೂರ್ಯನೇ ದಿಕ್ಸೂಚಿ.

○

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH